ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೭ನೇ ಮಾರ್ಚಿ ೧೯೮೦ರಂದು. ಫಾಲ್ಗುಣ ೧೬, ೧೯೦೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದ್ದರು.]

ವಿತ್ತೀಯ ಕಾರ್ಯ ಕಲಾಪಗಳು.

ಬೇಡಿಕೆ ಕ್ರ. ಸಂ. ೮–ರೇಷ್ಮೆ ಇಲಾಖೆ
೭–ಸಣ್ಣ ಪ್ರಮಾಣದ ಕೈಗಾರಿಕೆಗಳು
೫–ಕೈಗಾರಿಕೆ
} ಮಂತ್ರಿಗಳಿಂದ ಉತ್ತರ

ಶ್ರೀ ಎ. ಲಕ್ಷ್ಮೀಸಾಗರ್ (ಸನ್ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ರೇಷ್ಮೆ ಖಾತೆಗೆ ಸಂಬಂಧಪಟ್ಟಂತೆ ಬೇಗ ಉತ್ತರ ಮುಗಿಸಿದರೆ ಒಳ್ಳೆಯದು. ಏತಕ್ಕೆಂದರೆ ಇವತ್ತು ಇನ್ನೊಂದು ಬೇಡಿಕೆ ಮೇಲೆ ಚರ್ಚೆ ನಡೆದು ಅದು ಕೂಡ ಇವತ್ತೇ ಮುಗಿಯಬೇಕಾಗಿದೆ.

ಅಧ್ಯಕ್ಷರು.—ನಾನು ಎಲ್ಲರಲ್ಲಿಯೂ ಕೇಳಿಕೊಳ್ಳುವುದೇನೆಂದರೆ, ಎಲ್ಲರೂ ಸಹಕರಿಸಿ, ಬೇಡಿಕೆಗಳನ್ನು ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ಸನ್ಮಾನ್ಯ ರೇಷ್ಮೆ ಖಾತೆಯ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ರೇಷ್ಮೆ ಖಾತೆಗೆ ಸಂಬಂಧಪಟ್ಟ ಬೇಡಿಕೆ ಮೇಲೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಶ್ರೀಯುತ ರಾಜುಗೌಡರು ಇದರ ಚರಿತ್ರೆ ಮತ್ತು ಹಿನ್ನಲೆಯನ್ನು ಕೂಡ ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಬಡವರ ಕುಟುಂಬಗಳಿಗೆ ಜೀವನ ಆಧಾರಕ್ಕೆ ಮೂಲಾಧಾರಕವಾಗಿರತಕ್ಕ ಕಸಬು ರೇಷ್ಮೆ ಉದ್ಯೋಗ. ಈ ಉದ್ಯೋಗದಲ್ಲಿ ಬೆಳೆಗಾರರಿಂದ ಹಿಡಿದು. ದಾರದಿಂದ ಬಟ್ಟೆ ನೇಯುವವರೆಗೆ ಲಕ್ಷಾಂತರ ಕುಟುಂಬಗಳು ಹೊಟ್ಟೆಪಾಡಿಗಾಗಿ ಈ ಕಸಬನ್ನು ಅವಲಂಬಿಸಿದೆ. ಇಡೀ ವಿಶ್ವದಲ್ಲಿ ನನ್ನ ಸ್ನೇಹಿತರು ಹೇಳಿದ ಹಾಗೆ ಭಾರತವು ರೇಷ್ಮೆಯ ಉತ್ಪಾದನೆ ದೃಷ್ಟಿಯಿಂದ ಮೂರನೇ ಸ್ಥಾನದಲ್ಲಿದ್ದರೂ ಕೂಡ ಅದರಲ್ಲಿ ಕರ್ನಾಟಕದ ಪಾಲು ಸಿಂಹಪಾಲು. ಶೇಕಡ ೮೦ರಷ್ಟು ರೇಷ್ಮೆಯನ್ನು ಕೊಡುಗೆಯಾಗಿ ನೀಡುತ್ತಿರುವುದು ನಮಗೆ ಹೆಮ್ಮೆಯನ್ನುಂಟು ಮಾಡಿದೆ ಈ ಉದ್ಯಮವನ್ನು ದೊಡ್ಡದಾಗಿ ಮಾಡಬೇಕು ಹಾಗೂ ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಬೇಕೆಂಬ ದೃಷ್ಟಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಕಿಕೊಂಡ ಒಂದು ನಿಯೋಜಿತ ಕಾರ್ಯಕ್ರಮದ ಫಲವಾಗಿ ನಾವು ಈ ಸಾಧನೆಯನ್ನು ಮಾಡಲು ಸಾಧ್ಯವಾಯಿತು. ಈ ಬಗ್ಗೆ ವಿಶ್ವ ಬ್ಯಾಂಕ್ ನೆರವಿನ ಯೋಜನೆಯು ಇನ್ನೇನು ಕಾರ್ಯರೂಪಕ್ಕೆ ಬರುತ್ತಲಿದೆ. ಬಹಳ ಸಂತೋಷದ ವಿಚಾರವೇನೆಂದರೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಊಹೆಗೂ ಮೀರಿದ ಒಂದು ವೇಗದಲ್ಲಿ ರೇಷ್ಮೆ ಉತ್ಪತ್ತಿಯಾಗಿದೆ ಎಂದು ಭಾವಿಸುತ್ತೇನೆ. ಎರಡು ಸಾವಿರ ಮೆಟ್ರಿಕ್ ಟನ್ ಇದ್ದಂಥ ನಮ್ಮ ಉತ್ಪಾದನೆ ೪೦೫೫ ಮೆಟ್ರಿಕ್ ಟನ್‌ನಷ್ಟು

ಕರ್ನಾಟಕದಲ್ಲೇ ಆಗುತ್ತಿದೆ. ಈ ಉದ್ಯಮವನ್ನು ಕುರಿತು ನನ್ನ ಸ್ನೇಹಿತರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ತಾವು ಅಪ್ಪಣೆ ಕೊಟ್ಟರೆ ಸಂಕ್ಷೇಪವಾಗಿ ಉತ್ತರ ಕೊಡಲಿಕ್ಕೆ ಇಷ್ಟ ಪಡುತ್ತೇನೆ.

ಮೊದಲನೆಯದಾಗಿ, ಬಹಳ ಜನರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದೇನೆಂದರೆ ಈ ಉದ್ಯಮಕ್ಕೆ ಸಂಬಂಧಪಟ್ಟಂಥ ಕಾನೂನಿನ ಪ್ರಕಾರ, ನಿಯಮಾವಳಿ ಪ್ರಕಾರ ಇರುವಂಥ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಪ್ರಕಾರ ಈ ಇಲಾಖೆಯು ಮಾರುಕಟ್ಟೆಗಳಲ್ಲಿ ಮತ್ತು ಉಣ್ಣೆಯ ಕೇಂದ್ರಗಳಲ್ಲಿ ವಸೂಲಾದಂಥ ಕಮಿಷನ್ ಅಥವಾ ಟ್ಯಾಕ್ಸ್ ಏನಿದೆ ಇದನ್ನು ವಸೂಲು ಮಾಡಿ ಬೇರೆ ಕೆಲಸಗಳಿಗೆ ಖರ್ಚು ಮಾಡಿದ್ದಾರೆ ಎಂಬುದು. ಶ್ರೀ ರಾಜೂಗೌಡರ ೩೦ ಕೋಟಿ ಎಂದು ಹೇಳಿದರು. ಮಾನ್ಯ ಮಾನ್ಯ ವೆಂಕಟರಾಮಯ್ಯನವರು ೪೦ ಕೋಟಿ ಎಂದರು. ಅಂಕಿಅಂಶಗಳ ವಾಸ್ತವಿಕತೆ ದೃಷ್ಟಿಯಿಂದ ಎರಡೂ ಸರಿಯಲ್ಲ.

ಸನ್ಮಾನ್ಯ ಅಧ್ಯಕ್ಷರೇ, ಈ ವರ್ಷದ ಡಿಸೆಂಬರ್‌ವರೆಗೆ ೨೩.೫೦ ಲಕ್ಷ ರೂಪಾಯಿಗಳು ವಸೂಲಾಗಿದೆ. ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ತೆರಿಗೆಯನ್ನು ವಸೂಲು ಮಾಡಿದ್ದರಿಂದ ಮತ್ತು ರೇಷ್ಮೆ ಉಣ್ಣೆ ಕೇಂದ್ರದಲ್ಲಿ ತೆರಿಗೆ ವಸೂಲು ಮಾಡಿದ್ದರಿಂದ ಈ ಹಣ ಬಂದಿದೆ. ಈ ಹಣದಲ್ಲಿ ಒಂದೇ ಒಂದು ಚಿಕ್ಕಾಸನ್ನೂ ಸಹ ಯಾವುದೇ ಬೇರೆ ಉದ್ದೇಶಕ್ಕೆ ಖರ್ಚು ಮಾಡಿಲ್ಲ. ರೇಷ್ಮೆ ಅಭಿವೃದ್ಧಿ ಉದ್ದೇಶಕ್ಕೋಸ್ಕರ ಇಲ್ಲಿಯವರೆಗೆ ೨೮,೨೫,೫೦೩-೧೩ ರೂ.ಗಳನ್ನು ಖರ್ಚು ಮಾಡಿದ್ದೇವೆ. ಉಳಿದಿರುವ ಹಣವನ್ನು ಇನ್‌ಟ್ಯಾಕ್ಟಾಗಿ ಉಳಿಸಿಕೊಳ್ಳುವುದು ಹೇಗೆ ಎಂದು ಗೊತ್ತಿದೆ. I assure the House that we are not going to spend even a single paise for any other purpose other than the Sericulture Department. ಉಳಿದಿರುವ ಹಣವನ್ನು ಯಾವುದೇ ಉದ್ದೇಶಕ್ಕೆ ಖರ್ಚು ಮಾಡುವುದಿಲ್ಲವೆಂದು ಸನ್ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಇನ್ನು ಎರಡನೆಯ ವಿಷಯವನ್ನು ಮಾನ್ಯ ರಾಜೂಗೌಡರು ಬಹಳ ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ನೂಲು ಬಿಚ್ಚುವವರು ಬೆಲೆ ಬಿದ್ದುಹೋಗಿದೆ ಎಂದು ಮುಷ್ಕರ ಹೂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ ಇದು ನನ್ನ ಗಮನಕ್ಕೆ ಬಂದಿದೆ. ರಾಜ್ಯದಲ್ಲಿ ೨೫ ಸಾವಿರ ಜನರು ನೂಲು ಬಿಚ್ಚುವಂಥ ಉದ್ಯಮದಲ್ಲಿ ತೊಡಗಿದ್ದು, ಅದರಲ್ಲಿ ಸ್ವಲ್ಪ ಜನರು ಮೊನ್ನೆ ದಿವಸ ಮುಷ್ಕರವನ್ನು ಹೂಡಿ ವಿಧಾನಸೌಧಕ್ಕೆ ಮೆರವಣಿಗೆಯಲ್ಲಿ ಬಂದಿದ್ದರು. ಇದಕ್ಕೆ ಕಾರಣ ಏನೆಂದರೆ ಬೆಲೆ ಕಡಿಮೆಯಾಗಿರುವುದು. ಬೆಲೆ ಕಡಿಮೆಯಾಗಿದೆಯೋ ಇಲ್ಲವೇ ಎಂಬ ಬಗ್ಗೆ ಅಂಕಿ ಅಂಶ ಕೊಡುತ್ತೇನೆ. ರೇಷ್ಮೆ ಬೆಳೆ ಫಿಲೇಚರ್‌ಗೆ

೧೯೮೨-೮೩ ರಲ್ಲಿ ೩೯೬ ರೂ. ಇತ್ತು

೧೯೮೩-೮೪ ರಲ್ಲಿ ೪೭೩ ರೂ. ಗಳು

೧೯೮೪-೮೫ ರಲ್ಲಿ ೫೦೬ ರೂ.ಗಳು ಮತ್ತು

೧೯೮೫-೮೬ ರಲ್ಲಿ ೫೩೨ ರೂ. ಗಳಿತ್ತು.

ಅಂದರೆ, ಕಳೆದ ವರ್ಷಕ್ಕೆ ಹೋಲಿಸಿದರೂ ಕೂಡ ೨೮ ರೂ. ಜಾಸ್ತಿಯಾಗಿದೆ. ಆದ್ದರಿಂದ ರೇಷ್ಮೆ ನೂಲು ಬಿಚ್ಚುವವರು ಹೇಳುವ ಬೆಲೆ ಕಡಿಮೆಯಾಗಿದೆ ಎಂಬುದು ನಿಜವಲ್ಲ. ಕಳೆದ ಎಲ್ಲ ವರ್ಷಗಳಿಗಿಂತ ಈ ವರ್ಷದ ಬೆಲೆ ೫೩೨ ಜಾಸ್ತಿ ಇರುವುದರಿಂದ ಮುಷ್ಕರದ ಕಾರಣ ಸರಿಯಲ್ಲ ಎಂಬುದನ್ನು ಸನ್ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ,

ಇದರ ಜೊತೆಗೆ ಗೂಡಿನ ಬೆಲೆ ೧೯೮೪-೮೫ ರಲ್ಲಿ, ಏಪ್ರಿಲ್‌ನಿಂದ ಜೂನ್‌ವರೆಗೆ, ಮ್ಯಾಕ್ಸಿಮಮ್ ಪ್ರೈಸ್ ಇದ್ದುದು ೪೩ ರೂ, ಕನಿಷ್ಠ ಬೆಲೆ ಇದ್ದುದು ೩೫ ರೂ. ಈ ವರ್ಷ ಕನಿಷ್ಠ ಬೆಲೆ ೩೬ ರೂ.ಗಳು ಮ್ಯಾಕ್ಸಿಮಮ್ ಬೆಲೆ ೪೬ ರೂ.ಗಳು ಇದೆ. ಆದ್ದರಿಂದ ಗೂಡಿನ ಬೆಲೆಯಾಗಲೀ, ರೇಷ್ಮೆ ದಾರದ ಬೆಲೆಯಾಗಲೀ ೮೫-೮೬ರ ಯಾವುದೇ ತಿಂಗಳು ತೆಗೆದುಕೊಂಡರೂ ಅದರಲ್ಲಿ ಕಡಿಮೆಯಾಗಿಲ್ಲ. ಮಾನ್ಯ ರಾಜೂಗೌಡರಿಗೆ ಸಂಬಂಧಪಟ್ಟಂತೆ ಚಾಮರಾಜನಗರದಲ್ಲೇ ೮೪-೮೫ರಲ್ಲಿ ೧೬ ರೂ. ಬೆಲೆ ಇದ್ದುದು ಈಗ ೨೪ ರೂ. ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ದಾರ ಬಿಚ್ಚುವವರು ಹೂಡಿರುವ ಮುಷ್ಕರ ಸಕಾರಣವಾಗಿಲ್ಲವೆಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ, ಮತ್ತೊಂದು ಪ್ರಮುಖ ವಿಷಯವನ್ನು ಸನ್ಮಾನ್ಯ ರಾಜೂಗೌಡರು ಪ್ರಸ್ತಾಪ ಮಾಡಿದ್ದಾರೆ, ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಏನಿದೆ ಅದರಿಂದ ಸಾಧನೆಯೇನೂ ಆಗಿಲ್ಲ ಎಂದು ಅವರು ಹೇಳಿದರು. ಈ ಮಂಡಲಿಯನ್ನು ಸ್ಥಾಪನೆ ಮಾಡಿದಂಥ ಉದ್ದೇಶ ರೇಷ್ಮೆ ಬೆಳೆಯಲ್ಲಿ ಏರಿಳಿತಗಳು ಆಗದ ರೀತಿಯಲ್ಲಿ ಒಂದು ಸ್ತಿಮಿತದಲ್ಲೇ ರೇಷ್ಮೆ ಬೆಲೆಯನ್ನು ಇಟ್ಟುಕೊಳ್ಳಬೇಕೆಂಬುದು ಆಗಿದೆ. ಯಾವಾಗ ಬೆಲೆ ಕುಂಠಿತವಾಗುತ್ತಾ ಹೋಗುತ್ತದೋ ಅಂತಹ ಸಂದರ್ಭದಲ್ಲಿ ಈ ಮಾರಾಟ ಮಂಡಲಿ ಯಾವುದನ್ನೂ ಪರ್ಚೇಸ್ ಮಾಡುವ ಅಗತ್ಯವಿಲ್ಲ. ಯಾವಾಗ್ಯಾಗ ಬೆಲೆ ಬಿದ್ದು ಹೋಗುತ್ತದೆಯೋ ಅಂತಹ ಸಂದರ್ಭದಲ್ಲಿ ಉತ್ಪಾದನೆಗೆ ಸಹಾಯ ಮಾಡುವ ದೃಷ್ಟಿಯಿಂದ ಕೊಂಡುಕೊಳ್ಳಬೇಕಾಗುತ್ತದೆ.

This is the main object of the KSMB. KSMB purchases silk when there is no proper price so as to avoid distress sale.

ಆದ್ದರಿಂದ ಸನ್ಮಾನ್ಯ ಸದಸ್ಯರು ಬಹಳ ಸಲ ಇದನ್ನು ಕೇಳಿದ್ದಾರೆ. ನಾನು ಬಹಳ ಸಲ ಹೇಳಿದ್ದೇನೆ. ಬೆಲೆಯನ್ನು ಸ್ಥಿಮಿತದಲ್ಲಿಟ್ಟುಕೊಳ್ಳಬೇಕೆಂಬ ಮೂಲ ಉದ್ದೇಶದಿಂದ ಇದನ್ನು ಮಾಡಿದ್ದು ಅಷ್ಟೇ. ಆದರೆ ಯಾವ ಉದ್ದೇಶದಿಂದ ಈ ಮಂಡಲಿಯನ್ನು ಸ್ಥಾಪಿಸಲಾಯಿತೋ ಅದನ್ನು ಈಡೇರಿಸುವುದಕ್ಕಾಗಿ ಇನ್ನೂ ಚುರುಕಾಗಿ ಕೆಲಸ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ೧೯೮೫–೮೬ ರಲ್ಲಿ ಈ ಉದ್ಯಮದಲ್ಲಿ ೧೫ ಲಕ್ಷ ರೂ. ಬಿಫೋರ್ ಟ್ಯಾಕ್ಸ್ ಆದಾಯ ಬಂದಿದೆ. ಕರ್ನಾಟಕ ರೇಷ್ಮೆ ಮಹಾಮಂಡಳಿ ತನ್ನ ಉದ್ದೇಶ ಸಾಧನೆಗಾಗಿ ಕೆಲಸ ಮಾಡುತ್ತಿದೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ರೈತರಿಗೆ ರೋಗರಹಿತ ಮೊಟ್ಟೆಗಳನ್ನು ಕೊಡುವುದರಲ್ಲಿ ಸಂಪೂರ್ಣವಾಗಿ ಇಲಾಖೆ ಯಶಸ್ವಿಯಾಗಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ ಈ ಒಂದು ಉದ್ಯಮದಲ್ಲಿ ತೊಡಗಿರುವಂತಹ ಜನರಿಗೆ ಇಲಾಖೆ ರೋಗರಹಿತ ಮೊಟ್ಟೆಗಳನ್ನು ಒದಗಿಸುವುದು ಮೊದಲನೆಯ ಕರ್ತವ್ಯ. ಈ ಒಂದು ಕಾರ್ಯ ನಿರ್ವಹಿಸುವುದರ ದಿಕ್ಕಿನಲ್ಲಿ ಇಲಾಖೆ ತನ್ನ ಕೆಲಸ ಮಾಡಿಕೊಂಡು ಹೋಗುತ್ತಿದೆ. ಇವತ್ತು ರಾಜ್ಯದಲ್ಲಿ ಸುಮಾರು ೨೦ ಕೋಟಿ ಮೊಟ್ಟೆಗಳು ಬೇಕಾಗಿದೆ. ಇವತ್ತು ೨೦ ಕೋಟಿ ಮೊಟ್ಟೆಗಳಲ್ಲಿ ರಾಜ್ಯ ಇಲಾಖೆಯಿಂದ ನೂರಕ್ಕೆ ೫೦ ರಷ್ಟು ಅಂದರೆ, ೧೦ ಕೋಟಿ ಮೊಟ್ಟೆಗಳನ್ನು ಕೊಡುವುದಕ್ಕೆ ಸಾಧ್ಯವಾಗಿದೆ. ವಿಶ್ವಬ್ಯಾಂಕ್ ನೆರವಿನಿಂದ ೧೦ ಬೃಹತ್ ಬಿತ್ತನೆ ಕೋಠಿಗಳ ಕೆಲಸ ಸಂಪೂರ್ಣ ಆಗಿದೆ. ಚನ್ನಪಟ್ಟಣದಲ್ಲಿ ಕಟ್ಟುತ್ತಿರುವ ಕಟ್ಟಡವನ್ನು ಬಿಟ್ಟರೆ, ಉಳಿದ ೯ ಬಿತ್ತನೆ ಕೋಠಿಗಳ ಕೆಲಸ ಮುಗಿದು ಕಾರ್ಯಾರಂಭವಾಗಿದೆ. ಈ ಒಂದು ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರುವಂಥ ನೌಕರರ ಶ್ರಮ ಸಾರ್ಥಕವಾಗಿದೆಯೆಂದು ಭಾವಿಸಿಕೊಳ್ಳುತ್ತೇನೆ. ನಮ್ಮ ಜಿಲ್ಲೆ ತುಮಕೂರಿನಲ್ಲಿರುವಂಥ ಬಿತ್ತನೆ ಕೋಠಿಯಲ್ಲಿ ೧೦೦ ಗೂಡಿಗೆ ಶೇಕಡ ೧೦–೧೨–೯ ಕನಿಷ್ಟ; ಗರಿಷ್ಟ ೧೫ ಕೆ. ಜಿ. ಬರುತ್ತಿತ್ತು. ೮೫–೮೬ರಲ್ಲಿ ಇದನ್ನು ಹೋಲಿಸಿದರೆ ಶೇಕಡ ೪೬ ರವರೆಗೂ ಹೋಗಿದೆ, ಕಳೆದ ತಿಂಗಳು ೩೪ ಪರ್ಸೆಂಟ್ ಬಂದಿದೆ, ಈ ತಿಂಗಳು ಕೂಡ ೩೪ ಪರ್ಸೆಂಟ್ ಬಂದಿದೆ ಅದೇ ಮೊಟ್ಟೆ. ಅದೇ ಜನ, ಅದೇ ಗೂಡು. ೧೦ ಪರ್ಸೆಂಟ್ ಬರುತ್ತಿದ್ದುದ್ದು, ಇವತ್ತು ೩೦ ಪರ್ಸೆಂಟಿಗೆ ಏರಿದೆ. ನಾನು ಯಾವುದೇ ಜಿಲ್ಲೆಗೆ ಪ್ರವಾಸ ಹೋದರೂ ಬೆಳಿಗ್ಗೆ ೪–೩೦ ರಿಂದ ರಾತ್ರಿ ೮ ಗಂಟೆಯವರೆಗೆ ಬಿತ್ತನೆ ಕೋಠಿಗಳಿಗೆ ಭೇಟಿ ಕೊಡುತ್ತೇನೆ. ನಮ್ಮ ಕಡೆ ಒಂದು ಮಾತಿದೆ. ಮೊಟ್ಟೆ ತಿಂದವರಿಗೆ ಮರಿ ಇಲ್ಲ, ಬೀಜ ತಿಂದವರಿಗೆ ಸೊಪ್ಪಿಲ್ಲ, ಈ ಒಂದು ಉದ್ಯಮದಲ್ಲಿ ಉತ್ತಮವಾದಂಥ ಕೆಲಸವಾಗಬೇಕಾದರೆ, ಬೆಳೆಗಾರರಿಗೆ ಒಳ್ಳೆಯ ಬೆಲೆ ಸಿಗಬೇಕಾದರೆ, ರೇಡಿಯೋ ಟಾಕ್ ಆಗಲಿ, ಟಿ.ವಿ. ಟಾಕ್ ಆಗಲೀ ಜಾಹಿರಾತುಗಳಾಗಲೀ ಇವುಗಳ ಅವಶ್ಯಕತೆ ಇಲ್ಲ. ರೈತನಿಗೆ ಉತ್ತಮವಾದ ಬೆಲೆ ಬರುತ್ತದೆಂದರೆ ಯಾರು ಹೇಳದೇ ಹೋದರೂ ಅವನೇ ಬೆಳೆ ಹಾಕುತ್ತಾನೆ. ಬೆಲೆ ಬರದೇಹೋದರೆ, ಬೆಲೆ ಸಿಗದೇ ಹೋದರೆ, ರೈತನ ಕಾಲು ಕಟ್ಟಿದರೂ ಬೆಳೆ ಹಾಕುವುದಕ್ಕೆ ಹೋಗುವುದಿಲ್ಲ. ಈ ಒಂದು ಅಂಶವನ್ನೇ ಗಮನದಲ್ಲಿಟ್ಟುಕೊಂಡು ಉತ್ತಮವಾದಂಥ ಮೊಟ್ಟೆಯನ್ನು ರೈತರಿಗೆ ಕೊಡುವಂಥ ಕೆಲಸದಲ್ಲಿ ತೊಡಗಿರುವಂಥ ಬಂಧುಗಳನ್ನು ಅಭಿನಂದಿಸುತ್ತೇನೆ. ೨–೩ ಕೋಠಿಗಳನ್ನು ಬಿಟ್ಟರೆ ಉಳಿದ ಎಲ್ಲಾ ಕೋಠಿಗಳಲ್ಲಿಯೂ ೩೦ ಪರ್ಸೆಂಟ್‌ಗಿಂತ ಜಾಸ್ತಿ ಬರುತ್ತಿದೆ. ರೋಗರಹಿತ ಮೊಟ್ಟೆಗಳನ್ನು ಕೊಡುವುದರಲ್ಲಿ ಇಲಾಖೆ ಪ್ರಯತ್ನ ಮಾಡಿಲ್ಲ ಎಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ ಎನ್ನುವ ಅಂಶವನ್ನು ಸಭೆಯ ಗಮನಕ್ಕೆ ತರುತ್ತೇನೆ. ೮೩–೮೪ ರಲ್ಲಿ ೧೦೦ ಮೊಟ್ಟೆಗೆ ೨೭ ಕೆ.ಜಿ. ಬರುತ್ತಿತ್ತು. ೮೪–೮೫ ರಲ್ಲಿ

೨೭.೧೬ ಕೆ.ಜಿ. ೮೫-೮೬ ರಲ್ಲಿ ೨೯.೬೩ ಕೆ.ಜಿ.ಗೆ ಬಂದಿದೆ. ರೋಗರಹಿತ ಮೊಟ್ಟೆಗಳನ್ನು ಕೊಡುತ್ತಿರುವುದರಿಂದ ಇದರ ಪ್ರಮಾಣ ಕೂಡ ಹೆಚ್ಚುತ್ತಾ ಹೋಗಿದೆ. ಮಾನ್ಯ ಸದಸ್ಯರಾದ ಶ್ರೀ ರಾಜೂಗೌಡರು ಮಾತನಾಡುತ್ತಾ ರೈತರ ಹಿತವನ್ನು ಕಾಪಾಡುವುದರಲ್ಲಿ ಸಫಲವಾಗಿಲ್ಲ ಎಂದು ಹೇಳಿದರು. ಆದರೆ ಅದು ಸರಿಯಲ್ಲ, ಸ್ವಲ್ಪಮಟ್ಟಿಗೆ ಸಫಲವಾಗಿದೆ ಎನ್ನುವುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಹೊರದೇಶದಿಂದ ರೇಷ್ಮೆ ಆಮದು ಮಾಡಿಕೊಳ್ಳುವುದನ್ನು ತಪ್ಪಿಸುವ ವಿಚಾರದಲ್ಲಿ ಪ್ರಯತ್ನ ಮಾಡಬೇಕೆಂದು ಮಾನ್ಯ ರಾಜೂಗೌಡರು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಮೋಸ ಮಾಡುತ್ತಿದೆಯೆಂದು ಹೇಳಿದ್ದಾರೆ. ಕಳೆದ ಸಾರಿ ಮಾತನಾಡುವಾಗ ಮಾನ್ಯ ವೀರಪ್ಪ ಮೊಯ್ಲಿಯವರು ಬಹಳ ಬೇಸರ ಪಟ್ಟುಕೊಂಡರು. ಈ ಸಾರಿ ಮಾನ್ಯ ವೆಂಕಟರಾಮಯ್ಯನವರು ಕೇಂದ್ರ ಸರ್ಕಾರ ಮೋಸ ಮಾಡುತ್ತಿದೆಯೆಂದು ಹೇಳಿದ್ದಾರೆ. ಈ ಒಂದು ವಿಷಯದಲ್ಲಿ ಈ ಒಂದು ಉದ್ಯಮದಲ್ಲಿ ತೊಡಗಿರುವಂಥ ಎಲ್ಲ ವ್ಯಕ್ತಿಗಳ ಅಭಿಪ್ರಾಯ ಒಂದೇ. ಈ ರೇಷ್ಮೆ ಉದ್ಯಮದಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ಪಾದನೆ ಮಾಡುತ್ತೇವೆಂಬ ಆಸೆ ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಾದರೆ ನಾವು ಇವತ್ತು ನಮ್ಮ ರಾಜ್ಯವನ್ನು ೨ನೇ ಸ್ಥಾನಕ್ಕೆ ತೆಗೆದುಕೊಂಡು ಹೋಗಬಹುದು. ಇಲ್ಲದಿದ್ದರೆ ಆ ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಇಚ್ಛೆಪಟ್ಟರೆ, ಮನಸ್ಸು ಇದ್ದರೆ, ಆಸೆ ಆಕಾಂಕ್ಷೆ ಇದ್ದರೆ ಮಾತ್ರ ಈ ಒಂದು ಕೆಲಸ ಮಾಡಬಹುದು ರಾಷ್ಟ್ರಮಟ್ಟದಲ್ಲಿ ಯಾವುದೇ ಪಕ್ಷ ಇರಲಿ, ಜನತಾ ಇರಲಿ, ಕಾಂಗ್ರೆಸ್ ಇರಲಿ, ಕಮ್ಯುನಿಸ್ಟ್ ಇರಲಿ, ಇಂತಹ ವಿಷಯದಲ್ಲಿ ಎಚ್ಚರಿಕೆ ವಹಿಸಬೇಕು. ನಾನು ೧೯೭೭ರಲ್ಲಿಯೇ ಈ ಒಂದು ನೀತಿಯನ್ನು ವಿರೋಧ ಮಾಡಿದ್ದೆನು. ಈವತ್ತೂ ವಿರೋಧ ಮಾಡುತ್ತೇನೆ. ಬಹುಶಃ ಎಲ್ಲ ರಾಜಕೀಯ ಪಕ್ಷಗಳು ವಿರೋಧ ಮಾಡುತ್ತವೆ. ಹೊರದೇಶದಿಂದ ರೇಷ್ಮೆ ಆಮದು ಮಾಡಿಕೊಳ್ಳುವಂಥ ನೀತಿಯನ್ನು ಕೇಂದ್ರ ಸರ್ಕಾರ ತಕ್ಷಣ ನಿಲ್ಲಿಸದೇಹೋದರೆ, ರಾಷ್ಟ್ರದ ರೇಷ್ಮೆ ಅಭಿವೃದ್ಧಿಗೆ ಕಂಟಕವಾಗುತ್ತದೆ. ನಮಗೆ ಎಷ್ಟು ಪ್ರಮಾಣದಲ್ಲಿ ಆಮದು ಮಾಡಿಕೊಳುತ್ತಾರೆಂಬ ವಿವರ ಸಿಕ್ಕಿರಲಿಲ್ಲ. ಟೆಕ್ಸ್‌ಟೈಲ್ ಮಿನಿಸ್ಟರು ಮದ್ರಾಸಿನಲ್ಲಿ ಒಂದು ಕಡೆ ಮಾತನಾಡುತ್ತಾ, ೧೩೦೦ ಟನ್ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಇದರಿಂದ ರೇಷ್ಮೆ ಉದ್ಯಮದ ಮೇಲೆ ಕೆಟ್ಟ ಪರಿಣಾಮವುಂಟಾಗುತ್ತದೆ. ನಾನು ಈವೊತ್ತು ಈ ಒಂದು ವೇದಿಕೆಯಿಂದ ರಾಜ್ಯದ ಬಡವರ ಪರವಾಗಿ, ಉದ್ಯಮವನ್ನು ಅವಲಂಬಿಸಿರುವಂಥ ಜನತೆಯ ಪರವಾಗಿ ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಳ್ಳುತ್ತೇನೆ. ಈ ಒಂದು ತೀರ್ಮಾನವನ್ನು ಬದಲಾಯಿಸಿ, ಹೊರದೇಶದಿಂದ ರೇಷ್ಮೆ ಆಮದು ಮಾಡಿಕೊಳ್ಳುವಂಥ ನೀತಿಯನ್ನು ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ದಿಸೆಯಲ್ಲಿ ರಾಜ್ಯಸರ್ಕಾರ ಕೂಡ ಸಾಕಷ್ಟು ಪ್ರಯತ್ನ ಮಾಡುತ್ತಿದೆ. ಕೇಂದ್ರ ಮಂತ್ರಿಗಳೊಂದಿಗೆ ಒಂದು ಗಂಟೆ ಈ ವಿಚಾರದಲ್ಲಿ ವಾದ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ೪-೫ ಬಾರಿ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಆದರೂ ಕೇಂದ್ರ ಸರ್ಕಾರಕ್ಕೆ ಈ ವಿಷಯದಲ್ಲಿ ಸರಿಯಾದಂಥ ತಿಳುವಳಿಕೆ ಬಂದಿಲ್ಲ. ಇದರ ಫಲವನ್ನು ಇವತ್ತು ನಾವು ಅನುಭವಿಸಬೇಕಾಗಿದೆ. ಇಡೀ ರಾಷ್ಟ್ರದಲ್ಲಿಯೇ ಉತ್ತಮವಾದಂಥ ಸ್ಪನ್ ಸಿಲ್ಕ್ ತಯಾರು ಮಾಡುವಂಥ ಘಟಕ ಚನ್ನಪಟ್ಟಣದಲ್ಲಿದೆ. ಇಡೀ ವಿಶ್ವದಲ್ಲಿಯೇ ಇದರ ಗುಣಮಟ್ಟ ಉತ್ತಮವಾದುದು. ಇಲ್ಲಿ ತಯಾರಾದ ಸ್ಪನ್ ಸಿಲ್ಕ್ ಉತ್ಪತ್ತಿಯಲ್ಲಿ ಸುಮಾರು ೮೦ ಭಾಗವನ್ನು ಕಾಶ್ಮೀರದವರು ಉಪಯೋಗಿಸುತ್ತಿದ್ದರು.

ಸುಮಾರು ಒಂದೇ ಒಂದು ವರ್ಷದಿಂದ ಈಚೆಗೆ ಒಂದೇ ಒಂದು ಕೆ.ಜಿ. ಸ್ಪನ್ ಸಿಲ್ಕನ್ನು ಮಾಡುವುದಕ್ಕೆ ನಾವು ಸಾಧ್ಯವಾಗಿಲ್ಲ ಇದರ ಬಗ್ಗೆ ಚರ್ಚೆಗಾಗಿ ಕಾಶ್ಮೀರದ ಮಂತ್ರಿಗಳನ್ನೂ ಕರೆಸಿದ್ದೆವು. ಅವರಿಗೆ ಊಟ ಹಾಕಿಸಿ ಚೆನ್ನಾಗಿ ಉಪಚರಿಸಿದ ಮೇಲೆ ಅವರು ಹೇಳಿದರು. ಈ ಸ್ಪನ್, ಅಥವಾ ರೇಷ್ಮೆ ವಿಷಯದಲ್ಲಿ ಕಾಶ್ಮೀರವು ಏನೂ ಮಾಡುತ್ತಿಲ್ಲ, ಮಾಡುತ್ತಿರುವುದೆಲ್ಲಾ ಬರೀ ಖಾಸಗಿಯವರೇ, ಅವರಿಗೆ ಎಲ್ಲಿಂದ ರೇಷ್ಮೆ ಬರುತ್ತದೆ ಎಂಬುದು ಅವರಿಗೂ ಗೊತ್ತಿಲ್ಲ ಎಂದರು. ಆದ್ದರಿಂದ ಇವತ್ತು ಇಡೀ ಕಾಶ್ಮೀರದ ಕಾರ್ಪೆಟ್ ಉದ್ಯಮ ಏನಿದೆ ಅದಕ್ಕೆ ಬೇಕಾದ ಸಂಪೂರ್ಣ ಸ್ಪನ್ ಸಿಲ್ಕ್ ಚೈನಾ ದೇಶದಿಂದ ಬರುತ್ತದೆ. ಇದುವರೆಗೂ ೫೭ ಟನ್ ರೇಷ್ಮೆ ಸ್ಪನ್ ಸಿಲ್ಕ್ ಬಂದಿದೆ ಎಂದರು. ಅದೆಲ್ಲಾ ಕೋಟ್ಯಂತರ ರೂಪಾಯಿಗಳ ಬೆಲೆ ಬಾಳುವಂಥದು. ಇದರಿಂದ ಈ ಉದ್ಯಮದ ಮೇಲೆ ಆಗುವ ಕೆಟ್ಟ ಪರಿಣಾಮವನ್ನು ತಡೆಯಲು ಯಾವರೀತಿ ಕೇಂದ್ರದವರು ರೇಷ್ಮೆ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂಬ ಬಗ್ಗೆ ಸದಸ್ಯರು ಒತ್ತಾಯ ತರಬೇಕಾಗಿದೆ ಎಂಬುದನ್ನು ಯೋಚನೆ ಮಾಡುವುದು ಅಗತ್ಯವೆಂದು ಮೊಟ್ಟಮೊದಲನೆಯದಾಗಿ ಹೇಳಲು ಇಷ್ಟಪಡುತ್ತೇನೆ.

ಸನ್ಮಾನ್ಯ ರಾಜೂಗೌಡರು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬೇರೆ ರೈತರಿಗೆ ಕೊಟ್ಟಂಥ ಸೌಲಭ್ಯವನ್ನು ರೇಷ್ಮೆ ಬೆಳೆಯುವವರಿಗೆ ಕೊಟ್ಟಿಲ್ಲ ಎಂದು ಅವರು ಹೇಳಿದರು. ಬೇರೆಯವರಿಗೆ ಬಡ್ಡಿ ಮನ್ನಾ ಕೊಟ್ಟಿದ್ದೀರಿ, ಚಕ್ರ ಬಡ್ಡಿ ಮನ್ನಾ ಮಾಡಿದ್ದೀರಿ, ಆದರೆ ರೇಷ್ಮೆ ಬೆಳೆಗಾರರಿಗೆ ಮತ್ತು ಸಹಕಾರಸಂಘಗಳಿಗೆ ಏನೂ ಸಹಾಯ ಮಾಡಿಲ್ಲವೆಂದೂ ಸಹ ಹೇಳಿದ್ದಾರೆ. ಇದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಇದರಲ್ಲಿ ಒಂದು ತೊಂದರೆ ಏನಾಗಿದೆ ಎಂದರೆ ಈ ಸಿರಿಕಲ್ಚರನ್ನು ಇಂಡಸ್ಟ್ರಿಯಲ್ಲಿ ಸೇರಿಸಿಬಿಟ್ಟಿದ್ದಾರೆ. ಆದ್ದರಿಂದ ಸವಲತ್ತುಗಳನ್ನು ರೈತರಿಗಾಗಲೀ, ಸಹಕಾರ ಸಂಘಗಳಿಗಾಗಲೀ ಕೊಡಲು ಸಾಧ್ಯವಾಗುತ್ತಿಲ್ಲ, ಇದನ್ನು ಪರಿಶೀಲನೆ ಮಾಡಿ ಯಾವ ದಾರಿಯಲ್ಲಿ ಹೋದರೆ ಇದನ್ನು ಬಗೆಹರಿಸಬಹುದೋ ಆ ರೀತಿ ಮಾಡಲು ಪ್ರಯತ್ನ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ ಈ ರೀಲಿಂಗ್ ಯೂನಿಟ್ಟನ್ನು ಮಾಡಿಲ್ಲವೆಂದೂ, ಅದನ್ನು ಮಾಡಬೇಕೆಂದು ಶ್ರೀ ರಾಜೂಗೌಡರು ತಿಳಿಸಿದ್ದಾರೆ. ಈಗಾಗಲೇ ನಮ್ಮ ರಾಜ್ಯದಲ್ಲಿ ನೂಲು ಬಿಚ್ಚಲಿಕ್ಕಾಗಿ ಸುಮಾರು ೫೮ ಘಟಕಗಳು ಇವೆ. ಇವುಗಳ ಜೊತೆಗೆ ಈ ವರ್ಷ ಇನ್ನೂ ೧೩ ಘಟಕಗಳನ್ನು ೮೫-೮೬ ರಲ್ಲಿ ಕಾರ್ಯರೂಪಕ್ಕೆ ತರುತ್ತಿದ್ದೇವೆ. ರಾಯಪುರ, ರಾಣೆಬೆನ್ನೂರು, ಮುದ್ದೇಬಿಹಾಳ, ಜಮಖಂಡಿ, ಚಿತ್ರದುರ್ಗ, ಶಿವಮೊಗ್ಗ, ಹಾಸನ, ಕೂಡ್ಲಿಗಿ, ಶಿರಾ, ಹುಣಸೂರು, ಕೆ.ಆರ್. ಪೇಟೆ. ಚಿಕ್ಕಮಗಳೂರು, ಈ ಸ್ಥಳಗಳಲ್ಲಿ ನೂಲು ಬಿಚ್ಚುವ ಘಟಕಗಳನ್ನು ಕಾರ್ಯನ್ವಯಗೊಳಿಸುತ್ತಿದ್ದೇವೆ. ಇದರ ಜೊತೆಗೆ ಒಂದೂವರೆ ಕೋಟಿ ವೆಚ್ಚದ ಸಿಲ್ಕ್ ಫಿಲೇಚರ್‌ಗಳನ್ನು ದಾವಣಗೆರೆಯಲ್ಲೊಂದು ಹಾಗೂ ಮತ್ತೊಂದನ್ನು ಬೇರೆ ಜಾಗದಲ್ಲೂ ಪ್ರಾರಂಭ ಮಾಡಿದ್ದೇವೆ. ಅವುಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ನೂಲು ಬಿಚ್ಚುವವರಿಗೆ ಮುಂದಿನ ವರ್ಷ ೨೧ ನೂಲು ಬಿಚ್ಚುವ ಸೊಸೈಟಿಗಳ ಮೂಲಕ ೬ ಸಾವಿರ ಜನರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸುವ ಯೋಜನೆಯನ್ನು ತರುತ್ತಿದ್ದೇವೆ. ಸುಧಾರಿತ ಸರಕುಗಳನ್ನು, ರಿಯಾಯಿತಿ ದರದಲ್ಲಿ ಬಡ್ಡಿಯ ಮೇಲೆ ಒದಗಿಸುತ್ತಿದ್ದೇವೆ. ಇನ್ನೂ ಹಲವಾರು ಯೋಜನೆಗಳನ್ನು ಇದಕ್ಕೆ ಅಳವಡಿಸಬೇಕೆಂದಿದ್ದೇವೆ.

ಸನ್ಮಾನ್ಯ ರಾಜೂಗೌಡರು ಇನ್ನೊಂದನ್ನು ಪ್ರಸ್ತಾಪ ಮಾಡಿದ್ದಾರೆ. ಹಿಪ್ಪುನೇರಳೆ ಗಿಡವನ್ನು ಪುಷ್ಟಿಕರವಾಗಿ ಮಾಡಬೇಕು ಎಂದು ಹೇಳಿದ್ದಾರೆ. ಕಳೆದ ತಿಂಗಳು ಜಪಾನಿನ ರೇಷ್ಮೆ ಬೆಳೆಗಳಿಗೆ ಸಂಬಂಧಪಟ್ಟಂಥ ತಜ್ಞರೊಬ್ಬರು ಬಂದಿದ್ದರು. ರೇಷ್ಮೆ ಬೆಳೆ ಕೆಡಬೇಕಾದರೆ ಅಥವಾ ಉತ್ತಮವಾಗಿ ಬರಬೇಕಾದ for the success or failure of the crops what are the contributing factors ಎಂಬುದನ್ನು ಅವರು ಹೇಳಿದ್ದಾರೆ. ಅವರ ಪ್ರಕಾರ ಬೆಳೆ ಕೆಡಲಿ ಅಥವಾ ಒಳ್ಳೆಯದಾಗಲಿ ಶೇಕಡಾ ೩೮ ರಷ್ಟು contributing factors are, mulberry, climate, rearing, race and other factors. ಇದರಲ್ಲಿ ೩೮ ಪರ್ಸೆಂಟ್ ಇರುವುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಎಂ ೫ ತಳಿಯ ಗಿಡಗಳನ್ನು ಹಾಕಿಸಲು ಯೋಚನೆ ಮಾಡುತ್ತಿದ್ದೇವೆ. ರೈತರು ಚೆನ್ನಾಗಿ ಬೆಳೆ ಪಡೆಯಲು ಸಹಾಯ ಮಾಡುತ್ತಿದ್ದೇವೆ.

ಮತ್ತೊಂದು ಪ್ರಮುಖವಾದ ವಿಷಯವನ್ನು ಸನ್ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ವಿಶ್ವಬ್ಯಾಂಕಿನ ನೆರವನ್ನು ಕೈಬಿಡುವಂಥಾ ಪ್ರಯತ್ನ ನಡೆದಿದೆ, ಸ್ಥಗಿತಗೊಳಿಸುವ ಪ್ರಯತ್ನ ನಡೆದಿದೆ ಎಂದು ಸನ್ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ವಿಷಯವನ್ನು ಈಗಾಗಲೇ ಈ ಸದನದಲ್ಲಿ ಮತ್ತೊಂದು ಕಡೆ ಪ್ರಸ್ತಾಪ ಮಾಡಿದ್ದು ಆಗಲೂ ಕೂಡ ವಿಶ್ವಬ್ಯಾಂಕಿನ ನೆರವನ್ನು ಬೇಡ ಎನ್ನುವುದು ಬೇಡ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಇದನ್ನು ಅವರಿಗೆ ಯಾರು ಹೇಳಿದರೋ ಗೊತ್ತಿಲ್ಲ. ಅಷ್ಟೇ ಅಲ್ಲ, ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೮೦ ಕೋಟಿಯ ಯೋಜನೆಯನ್ನು ಪರಿಷ್ಕರಿಸಿ ೧೧೧ ಕೋಟಿಗೆ ಹೆಚ್ಚಿಸಿದ್ದೇವೆ. ಇದನ್ನು ಸದಸ್ಯರು ತಿಳಿದುಕೊಳ್ಳಬೇಕು. ಅವರು ಕನ್‌ಫ್ಯೂಷನ್ ಮಾಡಿಕೊಂಡಿದ್ದಾರೆ. ಮೂಲ ಯೋಜನೆ ೮೦ ಕೋಟಿ ಇತ್ತು. ಡಾಲರ್ ಉಬ್ಬರ ಇದೆ ಎಂಬುದನ್ನು ಗಮನಿಸಬೇಕು. ೧೯೮೦-೮೧ ರಲ್ಲಿ ಡಾಲರ್ ಬೆಲೆ ೮ ರೂ.ಗಳು ಇದ್ದು ಇವತ್ತು ೧೩ ರೂ.ಗೆ ಇದೆ. ಈ ವ್ಯತ್ಯಾಸದಿಂದ ೮೦ ಕೋಟಿ ಇದ್ದಂಥ ಯೋಜನೆಯನ್ನು ೮೫-೮೬ ರಲ್ಲಿ ಪರಿಷ್ಕರಿಸಿ ೧೧೧ ಕೋಟಿಗೆ ಹೆಚ್ಚು ಮಾಡಿದೆವು. ಅಂದರೆ ಮೂಲ ಯೋಜನೆಗಿಂತ ಹೆಚ್ಚಾಗಿ ೨೧ ಕೋಟಿ ರೂ.ಗಳನ್ನು ಖರ್ಚು ಮಾಡುವ ಮನಸ್ಸು ಈ ಸರ್ಕಾರಕ್ಕಿದೆ. ಇದು ಸದಸ್ಯರಿಗೆ ಅರ್ಥವಾಗಬೇಕಾಗಿದೆ. ಈಗಾಗಲೇ ಮಾರ್ಚಿ ೮೬ರ ಅಂತ್ಯಕ್ಕೆ ೭೬ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಮಾನ್ಯ ಮುಖ್ಯ

ಮಂತ್ರಿಗಳ ಉದಾರತೆಯಿಂದ ಈ ತಿಂಗಳು ಕೊನೆಗೆ ಇನ್ನೂ ೪ ಕೋಟಿ ರೂ.ಗಳಷ್ಟು ಹಣ ಸಿಕ್ಕಿದೆ. ಹಣದ ಕೊರತೆ ಇದ್ದರೂ ಕೂಡ ಸಂಪೂರ್ಣವಾಗಿ ಈ ಯೋಜನೆಯನ್ನು ಮಾಡಿ ಮುಗಿಸಬೇಕೆಂಬ ಉತ್ಕಟವಾದ ಆಕಾಂಕ್ಷೆಯಿಂದ ಈ ವರ್ಷ ೭೬ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ಮುಂದಿನ ವರ್ಷಕ್ಕೆ ೮೬–೮೭ ಕ್ಕೆ ಕೋಟಿ ರೂ.ಗಳನ್ನು ಈ ಯೋಜನೆಗಾಗಿ ತೆಗೆದಿಟ್ಟಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ಈ ಸಮಯದಲ್ಲಿ ಒಂದು ಅಂಕಿ ಅಂಶವನ್ನು ಕೊಡಲು ಇಷ್ಟಪಡುತ್ತೇನೆ. ಇದರಿಂದ ಅವರ ತಲೆಯಲ್ಲಿ ಇರುವ ಸಂಶಯ ಇಲ್ಲವಾಗಲಿ. ಈಗಾಗಲೇ ಯೋಜನಾ ಹಣ ಇದ್ದದ್ದು ೮೦ ಕೋಟಿ ಖರ್ಚು ಮಾಡಿರುವುದು ೮೪ ಕೋಟಿ. ರೇಷ್ಮೆ ಉದ್ಯಮದ ಮೇಲೆ ವಿಶ್ವಬ್ಯಾಂಕಿನ ನೆರವಿನ ಯೋಜನೆಯನ್ನು ಕೈಬಿಡುತ್ತಿದ್ದೇವೆ ಅಥವಾ ನಿಲ್ಲಿಸುತ್ತಿದ್ದೇವೆ ಎಂಬುದು ಈಗಲಾದರೂ ಅವರ ತಲೆಯಿಂದ ಹೋಗಲಿ. ಈಗಾಗಲೇ ೮೩ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ, ಪರಿಷ್ಕೃತ ಯೋಜನೆ ಪ್ರಕಾರ ಇನ್ನೂ ೧೬ ಕೋಟಿ ರೂ.ಗಳನ್ನು ಮಾತ್ರ ಖರ್ಚು ಮಾಡಬೇಕಾಗಿದೆ. ಈ ಸಮಯದಲ್ಲೇ ಇನ್ನೊಂದು ಆಶ್ವಾಸನೆ ಕೊಡಲಿಕ್ಕೆ ಇಷ್ಟಪಡುತ್ತೇನೆ, ಸನ್ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಆಲೋಚನೆ ಮಾಡಿದ್ದೇನೆ, ಸುಮಾರು ೧೦ ಕೋಟಿ ರೂ. ಅಳವಡಿಸುವ ಯೋಜನೆ ಕಳೆದ ಸಾರಿಯದು ಏನಿದೆ ಅದನ್ನೂ ಸೇರಿಸಿ ೧೭ ಕೋಟಿ ರೂ. ಗಳನ್ನು ಖರ್ಚು ಮಾಡಿ ಈ ಯೋಜನೆಯನ್ನು ಸಂಪೂರ್ಣ ಮಾಡೇ ಮಾಡುತ್ತೇವೆ. ಅಷ್ಟೇ ಅಲ್ಲ, ಒಂದು ಪಕ್ಷ ವಿಶ್ವಬ್ಯಾಂಕಿನ ಹಣ ತಾನಾಗಿಯೇ ನಿಂತರೂ ನಮ್ಮ ಹಣದಿಂದಲೇ ನಾವು ಯೋಜನೆಯನ್ನು ಮುಗಿಸುತ್ತೇವೆ.

ಸನ್ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮಾರುಕಟ್ಟೆಯಲ್ಲಿ ತೂಕದಲ್ಲಿ ಅನ್ಯಾಯವಾಗುತ್ತಿದೆ, ಅಧಿಕಾರಿಗಳಿಗೆ ನೂರರಿಂದ ಇನ್ನೂರರವರೆಗೆ ದಿನಕ್ಕೆ ಆದಾಯ ಬರುತ್ತಿದೆ ಎಂದು ಹೇಳುತ್ತಾರೆ, ಇದಕ್ಕೆ ಏನು ಹೇಳಬೇಕೋ ಅರ್ಥವಾಗುತ್ತಿಲ್ಲ. ಇರುವಂಥ ವ್ಯವಸ್ಥೆಯಲ್ಲಿ ಆದಷ್ಟನ್ನೂ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ವ್ಯವಸ್ಥೆಗೆ ಕೇವಲ ಅಧಿಕಾರಿಗಳೊಬ್ಬರೇ ಕಾರಣ ಅಥವಾ ಜವಾಬ್ದಾರರು ಎನ್ನುವ ಮಾತನ್ನು ಒಪ್ಪಲು ಸಾಧ್ಯವಿಲ್ಲ.

ನಾನು ಚನ್ನಪಟ್ಟಣ ಮಾರುಕಟ್ಟೆಗೆ ಹೋದೆ, ಮಾರುಕಟ್ಟೆಯಿಂದ ಒಬ್ಬ ಹರಕಲು ಚಡ್ಡಿ ಹಾಕಿದ್ದ ಕೈಯಲ್ಲಿ ಗೂಡು ಹಿಡಿದಿದ್ದ ವ್ಯಕ್ತಿ ಹೊರಗಡೆ ಬರುತ್ತಿದ್ದ. ಎಷ್ಟು ಗೂಡು ತಂದಿದ್ದೆ, ಎಷ್ಟು ದುಡ್ಡು ಬಂದಿದೆ ಎಂದರೆ ಗೊತ್ತಿಲ್ಲ. ಬಲವಂತ ಮಾಡಿ ಅವನ ಹತ್ತಿರ ಇದ್ದ ಗೂಡನ್ನು ಕಿತ್ತುಕೊಂಡು ಹೋದಮೇಲೆ ನಾನು ಮಂತ್ರಿ ಎಂದು ಅಲ್ಲಿದ್ದವರಿಗೆಲ್ಲ ಗೊತ್ತಾಯಿತು. ಅವನ ಹತ್ತಿರ ಎರಡೂವರೆ ರೂಪಾಯಿ ಕಡಿಮೆ ಇತ್ತು. ನಂತರ ಕೇಳಿದೆ, ಏತಕ್ಕೆ ಇಷ್ಟು ಕಡಿಮೆ ಬೆಲೆಗೆ ಕೊಟ್ಟೆ ಎಂದು. ಚಿಲ್ಲರೆ ಕೊಟ್ಟಿಲ್ಲ. ಕೊಟ್ಟದ್ದೆ ಕಡಿಮೆ ಬೆಲೆಗೆ ಎಂದ. ಆಗ ಅಲ್ಲಿದ್ದ ಅಧಿಕಾರಿಯನ್ನು ನೀನು ಯಾರು ಎಂದು ಕೇಳಿದೆ, ನಾನೊಬ್ಬ ರೈತನ ಮಗ ಎಂದ. ನಮ್ಮ ಅಪ್ಪನು ಗೂಡು ಬೆಳೆಯುತ್ತಾರೆ, ಅಣ್ಣನು ಗೂಡು ಬೆಳೆಯುತ್ತಾನೆ ಎಂದ. ಹೀಗೆ ಅವನು ರೈತನ ಮಗನಾಗಿದ್ದು ಕಷ್ಟ ಗೊತ್ತಿರುವ ವ್ಯಕ್ತಿಯಾಗಿದ್ದು ನೌಕರನಾಗಿ ಶೋಷಣೆ ಮಾಡುತ್ತಿದ್ದಾನೆ. ಈ ಬಗ್ಗೆ ಮಾನ್ಯ ರಾಜೂಗೌಡರು ಪ್ರಸ್ತಾಪ ಮಾಡಿದ್ದರಿಂದ ಸ್ವಲ್ಪ ಕಟುವಾಗಿಯೇ ಹೇಳಬೇಕಾಗಿದೆ. ಮತ್ತೊಮ್ಮೆ ವಿಜಾಪುರಕ್ಕೆ ಹೋದೆ. ಇದ್ದಕ್ಕಿದ್ದಂತೆ ತೂಕ ಪರಿಶೀಲನೆ ಮಾಡಿದಾಗ ಜಾಸ್ತಿ ಇತ್ತು. ಎರಡು ನಿಮಿಷದಲ್ಲಿ ಗೂಡು ಮಾರಿದ್ದ ರೈತನನ್ನು ಅಲ್ಲಿನ ಅಧಿಕಾರಿ ಕರೆದು ಹೆಚ್ಚಿಗೆ ಇದ್ದ ಗೂಡನ್ನು ದೇವರ ಗೂಡು ಎಂದು ಹೇಳು ಎಂದು ಹೇಳಿದ್ದ. ಈ ಒಂದು ಭ್ರಷ್ಟಾಚಾರ ನಿರ್ಲಕ್ಷ್ಯದ್ದು ಇರಬಹುದು, ಆದರೆ ಇದಕ್ಕೆ ಕೇವಲ ಅಧಿಕಾರಿಗಳು, ಮಂತ್ರಿಗಳು, ರಾಜಕಾರಣಿಗಳು ಕಾರಣವೆ? ಅಥವಾ ಬೇರೆಯವರು ಕಾರಣರು ಇದ್ದಾರೆಯೆ? ತೂಕ ಜಾಸ್ತಿಯಾಗಿದೆ, ಸಸ್ಪೆಂಡ್ ಮಾಡೋಣವೆಂದರೆ ಗೂಡು ಮಾರಿದವನು ನಾನು ಇಷ್ಟೇ ಕೊಟ್ಟಿದ್ದೆ, ಉಳಿದದ್ದು ದೇವರ ಗೂಡು ಎಂದು ಹೇಳುತ್ತಾನೆ. ಆದ್ದರಿಂದ ನಮಗೆ ಸಮಸ್ಯೆಗಳ ಅರಿವು ಇದೆ, ಆದರೆ ಅವುಗಳನ್ನು ಬಗೆಹರಿಸುವ ಮಾರ್ಗವನ್ನು ತೋರಬೇಕಾಗಿದೆ. ನಾನು ಸಂಪೂರ್ಣವಾಗಿ ಎಲ್ಲವನ್ನು ಮಾಡಿ ಮುಗಿಸಿದ್ದೇನೆಂದು ಹೇಳಿಕೊಳ್ಳುವುದಕ್ಕೆ ಸಿದ್ಧನಿಲ್ಲ. ನನ್ನ ಒಂದು ಆತ್ಮಕ್ಕೆ ನೆಮ್ಮದಿಯಾಗಲಿ ಎಂದು ೫ ಜನರನ್ನು ಡಿಸ್‌ಮಿಸ್ ಮಾಡಿದ್ದೇನೆ, ೧೯ ಜನರಿಗೆ ಮೈನರ್ ಪನಿಷ್‌ಮೆಂಟ್ ಕೊಟ್ಟಿದ್ದೇನೆ, ೭ ಜನರಿಗೆ ಎಕ್ಸ್‌ಪ್ಲನೇಷನ್ ಕೇಳಿದ್ದೇವೆ, ನೂರಾರು ಜನರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಇದರಿಂದ ಇಡೀ ವ್ಯವಸ್ಥೆ ಸರಿಹೋಗುತ್ತದೆಂಬ ನಂಬಿಕೆ ನನಗೆ ಇಲ್ಲ. ಸರಿ ಮಾಡುವಂಥ ಪ್ರಯತ್ನದಲ್ಲಿ ಮುಂದುವರಿಯುತ್ತೇವೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ

ವೆಂಕಟರಾಮಯ್ಯನವರು ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಒಂದೇ ಮಾತಿನಲ್ಲಿ ಕೋಲಾರ ಜಿಲ್ಲೆಗೆ ಏನೂ ಮಾಡಿಲ್ಲವೆಂದು ಹೇಳಿದ್ದಾರೆ. ರಾಜ್ಯದ ರೇಷ್ಮೆ ಉತ್ಪಾದನೆಯಲ್ಲಿ ಕೋಲಾರ ಜಿಲ್ಲೆಯದು ಸಿಂಹ ಪಾಲು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದೇ ಸಂದರ್ಭದಲ್ಲಿ ಏನೂ ಮಾಡಿಲ್ಲ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಬಹುಶ: ಜಿಲ್ಲಾ ಮಂತ್ರಿಗಳು ಇಲ್ಲವೆಂದು ಕಾಣುತ್ತದೆ. ಶಿಡ್ಲಘಟ್ಟದಲ್ಲಿ ರೇಷ್ಮೆ ಬಿತ್ತನೆ ಕೋಠಿ ಕೆಲಸವನ್ನು ಶುರು ಮಾಡಿದ್ದೇವೆ. ಅದಕ್ಕೆ ೧೦ ಲಕ್ಷ ರೂಪಾಯಿ ಯೋಜನೆ ಸಿದ್ಧವಾಗಿದೆ. ಶಿಡ್ಲಘಟ್ಟ ಮಾರ್ಕೆಟ್ ಕಟ್ಟಡದ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ಕೊಡಲಾಗಿತ್ತು. ಈಗ ಕೆಲಸ ಸಂಪೂರ್ಣವಾಗಿದೆ. ಈ ತಿಂಗಳ ೨೩ ರಂದು ಪ್ರಾರಂಭಿಸುತ್ತಿದ್ದೇವೆ. ಚಿಕ್ಕಬಳ್ಳಾಪುರದ ಚಟ್ಟಪುರದಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತ ಆಧುನಿಕ ಯಂತ್ರಗಳಿಂದ ಕೂಡಿದಂಥ, ಎಲ್ಲಾ ವಿಧದಲ್ಲಿ ಪರಿಪೂರ್ಣವಾಗಿ ಕೆಲಸ ಮಾಡುವಂಥ ರೇಷ್ಮೆ ಬಿತ್ತನೆ ಕೋಠಿಯನ್ನು ಕಳೆದ ತಿಂಗಳು ಪ್ರಾರಂಭಿಸಿದ್ದೇವೆ. ಕೆಲಸ ಶುರು ಮಾಡಿದೆ. ಕೋಲಾರದಲ್ಲಿ ೧೬,೪೫೭ ಎಕರೆ ಮಲ್ಬರಿ ಇದೆ. ೧೫ ರೇಷ್ಮೆ ಬಿತ್ತನೆ ಕೋಠಿಗಳಿವೆ, ೧೯ ವಿದ್ಯಾ ಕೇಂದ್ರಗಳು ಇವೆ, ಚಾಕಿ ಮಾಡುವಂತ ೨೫೦ ಕೇಂದ್ರಗಳು, ೮ ಮಾರುಕಟ್ಟೆಗಳು ಇವೆ. ಜಿಲ್ಲೆಯಿಂದ ಬರತಕ್ಕ ಗೂಡು ಮಾನ್ಯ ವೆಂಕಟರಾಮಯ್ಯನವರು ಹೇಳಿದ ಹಾಗೆ ೫೦ ಪರ್ಸೆಂಟ್ ಅಲ್ಲ, ೨೦-೨೫ ಪರ್ಸೇಂಟ್ ಆಗಬಹುದು ಅಂದರೆ ೧೦೨೫೦ ಮಿಲಿಯನ್ ಟನ್. ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ ಒಂದರಲ್ಲೇ ಒಂದು ಕೋಟಿ ೫೮ ಸಾವಿರ ರೂಪಾಯಿಗಳನ್ನು ಕೋಲಾರ ಜಿಲ್ಲೆಗೆ ಖರ್ಚು ಮಾಡಿದ್ದೇವೆ. ಆದ್ದರಿಂದ ಕೋಲಾರ ಜಿಲ್ಲೆಗೆ ಏನೂ ಮಾಡಿಲ್ಲ ಎಂಬುದನ್ನು ಒಪ್ಪುವುದಕ್ಕೆ ಸಿದ್ಧವಿಲ್ಲ. ಒಂದು ಮಾತನ್ನು ಮಾತ್ರ ಒಪ್ಪುವುದಕ್ಕೆ ಸಿದ್ಧನಿದ್ದೇನೆ. ಎಲ್ಲಿ ಅವಶ್ಯಕತೆ ಇಲ್ಲ ಅಲ್ಲಿ ಕೊಟ್ಟಿದ್ದಾರೆ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾರುಕಟ್ಟೆ ಕಟ್ಟಡಗಳನ್ನು ಕಟ್ಟಿಕೊಟ್ಟಿಲ್ಲವೆಂದು ಹೇಳಿದ್ದಾರೆ. ಕೆಲವು ಕಡೆ ಆ ರೀತಿ ಆಗಿರುವುದು ನಿಜ. ಶಿವಮೊಗ್ಗ, ಬೀದರ್, ರಾಯಚೂರು ಜಿಲ್ಲೆಗಳಲ್ಲೂ ಹಾಗೆಯೇ ಕೋಲಾರ ಜಿಲ್ಲೆಗೂ ಇನ್ನೊಂದು ಬಿತ್ತನೆ ಕೋಠಿಯ ಅವಶ್ಯಕತೆ ಇದೆ ಎಂದು ನಾನು ಅನೇಕ ಕಡೆ ಹೇಳಿದ್ದೇನೆ. ಅದನ್ನು ಈ ವರ್ಷ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಎಡಿಯೂರಪ್ಪನವರು ಶಿಕಾರಿಪುರದಲ್ಲಿ ರೇಷ್ಮೆ ಬೆಳೆಗೆ ಉತ್ತಮವಾದ ಮಣ್ಣು ಮತ್ತು ಹವಾಗುಣ ಇದೆ ಎಂದು ಹೇಳಿದ್ದಾರೆ. ಅದನ್ನು ಒಪ್ಪುತ್ತೇನೆ. ಅಲ್ಲಿ ರೇಷ್ಮೆ ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ಸನ್ಮಾನ್ಯ ಚನ್ನಪ್ಪನವರು ಮಾತನಾಡುತ್ತಾ ಮೈಸೂರಿನಲ್ಲಿ ರೇಷ್ಮೆ ಬಿತ್ತನೆ ಬೀಜ ಬೇಸಿಗೆ ಕಾಲದಲ್ಲಿ ಜಾಸ್ತಿ ಸಿಗುತ್ತದೆ, ಮಳೆಗಾಲದಲ್ಲಿ ಸಿಗುವುದಿಲ್ಲವೆಂದು ಹೇಳಿದ್ದಾರೆ. ಆ ಪರಿಸ್ಥಿತಿ ಇವತ್ತು ಇಲ್ಲ. ಬಿತ್ತನೆ ಗೂಡು ವರ್ಷಕ್ಕೆ ಬೇಕಾಗಿರುವುದು ೯೦ ಕೋಟಿ ಆದರೆ ಕಳೆದ ವರ್ಷ ಆಗಿರತಕ್ಕ ಉತ್ಪತ್ತಿ ೧೮೦ ಕೋಟಿ. ಆದ್ದರಿಂದ ಬೇಸಿಗೆ ಮತ್ತು ಮಳೆಗಾಲಕ್ಕೆ ಹೆಚ್ಚಿನ ವ್ಯತ್ಯಾಸ ಆಗಲಾರದೆಂದು ಭಾವಿಸುತ್ತೇನೆ. ಮಾನ್ಯ ಜಿ. ಎಸ್. ಆಚಾರ್‌ರವರು ಮಾತನಾಡುವಾಗಲೇ ಗೊತ್ತಾಯಿತು. ಅವರು ಓದುತ್ತಿರುವುದು ವರ್ಗಾವಣೆಯ ಸಲುವಾಗಿ ಯಾರೋ ಬರೆದುಕೊಟ್ಟ ಮಾಹಿತಿ ಎಂದು. ಯಾರೋ ವರ್ಗಾವಣೆಗೆ ಇಷ್ಟವಿಲ್ಲದ ನೌಕರರು ಮಾನ್ಯ ಆಚಾರ್ ಅವರಿಗೆ ಬರೆದುಕೊಟ್ಟಿದ್ದಾರೆಂದು ಅವರು ಓದುತ್ತಿದ್ದ ಶೈಲಿಯಲ್ಲೇ ಮನವರಿಕೆಯಾಗಿದೆ. ಕಳೆದ ವರ್ಷ ನನ್ನ ಇಲಾಖೆಯಲ್ಲಿ ಒಂದೇ ಒಂದು ವರ್ಗಾವರ್ಗಿಯನ್ನೂ ರದ್ದು ಮಾಡಿಲ್ಲ. ಬೇರೆ ಇಲಾಖೆಯಲ್ಲಿ ಹೇಗೋ ಗೊತ್ತಿಲ್ಲ. ಇದಕ್ಕೆ ಸಹಾಯ ಮಾಡಿದ ಇಲಾಖೆಯ ಅಧಿಕಾರಿಗಳಿಗೆ ಮತ್ತು ಮಾಡಿದ ವರ್ಗಾವರ್ಗಿಗಳನ್ನು ರದ್ದು ಮಾಡಲಿಕ್ಕೆ ಶಿಫಾರಸ್ಸು ಮಾಡಿದ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಶಾಸಕರಿಗೆ ಋಣಿಯಾಗಿದ್ದೇನೆ. ಒಂದೇ ಒಂದನ್ನು ರದ್ದು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಒಂದು ಮಾತು ಹೇಳಿದರು ಅದಕ್ಕೆ ಕಟಿಬದ್ಧವಾಗಿ ಕೆಲಸ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಯಾರಿಗಾದರೂ ಅನ್ಯಾಯವಾಗಿದ್ದರೆ ಅನ್ಯಾಯವೆಂದು ಭಾವಿಸುವುದಿಲ್ಲ. ರಾಜ್ಯದ ಮಂತ್ರಿಯಾಗಿರಲಿ, ಪ್ರಧಾನಿಯಾಗಿರಲಿ, ನೌಕರರಾಗಿರಲ್ಲಿ ಎಲ್ಲರೂ ಕೂಲಿ ತೆಗೆದುಕೊಂಡು ಕೆಲಸ ಮಾಡುವ ಗುಲಾಮರು ಎಂದು ತಿಳಿದುಕೊಂಡು ಕೆಲಸ ಮಾಡುವವನು ನಾನು. ಯಾವ ನೌಕರನೇ ಆಗಲಿ ನನಗೆ ಬೆಂಗಳೂರಿಗೆ ಹಾಕಿ, ತುಮಕೂರಿಗೆ ಹಾಕಿ, ನಾನು ಜಮೀನು ಕಡೆ ನೋಡಿಕೊಳ್ಳಬೇಕಾಗಿದೆ. ನಮ್ಮ ಅಪ್ಪ ಅಮ್ಮನನ್ನು ನೋಡಿಕೊಳ್ಳಬೇಕಾಗಿದೆ ಎಂದು ಕೇಳುತ್ತಾರೆ. ಸರ್ಕಾರ ಸಂಬಳ ಕೊಡುವುದು ಜಮೀನು ಕಡೆ ನೋಡಿಕೊಳ್ಳುವುದಕ್ಕೆ ಅಲ್ಲ. ನನ್ನ ಮಗಳು ಕಾಲೇಜಿನಲ್ಲಿ ಓದುತ್ತಿದ್ದಾಳೆ, ನನ್ನ ಹೆಂಡತಿ ಕೆಲಸದಲ್ಲಿದ್ದಾಳೆ, ಆದ್ದರಿಂದ ನನಗೆ ಇಂಥ ಕಡೆಗೆ ವರ್ಗ ಮಾಡಿಕೊಡಿ ಎಂದು ಕೇಳುವುದನ್ನು

ನೋಡಿದರೆ ಈ ರಾಷ್ಟ್ರದ ಆಡಳಿತ ವ್ಯವಸ್ಥೆಯೇ ಅರ್ಥವಾಗುವುದಿಲ್ಲ. ನಾನು ತಪ್ಪಿದ್ದೇನೆಯೇ ಅಥವಾ ವ್ಯವಸ್ಥೆ ತಪ್ಪಿದೆಯೇ ಎಂಬದು ಅರ್ಥವಾಗುತ್ತಿಲ್ಲ. ವರ್ಗ ಮಾಡಿದರೆ ಜಮೀನು ಕಡೆ ನೋಡಿಕೊಳ್ಳಬೇಕು ಅಪ್ಪನಿಗೆ ವಯಸ್ಸಾಗಿದೆ ಎನ್ನುತ್ತಾರೆ. ಅಪ್ಪ ಅಮ್ಮನ ಶುಶ್ರೂಷೆ ಮಾಡುವುದಕ್ಕೆ, ಜಮೀನು ನೋಡಿಕೊಳ್ಳುವುದಕ್ಕೆ ಬೇಕಾದ ಕಡೆಗೆ ವರ್ಗ ಮಾಡಬೇಕೆ ? ಈ ಒಂದು ವ್ಯವಸ್ಥೆ ಎಲ್ಲಿಯವರೆಗೆ ಬಂದಿದೆ ಎಂದರೆ, ನನ್ನ ಹೆಂಡತಿ ಸಿನೇಮಾ ನೋಡಬೇಕಾಗಿರುವುದರಿಂದ ಥಿಯೇಟರ್ ಇರುವ ಕಡೆ ವರ್ಗ ಮಾಡಿ ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ. ಕುದೂರಿನಲ್ಲಿ ಸಿನೆಮಾ ಥಿಯೇಟರ್ ಇಲ್ಲದಿರುವುದರಿಂದ ಸಿನೆಮಾ ಥಿಯೇಟರ್ ಇರುವ ಕಡೆಗೆ ವರ್ಗ ಮಾಡಿಕೊಡಬೇಕೆಂದು ಕೋರಿದ್ದಾರೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಅಂಥವರನ್ನು ಕುಡಿಯುವ ನೀರು ಸಿಕ್ಕದೆ ಇರುವ ಕಡೆಗೆ ಹಾಕಬೇಕು.

ಶ್ರೀ ವೈ. ಕೆ. ರಾಮಯ್ಯ.—ನನ್ನನ್ನು ಸೇರಿಸಿಕೊಂಡು ೪ನೇ ದರ್ಜೆಯ ನೌಕರರವರೆಗೆ ಎಲ್ಲರೂ ಸರ್ಕಾರದ ಗುಲಾಮರಾಗಿ ಕೆಲಸ ಮಾಡುವುದಕ್ಕೆ ಇರುವುದು ಎಂಬುದನ್ನು ಅರ್ಥಮಾಡಿಕೊಂಡಿಲ್ಲ. ನಾವು ಸಾಮಾನ್ಯ ಜನರ ಗುಲಾಮರು ಎಂಬುದನ್ನು ಮರೆತಿದ್ದೇವೆ. ಆದ್ದರಿಂದ ಈ ವ್ಯವಸ್ಥೆ ಬಂದಿದೆ. ವರ್ಗಾವರ್ಗಿ ಮಾಡುವಾಗ ಯಾರಿಗಾದರೂ ನೋವಾಗುವಂತೆ ಮಾಡಿದ್ದರೆ ಅದನ್ನು ಅನ್ಯಾಯ ಎಂದು ಭಾವಿಸುವುದಿಲ್ಲ. ಸಾರ್ವಜನಿಕ ವ್ಯವಸ್ಥೆಯಲ್ಲಿ ಅವಶ್ಯಕ ಎಂದು ಭಾವಿಸುತ್ತೇನೆ. ಸಭಾಂಗಣ ಮಾಡುವುದಕ್ಕೆ ದುಡ್ಡು ಖರ್ಚು ಮಾಡಿದ್ದೀರೆಂದು ಮಾನ್ಯ ಆಚಾರ್ ಅವರು ಹೇಳಿದ್ದಾರೆ. ನಾವು ಯಾವುದನ್ನೂ ಮಾಡಿಲ್ಲ. ಸಭಾಂಗಣವನ್ನು ಮೇಯಿಂಟೇನ್ ಮಾಡಲಿಕ್ಕೆ ೪-೫ ಸಾವಿರ ರೂಪಾಯಿ ಖರ್ಚಾಗಿದೆ. ಅಲ್ಲಿ ಪಬ್ಲಿಕ್ ಅನೌನ್ಸಿಂಗ್ ಸಿಸ್ಟಂ ಇದೆ. ಗಲಾಟೆ ನಡೆಯುವಾಗ ಅಲ್ಲಿ ಪೈಕು ದರ ಮತ್ತು ತೂಕವನ್ನು ಅನೌನ್ಸ್ ಮಾಡುವ ವ್ಯವಸ್ಥೆ ಇದೆ.

ಕಂಪ್ಯೂಟರ್ ಅವಶ್ಯಕತೆ ಇದೆ. ಅದಕ್ಕೋಸ್ಕರ ಪರ್‌ಚೇಸ್ ಮಾಡಿದ್ದಾರೆ.

ಅಧ್ಯಕ್ಷರು.—ಮುಗಿಯಿತಲ್ಲಾ. ವೇಳೆ ಆಗಿ ಹೋಯಿತು.

ಶ್ರೀ ವೈ. ಕೆ. ರಾಮಯ್ಯ.—ಮುಗಿಯಿತು. ಶ್ರೀಮಾನ್ ರಾಜೂಗೌಡರು ಮೂರು ಆಪಾದನೆಗಳನ್ನು ಮಾಡಿದ್ದಾರೆ. ಹೋದ ಸಾರಿ ಹೇಳಿದ್ದನ್ನು ಯಾವುದೂ ಮಾಡಿಲ್ಲ. ರೇಷ್ಮೆ ಖಾತೆಯನ್ನು ಕ್ಯಾಬಿನೆಟ್ ದರ್ಜೆಗೆ ಏರಿಸುವ ಬಗ್ಗೆ ಹೋದ ಸಾರಿ ಹೇಳಿದ್ದರು. ಅದೂ ಮಾಡಿಲ್ಲ. ಮತ್ತು ಅಡಿಷನಲ್ ಡೈರೆಕ್ಟರ್ ಪೋಸ್ಟ್ ಮಾಡಬೇಕು ಎಂದು ಹೇಳಿದ್ದು ಅದನ್ನು ಮಾಡಿಲ್ಲ ಎಂದಿದ್ದಾರೆ. ಇದರ ಜೊತೆಗೆ ಸಪರೇಟ್ ವರದಿ ಕೊಡುವ ಬಗ್ಗೆ ಹೇಳಿದ್ದು ಅದನ್ನು ಮಾಡಿಲ್ಲವೆಂದು ಹೇಳಿದ್ದಾರೆ. ಅವರು ಈ ರೀತಿಯಾದ ಮೂರು ಆಪಾದನೆಗಳನ್ನು ಮಾಡಿದ್ದಾರೆ. ಕ್ಯಾಬಿನೆಟ್ ದರ್ಜೆಗೆ ರೇಷ್ಮೆ ಖಾತೆಯನ್ನು ಏರಿಸುವ ಬಗ್ಗೆ ಹೇಳಬೇಕಾದರೆ ಇದು ನನ್ನ ಕೈಯಲ್ಲಿಲ್ಲ. ನಮ್ಮ ನಾಯಕರು ಇದ್ದಾರೆ, ನನ್ನನ್ನು ಕಿತ್ತುಹಾಕಿ ನನ್ನ ಇಲಾಖೆಯನ್ನು ಕಾಬಿನೆಟ್ ದರ್ಜೆಗೆ ಕೊಡಬೇಕು. ಅಥವಾ ನನ್ನನ್ನು ಕ್ಯಾಬಿನೆಟ್ ದರ್ಜೆಗೆ ಏರಿಸಬೇಕು. ಎಂಬುದು ನಮ್ಮ ನಾಯಕರ ಜವಾಬ್ದಾರಿ ಆಗಿರುವುದರಿಂದ ಈ ವಿಷಯದಲ್ಲಿ ಮಾನ್ಯ ರಾಜೂಗೌಡರು ನಾಯಕರನ್ನು ದಯಮಾಡಿ ಕೇಳಿಕೊಳ್ಳಬೇಕು ಎಂದು ಅವರಿಗೆ ಹೇಳುತ್ತೇನೆ. ಅಡಿಷನಲ್ ಡೈರೆಕ್ಟರ್ ಪೋಸ್ಟ್ ಮಾಡಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಅನೇಕ ಸಾರಿ ಕಾಗದ ಬರೆದಿದ್ದೇನೆ. ಹಾಗೂ ಒತ್ತಾಯ ಮಾಡಿ ಈ ಹುದ್ದೆಯನ್ನು ಕಾರ್ಯರೂಪಕ್ಕೆ ತರುವಂಥ ಕೆಲಸವನ್ನು ಮಾಡುತ್ತೇನೆ ಎಂದು ಮಾನ್ಯ ರಾಜೂಗೌಡರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಡಿಷನಲ್ ಡೈರೆಕ್ಟರ್ ಪೋಸ್ಟ್‌ನ ಅವಶ್ಯಕತೆ ಇದೆ. ಅದನ್ನು ಮಾಡುತ್ತೇನೆ. ಸಪರೇಟ್ ವರದಿ ಕೊಡಬೇಕು ಎಂದು ಕೇಳಿದ್ದಾರೆ. ಇದನ್ನು ಯಾರು ಮಾಡಬೇಕು? ನೋಡಿ ಮಾಡಿಸುತ್ತೇನೆ, ಯಾವ ಕೆಲಸವೂ ಆಗಿಲ್ಲ ಎಂದು ಮಾನ್ಯ ರಾಜೂಗೌಡರು ಮುಗುಮ್ಮಾಗಿ ಹೇಳಿ ಮುಗಿಸಿದ್ದಾರೆ. ಒಂದು ವಿಷಯವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ರೇಷ್ಮೆ ಇಲಾಖೆಯೇ ಇರಲಿ, ಕೈಗಾರಿಕೆ ಇಲಾಖೆ ಇರಲಿ ಯಾವುದೇ ಒಂದು ಇಲಾಖೆಗಳಾಗಲೀ ಇದರ ಕಾರ್ಯವೈಖರಿಯನ್ನು ಅಂದರೆ ಫರ್‌ಫಾರಮೆನ್ಸ್ ಅನ್ನು ಇವಾಲ್ಯೂಯೇಟ್ ಮಾಡುವಾಗ ಏನು ಆಧಾರ ಇಟ್ಟುಕೊಳ್ಳಬೇಕು ? ಯಾವುದು ಅಳತೆಗೋಲಾಗಬೇಕು ? ಖರ್ಚು ಮಾಡತಕ್ಕಂಥ ಹಣ ಎಷ್ಟು ? ಸಸ್ಪೆಂಡ್ ಆದವರು ಎಷ್ಟು ? ಎಷ್ಟು ಉತ್ಪತ್ತಿ ಆಯಿತು ? ನನ್ನ ದೃಷ್ಟಿಯಲ್ಲಿ ಇದು ಯಾವುದೂ ಅಲ್ಲ. ನನ್ನ ದೃಷ್ಟಿಯಲ್ಲಿ ಯಾವುದೇ ಒಂದು ಇಲಾಖೆ ಉತ್ತಮವಾಗಿ ಕೆಲಸ ಮಾಡುತ್ತದೆಯೇ ಇಲ್ಲವೇ ಅನ್ನುವುದಕ್ಕೆ

ಒಂದು ಅಳತೆಗೋಲನ್ನು ಇಟ್ಟು ಕೊಳ್ಳಬೇಕು. ಆ ಇಲಾಖೆಯಲ್ಲಿ ಬರುವಂಥ ಫಲಾನುಭವಿಗಳು ಯಾರು ಇದ್ದಾರೆ, ಆ ಫಲಾನುಭವಿಗಳಿಗೆ ಆ ಇಲಾಖೆಯಿಂದ ಎಷ್ಟು ಸಹಾಯ ಮತ್ತು ಸವಲತ್ತನ್ನು ಒದಗಿಸಿಕೊಟ್ಟಿದೆ ಎಂಬುದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಯೇ ಹೊರತು ಎಷ್ಟು ಉತ್ಪತ್ತಿಯಾಗಿದೆ. ಎಷ್ಟು ಜನ ಅಪಾಯಿಂಟ್‌ಮೆಂಟ್ ಆಗಿದ್ದಾರೆ, ಸಸ್ಪೆಂಡ್ ಎಷ್ಟು ಜನ ಆಗಿದ್ದಾರೆ, ಎಷ್ಟು ಜನ ರಿಮೂವ್ ಆಗಿದ್ದಾರೆ, ಇದು ಪ್ರಾಮುಖ್ಯವಲ್ಲ, ಸಂಬಂಧಪಟ್ಟ ಇಲಾಖೆಯಲ್ಲಿರುವಂಥ ಫಲಾನುಭವಿಗಳಿಗೆ ಆ ಇಲಾಖೆ ಎಷ್ಟರಮಟ್ಟಿಗೆ ಸಹಾಯ ಮತ್ತು ಸವಲತ್ತನ್ನು ಒದಗಿಸಿಕೊಟ್ಟಿದೆ ಎನ್ನುವುದನ್ನು ಆಧಾರವಾಗಿಟ್ಟುಕೊಂಡು ಆ ಇಲಾಖೆಯ ಕೆಲಸವನ್ನು ಪರಿಗಣಿಸಬೇಕು. ಈ ಇಲಾಖೆಯಲ್ಲಿ ಮಾಡಬೇಕಾದ ಕೆಲಸ ಯಾವುದು ಎಂದರೆ ರೈತರು ಬೆಳೆದಂಥ ಬೆಳೆಗೆ ಉತ್ತಮವಾದಂಥ ಬೆಲೆ ಕೊಡಬೇಕು ಹಾಗೂ ಆ ಬೆಳೆ ಚೆನ್ನಾಗಿ ಆಗಬೇಕು. ಈ ಎರಡು ಕೆಲಸವನ್ನು ಮಾಡುವುದರಲ್ಲಿ ಇಲಾಖೆಯ ಅಧಿಕಾರಿಗಳು ಹಾಗೂ ನಾನು ಸಾಕಷ್ಟು ಕೆಲಸ ಮಾಡಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ, ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಅದು ಏನೆಂದರೆ ಈ ಸದನದಲ್ಲಿ ಹಾಗೆ ಮತ್ತೊಂದು ಸದನದಲ್ಲಿ ಈ ವರ್ಷದಲ್ಲಿಯೇ ನಾಲ್ಕಾರು ಸಾರಿ ಒಂದೇ ವಿಷಯ ಪ್ರಸ್ತಾಪಕ್ಕೆ ಬಂದಿದೆ. ಮಾನ್ಯ ಚನ್ನಪ್ಪನವರು, ಮಾನ್ಯ ವೆಂಕಟರಾಮಯ್ಯನವರು, ಮಾನ್ಯ ರಾಜೂಗೌಡರು ಹಾಗೂ ಇತ್ತರ ಸದಸ್ಯರುಗಳು ಪ್ರಸ್ತಾಪ ಮಾಡಿದ ವಿಷಯವೇನೆಂದರೆ ಸರ್ಕಾರದ ತಹಬಂದಿಯಲ್ಲಿರುವ ರೇಷ್ಮೆ ನೂಲು ಬಿಚ್ಚುವ ಘಟಕಗಳಲ್ಲಿ ನಷ್ಟ ಜಾಸ್ತಿಯಾಗುತ್ತಿದೆ. ಅದನ್ನು ತಡೆಗಟ್ಟಬೇಕು. ಎಂಬುದಾಗಿದೆ. ಸನ್ಮಾನ್ಯ ರಾಜೂಗೌಡರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಬ್ರಿಟೀಷ್‌ನವರು ಆಳುವಂಥ ಈಸ್ಟ್ ಇಂಡಿಯಾ ಕಂಪನಿಯವರು ಯಾರು ಇದ್ದರೋ ಆಗಲೂ ಕೂಡ ಈ ರೇಷ್ಮೆನೂಲನ್ನು ಬಿಚ್ಚುವ ಘಟಕಗಳು ನಷ್ಟವನ್ನು ಅನುಭವಿಸುತ್ತಿದ್ದವು. ಮೈಸೂರು ಮಹಾರಾಜರು ಆಡಳಿತ ನಡೆಸತಕ್ಕಂಥ ಕಾಲದಲ್ಲಿ ಕೂಡ ಈ ಘಟಕಗಳಿಗೆ ನಷ್ಟವಾಗುತ್ತಿತ್ತು: ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಮೇಲೂ ೩೯ ವರ್ಷಗಳು ಕಾಂಗ್ರೆಸ್ ಪಕ್ಷದವರು ಆಳತಕ್ಕಂಥ ಸಂದರ್ಭದಲ್ಲೂ ಕೂಡ ಈ ಘಟಕಗಳು ನಷ್ಟವನ್ನು ಅನುಭವಿಸಿವೆ. ನಾನು ಮಂತ್ರಿಯಾಗಿದ್ದೇನೆ. ಈಗಲೂ ನಷ್ಟವನ್ನು ಅನುಭವಿಸುತ್ತಿದೆ. ಒಂದು ಮಾತನ್ನು ಹೇಳುತ್ತೇನೆ ಹೆಚ್ಚು ಕಡಿಮೆಯಾಗಿ ಸಂದರ್ಭ ಬಂದು ಅವರು ಮಂತ್ರಿಯಾದರೂ ಕೂಡ ನಷ್ಟವಾಗುತ್ತದೆ. ನಷ್ಟವನ್ನು ತಡೆಯಲಿಕ್ಕೆ ಪ್ರಯತ್ನವನ್ನು ಮಾಡಿದ್ದು ಸ್ವಲ್ಪ ಮಟ್ಟಿಗೆ ಅದರಲ್ಲೂ ಉತ್ತಮ ಫಲಿತಾಂಶವನ್ನು ಪಡೆದಿದ್ದೇವೆ. ಆದರೂ ಕೂಡ ಒಂದು ಸತ್ಯವನ್ನು ಒಪ್ಪಿಕೊಳ್ಳುತ್ತೇವೆ. ನಾವು ಏನು ಪ್ರಯತ್ನ ಮಾಡಿದರೂ ಕೂಡ ಸರ್ಕಾರದ ಹೊಣೆಗಾರಿಕೆಯಲ್ಲಿರುವಂಥ ರೇಷ್ಮೆ ದಾರವನ್ನು ಬಿಚ್ಚುವಂಥ ಯಾವುದೇ ಘಟಕದಲ್ಲಿ ಲಾಭವನ್ನು ಮಾಡುವುದು ಅಸಾಧ್ಯ. ಕಾರಣವಿಷ್ಟೆ. ಈ ರಾಷ್ಟ್ರದಲ್ಲಿ ೪-೬ ಜನ ಉದ್ಯಮಿಗಳು ಇದ್ದಾರೆ. ಕಲ್ಲಿನ ಉದ್ಯಮ ಮಾಡಿದ್ದಾರೆ, ನಾರಿನ ಉದ್ಯಮ ಮಾಡಿದ್ದಾರೆ ಮಣ್ಣಿನ ಉದ್ಯಮ ಮಾಡಿದ್ದಾರೆ. ಸೊಪ್ಪಿನ ಉದ್ಯಮ ಮಾಡಿದ್ದಾರೆ, ಗೊಬ್ಬರದ ಉದ್ಯಮ ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ ಇಡೀ ರಾಷ್ಟ್ರದಲ್ಲಿ ಯಾವುದೇ ಉದ್ಯಮ ಫಿಲೇಚರ್ ತೆಗೆಯುವಂಥ ದುಸ್ಸಾಹಕ್ಕೆ ಕೈ ಹಾಕಿಲ್ಲ. ಏತಕ್ಕೆ ಸ್ವಾಮಿ? ವಿಶ್ವದ ವಿಷಯ ನನಗೆ ಗೊತ್ತಿಲ್ಲ. ಇಡೀ ರಾಷ್ಟ್ರದಲ್ಲಿ ಯಾವುದೇ ಒಂದು ಉದ್ಯಮ ರೇಷ್ಮೆ ನೂಲನ್ನು ಬಿಚ್ಚುವಂಥ ಗಿರಣಿಯಂಥ ದುಸ್ಸಾಹದ ಕೆಲಸಕ್ಕೆ ಕೈ ಹಾಕಿಲ್ಲ. ಕಾರಣವೇನೆಂದರೆ, ಅದು ನಷ್ಟವಾಗಿ ನಡೆಯುವುದರಿಂದ ಈ ರೀತಿ ಮಾಡಲು ಯಾರೂ ಕೈ ಹಾಕುವುದಿಲ್ಲ, ಇದನ್ನು ನಾನು ಹೇಳುತ್ತಿಲ್ಲ. ಈ ರಾಷ್ಟ್ರದ ಅನೇಕ ಜನ ತಜ್ಞರಿಂದ ಕೂಡಿದ ಒಂದು ಸಮಿತಿ ಮಾಡಿ, ಈ ಸಮಿತಿಯವರು ಎಲ್ಲಾ ವಿಷಯವನ್ನು ಪರಿಶೀಲನೆ ಮಾಡಿ ಕೊನೆಗೆ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದೇನೆಂದರೆ, ಫಿಲೇಚರ್‌ನಲ್ಲಿ ಅನಿವಾರ್ಯವಾಗಿ ನಷ್ಟ ಆಗಿಯೇ ಆಗುತ್ತದೆ. ವಿಧಿಯೇ ಇಲ್ಲ. ನಷ್ಟವನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂದು. The loss in the filature is inevitable. They further came to the conculsion that inspite of the loss, filature should be continued in order to strengthen the Sericulture industry in the State. ಕೇಂದ್ರ ಸರ್ಕಾರದವರು ೧೯೬೮ ರಲ್ಲಿ ನೇಮಿಸಿದಂಥ ತಜ್ಞರ ಸಮಿತಿಯ ಒಂದು ವರದಿಯ ವಾಕ್ಯವನ್ನು ಓದಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

"Having regard to the various factors indicated above, the Committee strongly recommends that the Government Silk Filature should be maintained notwithstanding the loss suffered by it." It is inevitable. Still these Filatures should be continued in order to strengthen the Industry.

ಆದ್ದರಿಂದ ಸರ್ಕಾರದ ವಶಿಯಲ್ಲಿರುವಂಥ ರೇಷ್ಮೆ ದಾರವನ್ನು ಬಿಚ್ಚುವ ಗಿರಣಿಯಲ್ಲಿ ನಷ್ಟವನ್ನು ತಡೆಯಲಿಕ್ಕೆ ಮಾಡಿದ ಪ್ರಯತ್ನಗಳ ಪಟ್ಟಿಯನ್ನೂ ಕೂಡ ಸಾನಂ ಕೊಡಲಿಕ್ಕೆ ಸಿದ್ಧನಿದ್ದೇನೆ. ಈ ವಿಶೇಷ ಕಾರಣದಿಂದಾಗಿ, ಈ ಘಟಕಗಳಲ್ಲಿ ಆಗುವ ನಷ್ಟವನ್ನು ಸಂಪೂರ್ಣವಾಗಿ ತಡೆಯುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ನನ್ನ ಸ್ನೇಹಿತರ ಗಮನಕ್ಕೆ ತಂದು, ನನ್ನ ಇಲಾಖೆಯ ಬೇಡಿಕೆಯ ಮೇಲೆ ಯಾರ್‍ಯಾರು ಚರ್ಚೆಯಲ್ಲಿ ಭಾಗವಹಿಸಿದ್ದಾರೋ, ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೋ ಈ ಇಲಾಖೆಯಲ್ಲಿ ರಿವಲಿಗತ್ಯವನ್ನು ಮನವರಿಕೆ ಮಾಡಿಕೊಟ್ಟಿದ್ದಾರೋ ಅವರೆಲ್ಲರಿಗೂ ವಂದನೆಯನ್ನು ಅರ್ಪಿಸುತ್ತೇನೆ. ಈ ಇಲಾಖೆಗೆ ಕೊಡುವ ಹಣವು ಅನಾವಶ್ಯಕ ಕಾರಣಗಳಿಗಾಗಿ ಖರ್ಚಾಗುತ್ತಿದೆ ಎಂಬುದನ್ನು ಯಾರೋ ಒಬ್ಬರು ಪ್ರಸ್ತಾಪ ಮಾಡಿದ್ದಾರೆ. ಅನಾವಶ್ಯಕ ಕಾರಣಗಳಿಗಾಗಿ ಖರ್ಚಾಗ ತಕ್ಕಂಥ ಪರಿಸ್ಥಿತಿ ಬಂದಾಗ ನನ್ನ ಎಲ್ಲಾ ಸಂಪೂರ್ಣ ಶಕ್ತಿಯನ್ನು ಬಿಟ್ಟು ಅನಾವಶ್ಯಕವಾಗಿ, ಅನ್ಯಾಯವಾಗಿ ಹಣ ಖರ್ಚಾಗುವಂಥ ಸಂದರ್ಭದಲ್ಲಿ ತಡೆಯಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಟ್ಟು ದಯಾಮಾಡಿ ಈ ಬೇಡಿಕೆಯನ್ನು ಮಂಜೂರು ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳುಬಾಗಲು).—ಸಭಾಧ್ಯಕ್ಷರೇ, ಕೋಲಾರ ಜಿಲ್ಲೆಗೆ ಅನ್ಯಾಯ ಆಗಿರುವಂಥದ್ದನ್ನು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅವಶ್ಯಕತೆ ಇಲ್ಲದ ಕಡೆ ಬಿಲ್ಡಿಂಗ್‌ಗಳನ್ನು ಕಟ್ಟಿಸಿದ್ದೀರಿ. ಆದರೆ ಅವಶ್ಯಕತೆ ಇದ್ದ ಕಡೆ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ ಯೋಚನೆ ಮಾಡಬೇಕು. ರೋಗರಹಿತ ಮೊಟ್ಟೆ ಕೊಡುವ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಚಿಕ್ಕಬಳ್ಳಾಪುರದಲ್ಲಿ ಕೊಟ್ಟಿದ್ದಾರೆ, ಬೇರೆ ಕಡೆ ಕೊಟ್ಟಿಲ್ಲ. ನಮ್ಮಲ್ಲಿ ಬೇಕಾದ ಕಡೆ ಗ್ರೈನೇಜ್ ಕಟ್ಟಡಗಳನ್ನು ಕಟ್ಟಿಸಿದ್ದೀರಿ. ಮಾನ್ಯ ರಾಜೂಗೌಡರು ೨೫ ಕೋಟಿ ರೂಪಾಯಿ ವಸೂಲಾಗಿದೆ ಎಂದು ಹೇಳಿದರು. ಆ ೨೫ ಕೋಟಿ ರೂಪಾಯಿಯಲ್ಲಿ ಅನುಕೂಲ ಮಾಡಿಕೊಡಿ ಸಬ್ಸಿಡಿ ಕೊಡಿ ಎಂದು ಕೇಳಿದ್ದೆವು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಿಲ್ಲ, ಖರ್ಚು ಮಾಡಿಬಿಡುತ್ತೇವೆ ಎಂದು ಮುಗಂ ಆಗಿ ಹೇಳಿದ್ದಾರೆ, ಸ್ಪಷ್ಟವಾಗಿ ರೈತರಿಗೆ ಇಂಥ ಅನುಕೂಲವನ್ನು ಮಾಡಿಕೊಡುತ್ತೇವೆ ಎಂದು ಹೇಳಿ.

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ. ಕೋಲಾರದಲ್ಲಿ ರೇಷ್ಮೆ ಮೊಟ್ಟೆ ಮಾಡುವ ಘಟಕದ ಅವಶ್ಯಕತೆ ಇಲ್ಲ. ಈಗಾಗಲೇ ಸಾಕಷ್ಟು ಇದೆ. ಅವರಿಗೆ ಕಟ್ಟಡದ ಅವಶ್ಯಕತೆ ಇದೆ. ಕೋಲಾರದಲ್ಲಿ ಬಿತ್ತನೆ ಕೋಠಿ ಅವಶ್ಯಕತೆ ಇದೆ ಎಂದು ಗೊತ್ತಾಗಿದೆ. ೧೯೬೫-೬೬ರಲ್ಲಿ ಅದನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ರೈತರ ಬಗ್ಗೆ ಹೇಳಲಿಲ್ಲ.

ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು).—ಕೋಲಾರ ಜಿಲ್ಲೆಯಲ್ಲಿ ಬಿತ್ತನೆ ಕೋಠಿ ಮಾಡುವುದು ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಆದರೆ ಮಾಲೂರಿನಲ್ಲಿ ಬಿತ್ತನೆ ಕೋಠಿಗೆ ಸುತ್ತಲೂ ಕಾಂಪೌಂಡ್ ಹಾಕಬೇಕೆಂದು ಎರಡು ವರ್ಷದ ಹಿಂದೆ ಕಂಬ, ಕಲ್ಲು ಸಾಗಿಸಿದರು, ಈಗ ಅದರಲ್ಲಿ ಸ್ವಲ್ಪ ಭಾಗ ಇದೆ. ಮಿಕ್ಕಿದ್ದು ಏನಾಗಿದೆಯೋ ಗೊತ್ತಿಲ್ಲ. ಒಂದೆರಡು ಸಾರಿ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಕಾಗದ ಬರೆದೆ. ಅಲ್ಲಿ ಸಾಗಿಸಿದ್ದಂಥ ಮಾಲು ಇವತ್ತಿನ ದಿವಸ ಇದ್ದ ಹಾಗೆ ಕಾಣುತ್ತಿಲ್ಲ. ಸುತ್ತಲೂ ಇರತಕ್ಕ ಜನ ಎರಡು ಎಕರೆ ಜಾಗವನ್ನು ಒತ್ತುವರಿ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿ ಸರಿಯಾದ ಕಾಂಪೌಂಡ್ ಹಾಕಿಸುವುದಲ್ಲದೆ ಹಿಂದೆ ಹಾಕಿದ್ದ ಮಾಲು ಎಲ್ಲಿದೆ ಎಂಬುದನ್ನು ಹುಡುಕುತ್ತೀರಾ ಎಂದು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ ಮಾನ್ಯ ವೆಂಕಟರಾಮಯ್ಯನವರ ಮನಸ್ಸಿಗೆ ಸಮಾಧಾನ ಆದಂತೆ ಕಾಣುವುದಿಲ್ಲ. ಬೆಲೆ ಸ್ಥಿರೀಕರಣ ನಿಧಿಯಲ್ಲಿನ ೨೩ಕೋಟಿ ರೂಪಾಯಿ ಹಣವನ್ನು ರೈತರಿಗೆ ಖರ್ಚು ಮಾಡಬೇಕೆಂದು ಈಗಾಗಲೇ ಹೇಳಿದ್ದೇನೆ. We have given undertaking before the High Court. If we spend even a pie for any other purpose, we will be committing contempt of the court. ಈ ರಾಜ್ಯದಲ್ಲಿ ವಿನಿಮಯ ಕೇಂದ್ರವನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಕೆಲವರು ಹೈಕೋರ್ಟ್ ಮುಂದೆ ಹೋಗಿದ್ದಾರೆ. ನಿರ್ದಿಷ್ಟವಾದ ಭರವಸೆಯನ್ನು ಹೈಕೋರ್ಟಿಗೆ ಕೊಟ್ಟಿದೆ. ವಿನಿಮಯ ಕೇಂದ್ರದಿಂದ ಬರುವ ತೆರಿಗೆ ಹಣವನ್ನು ಈ ಉದ್ಯಮದ ಅಭಿವೃದ್ಧಿಗಾಗಿಯೇ ಖರ್ಚುಮಾಡುತ್ತೇವೆ, ಬೇರೆಯದಕ್ಕೆ ಮಾಡುವುದಿಲ್ಲ. ಬೆಲೆ ಸ್ಥಿರೀಕರಣ ನಿಧಿಯಲ್ಲಿರುವ ೨೩ ಕೋಟಿ ರೂಪಾಯಿಗಳನ್ನು ಈ ಉದ್ಯಮಕ್ಕಾಗಿಯೇ ಖರ್ಚು ಮಾಡುತ್ತೇವೆ, ಅದು ರೈತರಿಗಿರಬಹುದು. ನೂಲು ತೆಗೆಯುವವರಿಗೆ ಇರಬಹುದು ಬಟ್ಟೆ ಮಾಡುವವರಿಗೆ ಇರಬಹುದು, ಯಾರಿಗೇ ಇರಬಹುದು. ಇದು ಸನ್ಮಾನ್ಯ ದೇವೀರಪ್ಪನವರು ಕೇಳಿದ ಮೂಲಭೂತ ಪ್ರಶ್ನೆಗೆ ಉತ್ತರ. ರಾಜ್ಯದಲ್ಲಿ ೮೨ ಬಿತ್ತನೆ ಕೋಠಿಗಳಿದ್ದವು. ಅವುಗಳಿಗೆಲ್ಲಾ ಸರ್ಕಾರದ ಕಟ್ಟಡಗಳು ಇಲ್ಲದೇ ಇರುವಾಗ ಬಾಡಿಗೆ ಕಟ್ಟಡವನ್ನು ಅದು ಹೇಗಿದೆಯೋ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳದೆ, ಕಲ್ಲಿದೆಯೋ, ಮಣ್ಣಿದೆಯೋ ನೋಡದೆ ಉತ್ತಮವಾಗದೇ ಇರುವ ಕಟ್ಟಡಗಳಲ್ಲಿ ಶುರು ಮಾಡಿದ್ದೇವೆ. ವಿಶ್ವ ಬ್ಯಾಂಕ್ ಯೋಜನೆಯಲ್ಲಿ ೧೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡಿ ಅತ್ಯಾಧುನಿಕವಾದ ಹಾಗೂ ಸುಸಜ್ಜಿತವಾದ ಕಟ್ಟಡಗಳನ್ನು ಕಟ್ಟಿದ್ದೇವೆ. ಇದನ್ನು ಕಟ್ಟಿದಮೇಲೆ ಬಾಡಿಗೆ ಕಟ್ಟಡದಲ್ಲಿ ಶುರು ಮಾಡಿದ ಸಣ್ಣಪುಟ್ಟ ಬಿತ್ತನೆ ಕೋಠಿಗಳನ್ನು ವರ್ಗಾವಣೆ ಮಾಡಬೇಕಾಗಿದೆ. ನೆಲಮಂಗಲದಲ್ಲಿರುವುದನ್ನು ದೊಡ್ಡಬಳ್ಳಾಪುರಕ್ಕೆ, ಕೋಲಾರದಲ್ಲಿರುವುದನ್ನು ಸೂಲಿಬೆಲೆಗೆ ಮಾಡಬೇಕಾಗುತ್ತದೆ ಸ್ವಂತ ಕಟ್ಟಡ ಇರುವುದರಿಂದ, ಸುಸಜ್ಜಿತ ಕಟ್ಟಡ ಇರುವುದರಿಂದ ಎಲ್ಲೆಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದೇವೋ ಅದನ್ನು ಅನಿವಾರ್ಯವಾಗಿ ವರ್ಗಾವಣೆ ಮಾಡಬೇಕಾಗುತ್ತದೆ, ದಯಮಾಡಿ ಶಾಸಕರುಗಳು ಸಹಿಸಿಕೊಳ್ಳಬೇಕು. ಅವರ ದೃಷ್ಟಿಯಿಂದ, ಬೆಳೆಗಾರರ ದೃಷ್ಟಿಯಿಂದ, ಇದನ್ನು ಮಾಡುತ್ತಿದ್ದೇವೆ. ಮಾಲೂರಿನಲ್ಲಿ ಬಿತ್ತನೆ ಕೋಠಿ ಅದನ್ನು ನೋಡಿದ್ದೇನೆ. ಚೆನ್ನಾಗಿ ಕೆಲಸ ಮಾಡುತ್ತಿದೆ. ಅದಕ್ಕೆ ಕಾಂಪೌಂಡ್ ಬೇಕು ಎಂದು ಹೇಳುತ್ತಾರೆ. ಹಾಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ರಾಜ್ಯಮಟ್ಟದಲ್ಲಿ ನಾವು ರೇಷ್ಮೆ ವ್ಯಾಪಾರದ ದೃಷ್ಟಿಯಿಂದ ಒಂದು ರೇಷ್ಮೆ ವಿನಿಮಯ ಕೇಂದ್ರವನ್ನು ತೆರೆದಿದ್ದೇವೆ ಮತ್ತು ರೇಷ್ಮೆ ಮಾರಾಟ ಮಂಡಲಿ ಕೂಡ ಪ್ರಾರಂಭ ಮಾಡಿದ್ದು ಅದು ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ರೇಷ್ಮೆ ವಿನಿಮಯ ಕೇಂದ್ರ, ರೇಷ್ಮೆ ಮಾರಾಟ ಮಂಡಲಿಯನ್ನು ಸರ್ಕಾರ ಸ್ಥಾಪನೆ ಮಾಡುವುದಕ್ಕಿಂತ ಮುಂಚಿತವಾಗಿ ಸಹಕಾರ ಕ್ಷೇತ್ರದಲ್ಲಿ ರಾಜ್ಯಮಟ್ಟದ ರೇಷ್ಮೆ ಮಾರಾಟ ಸಹಕಾರ ಸಂಘ ಕೆಲಸ ಮಾಡುತ್ತಿತ್ತು. ಅದನ್ನು ಕಾಲಕ್ರಮೇಣ ಫೆಡರೇಷನ್ ಎಂದು ಪರಿವರ್ತನೆ ಮಾಡಿಕೊಂಡಿದ್ದರು. ನಾನು ಈ ವಿಷಯದಲ್ಲಿ ವಿವರಣೆಯಿಂದ ಕೂಡಿದ ಉತ್ತರವನ್ನು ಬಯಸುತ್ತೇನೆ. ರಾಜ್ಯಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಫೆಡರೇಷನ್ ಆಗಲೀ. ತಾವು ಪ್ರಾರಂಭ ಮಾಡಿರುವ ರೇಷ್ಮೆ ವಿನಿಮಯ ಕೇಂದ್ರವಾಗಲೀ ಯಾವ ರೀತಿ ಕೆಲಸ ಮಾಡುತ್ತಿದೆ? ಸರ್ಕಾರ ಏನು ವ್ಯವಸ್ಥೆ ಮಾಡಿದೆ? ರೇಷ್ಮೆ ಮಾರಾಟ ಮಂಡಲಿ ಮತ್ತು ರೇಷ್ಮೆ ವಿನಿಮಯ ಕೇಂದ್ರ ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುವ ರೀತಿಯಲ್ಲಿ ಕೆಲಸಕಾರ್ಯ ಮಾಡುವ ವ್ಯವಸ್ಥೆ ಮಾಡಬೇಕು. ಅಥವಾ ಅಗತ್ಯವಿಲ್ಲ ಎಂದರೆ ಫೆಡರೇಷನನ್ನು ಮತ್ತು ವಿನಿಮಯ ಕೇಂದ್ರವನ್ನು ರದ್ದು ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡುತ್ತದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಗೂಡನ್ನು ಮಾರಾಟ ಮಾಡುವುದಕ್ಕೆ ಮಾರುಕಟ್ಟೆ ದೊರೆತು ೧೨–೧೫ ವರ್ಷಕ್ಕಿಂತ ಹೆಚ್ಚಾಗಿದೆ. ಆ ಕಾಲದಿಂದಲೂ ಆ ಕೇಂದ್ರದಲ್ಲಿ ತೆರಿಗೆ ರೂಪದಲ್ಲಿ ವಸೂಲು ಮಾಡಿದ ಹಣ ಮತ್ತು ಮೊನ್ನೆ ಮೊನ್ನೆ ಪ್ರಾರಂಭ ಮಾಡಿದ ವಿನಿಮಯ ಕೇಂದ್ರದಿಂದ ಬಂದ ಹಣ ೨೩ ಕೋಟಿ ರೂಪಾಯಿಗಿಂತ ಹೆಚ್ಚಾಗಿದೆ. ರೇಷ್ಮೆ ಅಭಿವೃದ್ಧಿಗಾಗಿ, ನೂಲು ಬಿಚ್ಚುವವರು, ಬೆಳೆಯುವವರು ಮತ್ತು ಆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉಪಯೋಗ ಮಾಡುತ್ತೇವೆಂದು ಹೈಕೋರ್ಟ್‌ನಲ್ಲಿ ಕೂಡ ಕಮಿಟ್ ಮಾಡಿಕೊಂಡಿದ್ದಾರೆ. ಆ ಹಣದಲ್ಲಿ ೨೭ ಲಕ್ಷ ರೂಪಾಯಿ

ಮಾತ್ರ ಖರ್ಚು ಮಾಡಿದ್ದಾರೆಂದು ಮಂತ್ರಿಗಳ ಉತ್ತರದಿಂದ ಗೊತ್ತಾಗುತ್ತದೆ. ದಯಮಾಡಿ ಮುಂದಿನ ಮೂರು ವರ್ಷಗಳಿಗೆ ಒಂದು ಕಾರ್ಯಕ್ರಮ ಹಾಕಿ ಶೇಖರಣೆ ಮಾಡಿರತಕ್ಕ ೨೩ ಕೋಟಿ ರೂಪಾಯಿಗಳನ್ನು ರೇಷ್ಮೆ ಅಭಿವೃದ್ಧಿಗೇ ಖರ್ಚು ಮಾಡುವುದಕ್ಕೆ ಕಾರ್ಯಕ್ರಮವನ್ನು ರೂಪಿಸುತ್ತೀರಾ ಎಂದು ಕೇಳಬಯಸುತ್ತೇನೆ.

ಅಧ್ಯಕ್ಷರು.—ನೀವು ಭಾಷಣ ಶುರು ಮಾಡಿದರೆ ಹೇಗೆ? ವಿವರಣೆ ಕೇಳಿ.

ಶ್ರೀ ಎಸ್. ಪುಟ್ಟಸ್ವಾಮಿ.—ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಸಿಗಲಿಲ್ಲ. ರೇಷ್ಮೆ ಮೊಟ್ಟೆ ತಯಾರು ಮಾಡುವವರಿಗೆ ಅನುಕೂಲವಾಗುವಂತೆ ೪೦-೫೦ ಪರ್ಸೆಂಟ್ ಮೊಟ್ಟೆಯನ್ನು ತಯಾರು ಮಾಡುವುದಕ್ಕೆ ಸರ್ಕಾರದವರು ಗ್ರೈನೇಜ್‌ಗಳಲ್ಲಿ ವ್ಯವಸ್ಥೆ ಮಾಡಿದ್ದಾರೆ. ಇನ್ನುಳಿದ ಮೊಟ್ಟೆಯನ್ನು ಖಾಸಗಿ ಮೊಟ್ಟೆ ತಯಾರಕರಿಂದ ಮಾಡಿಸುತ್ತಾರೆ. ಅದಕ್ಕೆ ಯಾವುದಾದರೂ ಕಾರ್ಪೊರೇಷನ್ ಅಥವಾ ಸಂಸ್ಥೆಯನ್ನು ಮಾಡಿ ಅವರ ಆಶ್ರಯದಲ್ಲಿ ಉತ್ತಮವಾದ ಮೊಟ್ಟೆಯನ್ನು ತಯಾರು ಮಾಡತಕ್ಕ ಸಲಕರಣೆಗಳು ಮತ್ತು ಹಣದ ನೆರವನ್ನು ಕೊಡುವ ವ್ಯವಸ್ಥೆ ಮಾಡಿ ೧೦೦ಕ್ಕೆ ೧೦೦ರಷ್ಟು ಮೊಟ್ಟೆಯನ್ನು ಸರ್ಕಾರವೇ ತಯಾರು ಮಾಡುವ ಕಾಲ ಬರುವವರೆಗೆ ಸುಸಜ್ಜಿತವಾದ ವ್ಯವಸ್ಥೆ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಬಹುಶಃ ಎಲ್ಲರ ಕಣ್ಣು ೨೩ ಕೋಟಿ ಮೇಲೆ ಇದ್ದ ಹಾಗೆ ಇದೆ. ನಾನು ಆಗಲೇ ಹೇಳಿದ್ದೇನೆ ಈ ೨೩ ಕೋಟಿ ರೂಪಾಯಿಯನ್ನು ಅಪವ್ಯಯ ಮಾಡುವುದಕ್ಕೆ ಅಥವಾ ದುರುಪಯೋಗ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಬೇರೆ ಯಾವುದೇ ಇಲಾಖೆಯ ಕೆಲಸಕ್ಕೆ ಖರ್ಚು ಮಾಡುವುದಕ್ಕೆ ಅವಕಾಶ ಇಲ್ಲ, ಇದೇ ಉದ್ಯಮದ ಅಭಿವೃದ್ಧಿಗೆ ಖರ್ಚು ಮಾಡುತ್ತೇವೆಂದು ಹೇಳಿದ್ದೇನೆ. ಯಾವಯಾವುದಕ್ಕೆ ಖರ್ಚು ಮಾಡಬೇಕು ಎಂಬುದನ್ನು ಈ ವರ್ಷ ಪರಿಶೀಲನೆ ಮಾಡಿ ಮಾಡುತ್ತೇವೆ. ಎರಡನೆಯದಾಗಿ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ ಅವಶ್ಯಕತೆ ಇಲ್ಲದಿದ್ದರೆ ಏತಕ್ಕೆ ಇಟ್ಟುಕೊಂಡಿದ್ದೀರಿ ಎಂದು ಕೇಳಿದ್ದಾರೆ. ನಾನು ಉತ್ತರ ಕೊಡುವಾಗ ಅದರ ಬಗ್ಗೆ ಹೇಳಿದ್ದೇನೆ. ಕರ್ನಾಟಕ ರೇಷ್ಮೆ ಮಾರಾಟ ಮಂಡಲಿಯ ಉದ್ದೇಶ ರಾಜ್ಯದಲ್ಲಿ ರೇಷ್ಮೆ ಬೆಳೆಯನ್ನು ಸ್ಥಿಮಿತವಾಗಿ ಒಂದು ಹಂತದಲ್ಲಿ ಇಟ್ಟುಕೊಳ್ಳುವುದು, ಫೆಡರೇಷನ್ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆದಿದೆ. ಯಾವ ಮೂಲ ಉದ್ದೇಶ ಸಾಧನೆಗಾಗಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯನ್ನು ಮಾಡಿದ್ದಾರೋ ಅದೇ ಉದ್ದೇಶ ಸಾಧನೆ ಮಾಡುವುದಕ್ಕೆ ಸಿಲ್ಕ್ ಫೆಡರೇಷನ್ ಅವಶ್ಯಕತೆ ಇಲ್ಲ. ಇದನ್ನು ಅವರಿಗೆ ತಿಳಿಸಿದ್ದೇನೆ. ಅಂತಿಮ ತೀರ್ಮಾನ ತೆಗೆದುಕೊಳ್ಳುವವರು ಸಹಕಾರ ಮಂತ್ರಿಗಳು. ಅವರಿಗೆ ಈ ವಿಷಯ ತಿಳಿಸಿದ್ದೇನೆ. ಖಾಸಗಿ ಮೊಟ್ಟೆ ತಯಾರಕರಿಗೆ ಕಾರ್ಪೋರೇಷನ್ ಮಾಡುವುದಕ್ಕೆ ಅಥವಾ ಸೌಲಭ್ಯಗಳನ್ನು ಮಾಡುವುದಕ್ಕೆ ಆಗುತ್ತದೆಯೋ ಎಂದು ಕೇಳಿದ್ದಾರೆ. ಅವರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಿರುವ ಪರಿಸ್ಥಿತಿಯಲ್ಲಿ ನಮಗೆ ಬೇಕಾಗುವ ಮೊಟ್ಟೆಯಲ್ಲಿ ಕೇವಲ ೫೦ ಪರ್ಸೆಂಟ್ ಮಾತ್ರ ಸರ್ಕಾರ ಒದಗಿಸುವುದಕ್ಕೆ ಸಾಧ್ಯತೆ ಇದೆ. ಇನ್ನು ೫೦ ಪರ್ಸೆಂಟ್ ಖಾಸಗಿ ಮೊಟ್ಟೆ ತಯಾರಕರು ಮಾಡುತ್ತಿದ್ದಾರೆ. ಈಗ ಒಂದು ನೀತಿಯನ್ನು ಅಳವಡಿಸಿ ಕೊಂಡಿದ್ದೇವೆ. ಇನ್ನು ಮುಂದೆ ಯಾವುದೇ ಖಾಸಗಿ ಮೊಟ್ಟೆ ತಯಾರು ಮಾಡುವವರಿಗೆ ಪರವಾನಗಿ ಕೊಡುವುದಿಲ್ಲ ಎಂದು ತೀರ್ಮಾನಕ್ಕೆ ಬಂದಿದ್ದೇವೆ. ಇದರ ಬಗ್ಗೆ ಒತ್ತಡ ಇದ್ದರೂ ಕೂಡ ಮೊಟ್ಟೆ ತಯಾರು ಮಾಡುವ ಪಾವಿತ್ರ್ಯತೆ ಮತ್ತು ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ಯಾಗಿ ಮೊಟ್ಟೆ ತಯಾರು ಮಾಡುವವರಿಗೆ ಲೈಸೆನ್ಸ್ ಕೊಡುವುದಿಲ್ಲವೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಈಗ ಇರುವವರಿಗೆ ಯಾವ ರೂಪದಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯವೋ ಆ ರೀತಿ ಮಾಡುತ್ತೇವೆ. ಈಗಾಗಲೇ ಮಾಡುತ್ತಿದ್ದೇವೆ, ಮುಂದೆಯೂ ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಸ್ವಾಮಿ, ಸಿಲ್ಕ್ ಫಿಲೇಚರ್‌ಗಳಲ್ಲಿ ಕೆಲಸಗಾರರನ್ನು ತೆಗೆದುಕೊಳ್ಳುವಾಗ ಸಂದರ್ಶನ ಸಮಿತಿ ಎಂದು ಮಾಡಿ ಅದರ ಮೂಲಕ ತೆಗೆದು ಕೊಳ್ಳಬೇಕೆಂದು ಮಾಡಿದ್ದೀರಿ. ಈ ಸಮಿತಿಯಲ್ಲಿ ಬರೀ ತಮಿಳ್ನಾಡಿನವರನ್ನೇ ಹಾಕಿದ್ದೀರಿ. ಬಹುಶಃ ಇವರು ತಮಿಳ್ನಾಡಿನವರೆ ಸಿಲ್ಕ್ ಎಕ್ಸ್‌ಪರ್ಟ್ಸ್ ಎಂದು ಭಾವಿಸಿಕೊಂಡು ಹಾಕಿರಬಹುದು. ಆದರೆ ಇವರು ಕೆಲಸಗಾರರನ್ನು ತೆಗೆದುಕೊಳ್ಳುವಾಗ ಕರ್ನಾಟಕದವರಿಗೆ ಆದ್ಯತೆ ಕೊಡದೇ ಬರೀ ತಮಿಳ್ನಾಡಿನವರನ್ನೇ ತೆಗೆದುಕೊಂಡಿದ್ದಾರೆ. ಇದರಿಂದ ನಮ್ಮ ಕರ್ನಾಟಕದವರಿಗೆ ತುಂಬಾ ಅನ್ಯಾಯವಾಗುತ್ತಿದೆ. ಈ

ಸಮಿತಿಯಲ್ಲಿ ತಮಿಳ್ನಾಡಿನ ಎಕ್ಸ್‌ಪರ್ಟ್ಸ್ ಎಂದು ಯಾರನ್ನು ನೇಮಕ ಮಾಡಿದ್ದೀರಿ ಅವರಿಗೆ ಬದಲು ನಮ್ಮ ಕರ್ನಾಟಕದವರನ್ನೇ ನೇಮಕ ಮಾಡಿ. ಅವರಂತೆಯೇ ನಮ್ಮವರೂ ಸಿಲ್ಕ್ ಫಿಲೇಚರ್‌ನಲ್ಲಿ ಎಕ್ಸ್‌ಪರ್ಟ್ಸ್ ಆಗಿದ್ದಾರೆ. ನಮ್ಮವರನ್ನು ನೇಮಕ ಮಾಡಿದರೆ ಕನ್ನಡದವರಿಗೆ ಅಲ್ಲಿ ಕೆಲಸ ಸಿಕ್ಕಿ ಅನುಕೂಲವಾಗುತ್ತದೆ. ಇದರ ಬಗ್ಗೆ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳಬಯಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಈ ವಿಚಾರ ಯಾವ ಘಟಕಕ್ಕೆ ಸಂಬಂಧಪಟ್ಟಿದ್ದು ಎಂಬುದನ್ನು ಮಾನ್ಯ ಸದಸ್ಯರು ಬಾಯಿಬಿಟ್ಟು ಹೇಳದಿದ್ದರೂ ನನಗೆ ತಿಳಿದಿರುವ ಮಟ್ಟಿಗೆ ಮೈಸೂರಿನಲ್ಲಿ ಸಿಲ್ಕ್ ವೀವಿಂಗ್ ಸೆಂಟರ್ ಒಂದು ಇದೆ. ಅದಕ್ಕೆ ಕೆಲಸಗಾರರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಅವರು ಮನಸ್ಸಿನಲ್ಲಿಟ್ಟುಕೊಂಡು ಈ ಮಾತನ್ನು ಅವರು ಹೇಳಿದ್ದಾರೆಂದು ಕಾಣಿಸುತ್ತದೆ. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳುವುದಾದರೆ, ಇದೊಂದು ಇಂಡಿಪೆಂಡೆಂಟ್ ಕಾರ್ಪೊರೇಷನ್. ಇದಕ್ಕೆ ಒಬ್ಬ ಛೇರ್ಮನ್ ಇದ್ದಾರೆ. ಈ ಕಾರ್ಪೊರೇಷನ್ ಏನಿದೆ ಇದು ನಮ್ಮ ಸರ್ಕಾರದ ಅಧೀನಕ್ಕೆ ನೇರವಾಗಿ ಒಳಪಟ್ಟಿಲ್ಲ. ಸಾಮಾನ್ಯವಾಗಿ ಕೆಲಸಗಾರರನ್ನು ತೆಗೆದುಕೊಳ್ಳುವಾಗ ಸ್ಥಳೀಯರನ್ನೇ ತೆಗೆದುಕೊಳ್ಳುವುದು ನಮ್ಮ ಧರ್ಮ. ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಇನ್ನು ಮುಂದೆ ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುವಾಗ ಮೈಸೂರಿನಲ್ಲಿ ಅಕ್ಕಪಕ್ಕದಲ್ಲಿರುವವರಿಗೇ ಆದ್ಯತೆ ಕೊಟ್ಟು ತೆಗೆದುಕೊಳ್ಳುವಂತೆ ಅವರಿಗೆ ತಿಳಿಸುತ್ತೇವೆ.

ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಮಾತುಮಾತಿಗೂ ೨೩ ಕೋಟಿ ರೂಪಾಯಿ ಏನಿದೆ ಇದನ್ನು ನಾನು ಅಪವ್ಯಯವಾಗುವುದಕ್ಕೆ ಅವಕಾಶ ಕೊಡುವುದಿಲ್ಲ, ಬೇರೆ ಕೆಲಸಗಳಿಗೆ ಈ ಹಣವನ್ನು ಉಪಯೋಗಿಸುವುದಿಲ್ಲ ಎಂದು ಹೇಳುತ್ತಿರುತ್ತಾರೆ. ನಾನು ಅವರಿಗೆ ಹೇಳುತ್ತೇನೆ ಈ ಹಣವನ್ನು ಉಪಯೋಗ ಮಾಡದೆ ಹಾಗೆಯೇ ಇಟ್ಟುಕೊಂಡರೆ ಅದು ದುರ್ವಿನಿಯೋಗವಾಗುತ್ತದೆ. ಈ ೨೩ ಕೋಟಿ ರೂಪಾಯಿಗಳನ್ನು ರೇಷ್ಮೆ ಉದ್ಯಮಕ್ಕೆ ಯಾವ ಯಾವ ಬಾಬುಗಳಿಗೆ ಉಪಯೋಗಿಸುತ್ತಾರೆಂಬ ಬಗ್ಗೆ ಒಂದು ಪಕ್ಷಿನೋಟವನ್ನು ತಯಾರಿಸಿ ಈ ಸಭೆಯ ಮುಂದೆ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕರ್ನಾಟಕ ಸಿಲ್ಕ್ ಫೆಡರೇಷನ್‌ಗೆ ನಮ್ಮ ಸರ್ಕಾರದವರು ೧೫ ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿದ್ದಾರೆ. ನಮ್ಮಲ್ಲಿ ಸಿಲ್ಕಿನ ಬೆಲೆ ಒಂದೊಂದುಸಾರಿ ಒಂದೊಂದುರೀತಿ ಇರುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ರೇಷ್ಮೆಗೆ ಕನಿಷ್ಠ ಬೆಲೆ ಮತ್ತು ಗರಿಷ್ಠ ಬೆಲೆಯನ್ನು ನಿಗದಿಮಾಡಬೇಕು. ಬಫರ್ ಸ್ಟಾಕ್‌ನ್ನು ಸರ್ಕಾರದವರೇ ಖರೀದಿಮಾಡಿಕೊಳ್ಳಬೇಕು. ಎಲ್ಲವನ್ನೂ ಖರೀದಿ ಮಾಡುವದಕ್ಕೆ ಸಾಧ್ಯವಿಲ್ಲದಿದ್ದರೂ ಉತ್ಪಾದನೆಯಾದ ರೇಷ್ಮೆಯಲ್ಲಿ ಶೇಕಡ ಇಂತಿಷ್ಟು ಭಾಗವನ್ನು ಸರ್ಕಾರದವರು ಕೊಂಡುಕೊಳ್ಳುವಂತೆ ವ್ಯವಸ್ಥೆ ಮಾಡಬೇಕು.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ರೇಷ್ಮೆಯ ಗುಣಮಟ್ಟದ ಬಗ್ಗೆ ನಮ್ಮ ರಾಜ್ಯ ಅಂತರಾಷ್ಟ್ರೀಯ ಮಟ್ಟದಲ್ಲಿ ೮ನೇ ಸ್ಥಾನವನ್ನು ಹೊಂದಿದೆ, ಇದನ್ನು ಇನ್ನೂ ಮೇಲ್ಮಟ್ಟಕ್ಕೆ ಕೊಂಡೊಯ್ಯಲು ಸರ್ಕಾರದವರು ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೆ? ಹಾಗೆ ತೆಗೆದುಕೊಂಡಿದ್ದರೆ ದಯಮಾಡಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜೂಗೌಡರು ರೇಷ್ಮೆಗೆ ಕನಿಷ್ಠ ಮತ್ತು ಗರಿಷ್ಠ ಬೆಲೆಯನ್ನು ನಿಗದಿ ಮಾಡುವ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮ ಏನೆಂದು ಕೇಳಿದ್ದಾರೆ. ಅದಕ್ಕೆ ನಾನಾದರೂ ಹೇಳುತ್ತೇನೆ. ೮೦–೮೧ನೇ ಸಾಲಿನಲ್ಲಿ ಕೇಂದ್ರಸರ್ಕಾರದವರು ಮಾಲಿಕ್ ಸಮಿತಿಯನ್ನು ನೇಮಕ ಮಾಡಿತು. ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟಂತೆ ಸಿಲ್ಕ್‌ಗೆ ಕನಿಷ್ಠ ಮತ್ತು ಗರಿಷ್ಠ ಬೆಲೆಯನ್ನು ನಿಗದಿಮಾಡಬೇಕೆಂಬ ಉದ್ದೇಶದಿಂದ ಈ ಸಮಿತಿಯನ್ನು ನೇಮಕ ಮಾಡಲಾಯಿತು. ಈ ದಿಸೆಯಲ್ಲಿ ಅವರು ನನಗೂ ಒಂದು ಕ್ವಶ್ಚನೇರ್‌ನ್ನು ಕಳುಹಿಸಿಕೊಟ್ಟಿದ್ದರು. ನಾನು ಅದಕ್ಕೆ ಸೂಕ್ತ ವಿವರಣೆಯನ್ನೂ ಕೊಟ್ಟಿದ್ದೇನೆ. ಆದರೆ ಇದುವರೆಗೂ ಈ ವಿಚಾರದಲ್ಲಿ ಏನು ಕ್ರಮವನ್ನು ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಕನಿಷ್ಠ ಮತ್ತು ಗರಿಷ್ಠ ಬೆಲೆಯನ್ನು ನಿಗದಿ ಮಾಡಿದ್ದಾರೋ, ಇಲ್ಲವೋ ಅದೂ ಕೂಡ ನನಗೆ ಗೊತ್ತಿಲ್ಲ. ರೇಷ್ಮೆ ಬೆಲೆ ಆಕಾಶಕ್ಕೆ ಏರುವುದು ಮತ್ತೆ ಭೂಮಿಗೆ ಬೀಳುವುದನ್ನು ಗಮನಿಸಿ ಇದನ್ನು ಹತೋಟಿಯಲ್ಲಿಡುವ ಸಲುವಾಗಿ ನಾವು ಕರ್ನಾಟಕ

ರೇಷ್ಮೆ ಮಂಡಲಿಯನ್ನು ನೇಮಕ ಮಾಡಿದ್ದೇವೆ. ಇದರಿಂದಾಗಿ ನಮ್ಮಲ್ಲಿ ರೇಷ್ಮೆ ಬೆಲೆ ೪೫೦ ರೂ. ಗಳಿಗಿಂತ ಕೆಳಕ್ಕೆ ಹೋಗಿಲ್ಲ ಮತ್ತು ೫೦೦ ರೂ. ಗಳಿಗಿಂತ ಮೇಲಕ್ಕೆ ಹೋಗಿಲ್ಲ. ಅಂದಮೇಲೆ ನಾವು ಕನಿಷ್ಟ ಮತ್ತು ಗರಿಷ್ಠ ಬೆಲೆಯನ್ನು ಮೈನ್‌ಟೇನ್ ಮಾಡಿದ್ದೇವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಇನ್ನು ರೇಷ್ಮೆಯ ಗುಣಮಟ್ಟವನ್ನು ಹೆಚ್ಚು ಮಾಡುವ ಉದ್ದೇಶದಿಂದ ಆಧುನಿಕ ಯಂತ್ರಗಳನ್ನು ಫಿಲೇಚರ್‌ನಲ್ಲಿ ಅಳವಡಿಸಲಾಗಿದೆ. ಜೊತೆಗೆ ಹಳೇ ಗಿಡದಲ್ಲಿ ಉತ್ಕೃಷ್ಟ ಬೆಳೆ ಬರುವುದಿಲ್ಲವೆಂದು ಯೋಚಿಸಿ ಹೊಸದಾಗಿ ಉಪ್ಪುನೇರಳೆ ಗಿಡಗಳನ್ನು ಹಾಕಿಸುತ್ತಿದ್ದೇವೆ.

ಶ್ರೀ ಕೆ. ಮಲ್ಲಪ್ಪ (ಹರಿಹರ).—ಮಾನ್ಯ ಅಧ್ಯಕ್ಷರೆ, ದಾವಣಗೆರೆ, ರಾಣೆಬೆನ್ನೂರು, ಜಗಳೂರು ಈ ಭಾಗಗಳಲ್ಲಿ ಇತ್ತೀಚೆಗೆ ರೇಷ್ಮೆ ಬೆಳೆಯನ್ನು ಬೆಳೆಯುವುದು ಜಾಸ್ತಿಯಾಗುತ್ತಿದೆ. ಕಾರಣ ರೇಷ್ಮೆಗೆ ಒಳ್ಳೆಯ ಬೆಲೆ ಇದೆ. ದಾವಣಗೆರೆಯಲ್ಲಿ ರೇಷ್ಮೆ ಗೂಡನ್ನು ಮಾರಾಟ ಮಾಡಲು ಒಂದು ಉತ್ತಮ ಮಾರುಕಟ್ಟೆಯ ವ್ಯವಸ್ಥೆ ಆಗಬೇಕು. ಈಗ ಏನಾಗಿದೆ ಎಂದರೆ ಆ ಸುತ್ತಮುತ್ತ ಬೆಳೆಯುತಕ್ಕ ರೇಷ್ಮೆಯನ್ನು ಯಾರು ಕೊಡುಕೊಳ್ಳುತ್ತಿಲ್ಲ. ಮಾರಾಟ ಮಾಡುವವರೂ ಕೂಡ ಬೆಂಗಳೂರಿಗೋ ಅಥವಾ ರಾಮನಗರಕ್ಕೋ ತೆಗೆದುಕೊಂಡು ಬಂದು ಮಾರಾಟ ಮಾಡಿಕೊಂಡು ಹೋಗಬೇಕಾಗಿದೆ. ಈಗ ದಾವಣಗೆರೆಯಲ್ಲಿ ರೇಷ್ಮೆ ನೂಲು ಬಿಚ್ಚುವ ಕೆಲಸವೂ ನಡೆದಿದೆ. ಅವರಿಗೆ ಬೇಕಾದ ರೇಷ್ಮೆಯನ್ನು ಬೆಂಗಳೂರಿನಿಂದ ಮತ್ತೆ ಅಲ್ಲಿಗೆ ತೆಗೆದುಕೊಂಡು ಹೋಗಬೇಕಾಗಿರುವುದರಿಂದ ಸಾರಿಗೆ ವೆಚ್ಚ ಕೂಡ ಹೆಚ್ಚು ಬೀಳುತ್ತದೆ. ಇದಕ್ಕೆ ವಿನಾಕಾರಣ ಹೆಚ್ಚು ಹಣ ತಗಲುತ್ತದೆ. ಇದಕ್ಕೆ ಬದಲಾಗಿ ಸರ್ಕಾರದವರೇ ನೇರವಾಗಿ ಅಲ್ಲಿಯೇ ಈ ರೇಷ್ಮೆಯನ್ನು ಖರೀದಿ ಮಾಡಿದರೆ ರೈತರು ಅಲ್ಲಿಂದ ಇಲ್ಲಿಗೆ ತೆಗೆದುಕೊಂಡು ಬರಬೇಕಾದರೆ ಖರ್ಚುಮಾಡುವ ಹಣವೂ ಉಳಿಯುತ್ತದೆ, ಮತ್ತೆ ಇಲ್ಲಿಂದ ಅಲ್ಲಿಗೆ ತೆಗೆದುಕೊಂಡು ಹೋಗಲು ಸಾರಿಗೆಗೆ ಕೊಡತಕ್ಕ ಹಣವೂ ಉಳಿತಾಯವಾಗುತ್ತದೆ. ಈ ವಿಚಾರವನ್ನು ಮಾನ್ಯ ಸಚಿವರು ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಯೆ ಎಂದು ಕೇಳಬಯಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಈ ಇಲಾಖೆಗೆ ಸಂಬಂಧಪಟ್ಟಂತೆ ವೈವಿಧ್ಯಮಯ ಸಮಸ್ಯೆಗಳಿವೆ. ದಾವಣಗೆರೆಯಲ್ಲಿಯೇ ಒಂದು ರೀತಿಯ ಸಮಸ್ಯೆ ಇದೆ, ಮೈಸೂರಿನಲ್ಲಿಯೇ ಒಂದು ರೀತಿಯ ಸಮಸ್ಯೆ ಇದೆ. ಬೆಂಗಳೂರಿನಲ್ಲಿಯೇ ಒಂದು ರೀತಿಯ ಸಮಸ್ಯೆ ಇದೆ. ಆದ್ದರಿಂದ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಆ ಪ್ರದೇಶದಲ್ಲಿ ಬೆಳೆಯುತಕ್ಕ ಗೂಡಿಗೆ ಮಾರ್ಕೆಟ್ ಇಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಉತ್ತಮ ಮಾರ್ಕೆಟ್ ಇದೆ. ಸಾಮಾನ್ಯವಾಗಿ ಎಲ್ಲಿ ಕೊಂಡುಕೊಳ್ಳುವ ಜನ ಹೆಚ್ಚು ಇರುತ್ತಾರೆ ಅಲ್ಲಿ ಉತ್ತಮ ಮಾರ್ಕೆಟ್ ಇರುತ್ತದೆ. ಉದಾಹರಣೆಗೆ ಹೇಳುವುದಾದರೆ, ಮಂಡ್ಯದಲ್ಲಿ ಹೆಚ್ಚು ರೇಷ್ಮೆಯನ್ನು ಬೆಳೆಯುತ್ತಾರೆ. ಆದರೆ ಅಲ್ಲಿ ಮಾರ್ಕೆಟ್ ಇಲ್ಲದಿರುವುದರಿಂದ ಅದನ್ನು ಮಾರಾಟ ಮಾಡಲು ರಾಮನಗರಕ್ಕೆ ತರುತ್ತಾರೆ. ಅಷ್ಟೇ ಅಲ್ಲ ಆಂಧ್ರದಿಂದ, ದಾವಣಗೆರೆಯಿಂದ, ಇನ್ನೂ ಮುಂತಾದ ಕಡೆಗಳಿಂದ ರಾಮನಗರಕ್ಕೆ ಮಾರಾಟಕ್ಕಾಗಿ ತೆಗೆದುಕೊಂಡು ಬರುತ್ತಾರೆ. ಆದರೆ ಬರತಕ್ಕ ಎಲ್ಲ ರೇಷ್ಮೆಯನ್ನೂ ಸರ್ಕಾರದವರೇ ತೆಗೆದುಕೊಳ್ಳಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಸರ್ಕಾರದ ವತಿಯಿಂದ ನೂಲು ಬಿಚ್ಚುವುದು ಕೇವಲ ೧೦ ಪರ್ಸೆಂಟ್ ಮಾತ್ರ ಸಾಧ್ಯವಿದೆ. ಆದರೆ ಉತ್ಪತ್ತಿಯಾಗತಕ್ಕ ಗೂಡನ್ನೆಲ್ಲಾ ನಾವು ಖರೀದಿ ಮಾಡುವುದಕ್ಕಾಗುವುದಿಲ್ಲ. ನೂಲು ಬಿಚ್ಚುವವರನ್ನು ನಾವು ನೇಮಕ ಮಾಡಿಕೊಳ್ಳಬೇಕಾಗಿದೆ. ಈ ಸಲುವಾಗಿ ನಾವು ಸುಮಾರು $1\frac{1}{2}$ ಕೋಟಿ ರೂಪಾಯಿ ಬೆಲೆಬಾಳುವ ಒಂದು ಕಿರು ಗಿರಣಿಯನ್ನು ಸ್ಥಾಪನೆ ಮಾಡುವ ಕ್ರಮ ಕೈಗೊಂಡಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮತ್ತು ಉತ್ತರ ಮುಗಿಯಿತು. ಇನ್ನು ಮಾನ್ಯ ಸಣ್ಣ ಕೈಗಾರಿಕಾ ಖಾತೆಯ ಸಚಿವರಾದ ದೇಶಪಾಂಡೆಯವರು ಉತ್ತರ ನೀಡಬೇಕು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಆರ್. ವಿ. ದೇಶಪಾಂಡೆ (ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿ ಕೆಲವು ಒಳ್ಳೆಯ ಸೂಚನೆಗಳನ್ನು ನೀಡಿದ್ದಾರೆ. ಇನ್ನು ಕೆಲವರು ಇಲಾಖೆಯ ಕೆಲಸಗಳನ್ನು ಮೆಚ್ಚಿದ್ದಾರೆ, ಅದೇ ರೀತಿ ಮತ್ತೆ ಕೆಲವರು ಟೀಕೆ ಟಿಪ್ಪಣಿಗಳನ್ನೂ ಮಾಡಿದ್ದಾರೆ. ಅವರೆಲ್ಲರಿಗೂ ನಾನು ವಂದಿಸಿ ಅವರು ಮಾಡಿರತಕ್ಕ ಸಲಹೆ, ಸೂಚನೆ, ಮತ್ತು ಟೀಕೆಗಳನ್ನು ಸ್ವಾಗತಿಸುತ್ತೇನೆ.

ಸಣ್ಣ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಬೇಕು, ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ ಈ ಕೈಗಾರಿಕೆಗಳು ಪ್ರಧಾನವಾಗಿ ಬೆಳೆಯಬೇಕೆಂಬುದೇ ನಮ್ಮ ಸರ್ಕಾರದ ಕೈಗಾರಿಕಾ ನೀತಿ. ಪ್ರತಿ ತಿಂಗಳೂ ಒಂದು ಸಾವಿರ ಸಣ್ಣ ಕೈಗಾರಿಕೆಗಳನ್ನು ತೆರೆಯಲು ಸರ್ಕಾರ ಅನುಮತಿ ನೀಡುತ್ತದೆಂದು ಹೇಳಿದ್ದರೂ ಕೂಡ ಇದರಲ್ಲಿ ಯಾವುದೇ ರೀತಿಯ ಸುಧಾರಣೆಯೂ ಆಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳು ಬೆಳೆದಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಆಪಾದನೆಯನ್ನು ಮಾಡಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ, ಕಳೆದ ೩ ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ, ಹಿಂದುಳಿದ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಸ್ಥಾಪನೆಯಾಗಿವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಷ್ಟೇ ಅಲ್ಲ, ನಮ್ಮ ಸರ್ಕಾರದ ನೀತಿಯ ಪ್ರಕಾರ ಬೇರೆಬೇರೆ ಇಲಾಖೆಗಳ, ಮಂಡಲಿಗಳ ಸಹಾಯ, ಸಹಕಾರವನ್ನು ನಾವು ತೆಗೆದುಕೊಳ್ಳಲು ಕ್ರಮ ತೆಗೆದುಕೊಂಡಿದ್ದೇವೆ. ಈ ಬಗ್ಗೆ ನಾನು ಕೆಲವು ಅಂಕಿ ಅಂಶಗಳನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

೧೯೮೩–೮೪ನೇ ಸಾಲಿನಲ್ಲಿ ಒಟ್ಟು ೭೫೨೯ ಕೈಗಾರಿಕೆಗಳು ಪ್ರಾರಂಭವಾಗಿವೆ. ಇವುಗಳ ಪೈಕಿ ಹಿಂದುಳಿದ ಪ್ರದೇಶದಲ್ಲಿ ೫೯೮೦ ಕೈಗಾರಿಕೆಗಳು ಮತ್ತು ೧೫೪೯ ಕೈಗಾರಿಕೆಗಳು ದೊಡ್ಡ ದೊಡ್ಡ ಶಹರುಗಳಲ್ಲಿ ಪ್ರಾರಂಭವಾಗಿವೆ. ೮೪–೮೫ನೇ ಸಾಲಿನಲ್ಲಿ ಒಟ್ಟು ೧೧,೬೦೬ ಕೈಗಾರಿಕೆಗಳು ಪ್ರಾರಂಭವಾಗಿವೆ. ಇವುಗಳ ಪೈಕಿ ಹಿಂದುಳಿದ ಪ್ರದೇಶದಲ್ಲಿ ೯,೬೬೮ ಕೈಗಾರಿಕೆಗಳು ಮತ್ತು ೧೯೩೮ ಕೈಗಾರಿಕೆಗಳು ಶಹರುಗಳಲ್ಲಿ ಪ್ರಾರಂಭವಾಗಿವೆ. ೮೫–೮೬ನೇ ಸಾಲಿನ ಡಿಸೆಂಬರ್ ಅಖೈರ್‌ನವರೆಗೆ ೭,೮೧೬ ಕೈಗಾರಿಕೆಗಳು ಹಿಂದುಳಿದ ಪ್ರದೇಶಗಳಲ್ಲಿ ಪ್ರಾರಂಭವಾಗಿದ್ದರೆ ೧೫೦೬ ಕೈಗಾರಿಕೆಗಳು ಶಹರುಗಳಲ್ಲಿ ಪ್ರಾರಂಭವಾಗಿವೆ. ಅಂದರೆ ಹಿಂದುಳಿದ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳು ಅಸ್ತಿತ್ವಕ್ಕೆ ಬರಬೇಕೆಂಬುದೇ ನಮ್ಮ ಸರ್ಕಾರದ ನೀತಿ. ಈ ಒಂದು ನೀತಿಯನ್ನು ನಾವು ಮುಂದಿಟ್ಟುಕೊಂಡೇ ಈ ಹಣಕಾಸಿನ ವಿತರಣೆಯನ್ನೂ ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಮಾತನಾಡುತ್ತಾ ಕರ್ನಾಟಕ ಹಣಕಾಸಿನ ನಿಗಮದ ಬಗ್ಗೆ ಪ್ರಸ್ತಾಪಿಸುತ್ತಾ ಕ್ರೆಡಿಟ್ ಪ್ಲಾಂಟ್ ಎಂದು ಇರುವುದಾಗಿ ಹೇಳಿದರು, ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳು ಹೆಚ್ಚು ಹೆಚ್ಚು ಬೆಳೆಯಬೇಕೆಂಬ ಒಂದು ನೀತಿಯನ್ನು ನಾವು ಹಾಕಿಕೊಂಡಿದ್ದೇವೆ. ಅದರ ಪ್ರಕಾರ ನಮ್ಮ ಸಾಧನೆ ಏನೆಂದರೆ, ೮೨–೮೩ನೇ ಇಸವಿಯಲ್ಲಿ ಹಣಕಾಸಿನ ನಿಗಮದವರು ೯೦೧ ಯೂನಿಟ್‌ಗಳಿಗೆ ೧೬.೭೬ ಕೋಟಿ ರೂಪಾಯಿಗಳ ಒಂದು ಸಹಾಯವನ್ನು ನೀಡಿದೆ. ೮೪–೮೫ರಲ್ಲಿ ೨೬೫೯ ಯೂನಿಟ್‌ಗಳಿಗೆ ೩೨.೯೨ ಕೋಟಿ ರೂಪಾಯಿಗಳ ಸಹಾಯವನ್ನು ನೀಡಿದೆ. ೮೫–೮೬ರ ಸಾಲಿನಲ್ಲಿ ಅಂದರೆ ಡಿಸೆಂಬರ್ ತಿಂಗಳವರೆಗೆ ೨೩೧೯ ಯೂನಿಟ್‌ಗಳಿಗೆ ೪೪.೨೫ ಕೋಟಿ ರೂಪಾಯಿಗಳ ಸಹಾಯವನ್ನು ಕರ್ನಾಟಕ ಹಣಕಾಸು ನಿಗಮದವರು ನೀಡಿದ್ದಾರೆ. ಇದೇ ರೀತಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಸಿಕ್ಕತಕ್ಕ ಸಬ್ಸಿಡಿ ದೊಡ್ಡ ಪ್ರಮಾಣದಲ್ಲೇ ಆಗಿದೆ. ೮೨–೮೩ನೇ ಸಾಲಿನಲ್ಲಿ ೨.೭೩ ಕೋಟಿ ರೂಪಾಯಿ, ೮೩–೮೪ನೇ ಸಾಲಿನಲ್ಲಿ ೧.೪೬ ಕೋಟಿ ರೂಪಾಯಿ, ೮೪–೮೫ನೇ ಸಾಲಿನಲ್ಲಿ ೩.೧೪ ಕೋಟಿ ರೂಪಾಯಿಗಳು ಹಾಗೂ ೮೫–೮೬ರಲ್ಲಿ ಅಂದರೆ ಡಿಸೆಂಬರ್ ತಿಂಗಳವರೆಗೆ ೨.೭೦ ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡಲಾಗಿದೆ. ಅದೇರೀತಿ ಸೆಂಟ್ರಲ್ ಸಬ್ಸಿಡಿ ಕೂಡ ಈ ಯೂನಿಟ್‌ಗಳಿಗೆ ಸಿಕ್ಕಿದೆ. ೮೨–೮೩ರ ಸಾಲಿನಲ್ಲಿ ೧.೯ ಕೋಟಿ ರೂಪಾಯಿ ಹಾಗೂ ಈ ವರ್ಷ ೨.೮ ಕೋಟಿ ರೂಪಾಯಿ ಸೆಂಟ್ರಲ್ ಸಬ್ಸಿಡಿ ನೀಡಲಾಗಿದೆ. ಅಭಿವೃದ್ಧಿ ಸಾಲಗಳು ೮೨–೮೩ರ ಅವಧಿಯಲ್ಲಿ ೧.೮೭ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಈ ವರ್ಷ ೩.೮೬ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ನಮ್ಮ ಈ ಒಂದು ನೀತಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳು ಖಂಡಿತವಾಗಿಯೂ ಬೆಳೆಯುತ್ತಿವೆ. ಆದರೆ ಇದನ್ನು ಸರಿಯಾಗಿ ತಿಳಿದುಕೊಳ್ಳದೆ ಮಾನ್ಯ ಸದಸ್ಯರು ಹಿಂದುಳಿದ ಪ್ರದೇಶಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆಯೇ ಆಗಿಲ್ಲವೆಂದು ಏನು ಆಪಾದನೆಯನ್ನು ಮಾಡಿದ್ದಾರೆ ಅದು ಸರಿಯಲ್ಲ.

ಇನ್ನು ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್‌ರವರು ಸಿಂಗಲ್ ವಿಂಡೋ ಸಿಸ್ಟಂ ಬಗ್ಗೆ ಪ್ರಸ್ತಾಪ ಮಾಡಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗುಜರಾತ್‌ನ ಎಸ್ಟಾಕ್ಟ್ಸ್‌ಗೆ ಹೋಲಿಸಿದಾಗ ಮೇಜರ್ ಅಂಡ್ ಮೀಡಿಯಂ ಇಂಡಸ್ಟ್ರೀಸ್‌ಗೆ ಸಾಕಷ್ಟು ಅನುಕೂಲವಾಗಿದೆ. ಅದೇರೀತಿ ಸಣ್ಣ ಕೈಗಾರಿಕೆಗಳಿಗೂ ಸಹಾಯ ಮಾಡುವ ಸಲುವಾಗಿ ನಮ್ಮ ಪ್ರೊಸೀಜರ್‌ನ್ನು ಎಷ್ಟು ಸಿಂಪ್ಲಿಫೈ ಮಾಡುವುದಕ್ಕೆ ಸಾಧ್ಯ ಅಷ್ಟನ್ನು ಮಾಡಿ ಯಾವ ರೀತಿ ಇವುಗಳಿಗೆ ನೆರವು ನೀಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಒಟ್ಟಿನಲ್ಲಿ ಆದಷ್ಟು ಬೇಗ ಒಂದು ಹೊಸ ನೀತಿಯನ್ನು ಈ ದಿಸೆಯಲ್ಲಿ ಅನುಸರಿಸುತ್ತೇವೆಂದು ಮಾನ-

ಸದಸ್ಯರಿಗೆ ಹೇಳಬಯಸುತ್ತೇನೆ. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ್ದೇವೆ. ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬಂದವರಿಗೆ ಸಾಕಷ್ಟು ಹಣವನ್ನು ನಾವು ನೀಡಿದ್ದೇವೆ. ಈ ದಿಸೆಯಲ್ಲಿ ಹಲವಾರು ಉತ್ತಮ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಇನ್ನೊಂದು ವಿಚಾರವನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಸಣ್ಣ ಕೈಗಾರಿಕೆಗಳು ಇವತ್ತು ಅನಾರೋಗ್ಯದಿಂದ ನರಳುತ್ತಿವೆ, ಅವುಗಳು ಉತ್ಪಾದನೆ ಮಾಡಿದ ವಸ್ತುಗಳಿಗೆ ಮಾರುಕಟ್ಟೆ ಇಲ್ಲವೆಂದು ಹೇಳುತ್ತಿದ್ದಾರೆ. ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಏನಿದೆ ಅಲ್ಲಿ ಒಂದು ಮಾರ್ಕೆಟಿಂಗ್ ಫೆಡರೇಷನ್‌ನ್ನು ಸ್ಥಾಪನೆ ಮಾಡಿದ್ದೇವೆ. ಇದರಲ್ಲಿ ಸಣ್ಣ ಕೈಗಾರಿಕೆಗಳು ನೋಂದಾಯಿಸಿಕೊಳ್ಳಬಹುದು. ನಂತರ ಈ ಕೈಗಾರಿಕೆಯವರು ತಯಾರು ಮಾಡತಕ್ಕ ವಸ್ತುಗಳನ್ನು ಅದರ ಮೂಲಕ ಮಾರಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಈ ಸಣ್ಣ ಪ್ರಮಾಣದ ಕೈಗಾರಿಕೆಗಳೆಲ್ಲವೂ ಒಂದೇ ಬ್ರ್ಯಾಂಡ್‌ನಲ್ಲಿ ತಮ್ಮ ತಮ್ಮ ಉತ್ಪಾದನೆಯನ್ನು ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ತಿಳಿಸಿದ್ದಾರೆ. ಈ ವಿಚಾರವನ್ನು ನಾವು ಪರಿಶೀಲಿಸುತ್ತೇವೆ. ಇವತ್ತು ಸಣ್ಣ ಕೈಗಾರಿಕೆಗಳು ಉತ್ಪಾದನೆ ಮಾಡತಕ್ಕ ವಸ್ತುಗಳಿಗೆ ಮಾರುಕಟ್ಟೆ ಇಲ್ಲ. ಇದನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಹೆಚ್ಚು ಹೆಚ್ಚು ಹಿಂದುಳಿದ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆಯಬೇಕೆಂಬ ಉದ್ದೇಶದಿಂದ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಸಣ್ಣ ಕೈಗಾರಿಕೆಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಿ ೧೫ ಪರ್ಸೆಂಟ್ ಪ್ರೈಸ್ ಪ್ರಿಫರೆನ್ಸ್‌ನ್ನು ಕೊಡಬೇಕೆಂದು ಮಾಡಿದ್ದೇವೆ. ಈ ಅನುಕೂಲ ಈ ಹಿಂದೆಯೇ ಸಿಕ್ಕಬೇಕಾಗಿತ್ತು. ಆದರೆ ಇದುವರೆಗೆ ಸಿಕ್ಕಿಲ್ಲಾ. ಸಣ್ಣ ಕೈಗಾರಿಕೆಗಳು ಉತ್ಪಾದನೆ ಮಾಡತಕ್ಕ ವಸ್ತುಗಳನ್ನು ಯಾರೂ ಕೂಡ ಖರೀದಿ ಮಾಡುತ್ತಿರಲಿಲ್ಲ. ಆದ್ದರಿಂದ ಈಗ ೪೦೦ ಐಟಂಗಳನ್ನು ಸಣ್ಣ ಕೈಗಾರಿಕೆಗಳಿಗೆ ರಿಸರ್ವ್ ಮಾಡಿದ್ದೇವೆ. ೮೨ನೇ ಇಸವಿಯಿಂದ ಏನು ಪ್ರೈಸ್ ಪ್ರಿಫರೆನ್ಸ್ ಸಿಕ್ಕಿಲ್ಲವೆಂದು ದೂರು ಇದೆ ಅದನ್ನು ಪರಿಶೀಲಿಸಿ ಇನ್ನು ೫ ವರ್ಷಗಳವರೆಗೆ ಪ್ರೈಸ್ ಪ್ರಿಫರೆನ್ಸ್ ಅವರಿಗೆ ಸಿಕ್ಕಬೇಕೆಂದು ಮಾಡಿದ್ದೇವೆ. ಇದರಿಂದ ಸಣ್ಣ ಸಣ್ಣ ಕೈಗಾರಿಕೆಗಳಿಗೆ ತುಂಬಾ ಅನುಕೂಲವಾಗುತ್ತದೆ. ಯಾರೇ ಅಧಿಕಾರಿಗಳಾಗಿರಲಿ ಅವರು ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗುವ ರೀತಿಯಲ್ಲಿ ನಡೆದುಕೊಳ್ಳುವುದಾದರೆ ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಅಂಡರ್ ಟೇಕಿಂಗ್ಸ್ ಆಗಲಿ, ಬೇರೆ ಸರ್ಕಾರೀ ಕಂಪೆನಿಗಳಾಗಲಿ ಈ ಸಣ್ಣ ಕೈಗಾರಿಕೆಗಳು ಉತ್ಪಾದನೆ ಮಾಡತಕ್ಕ ವಸ್ತುಗಳನ್ನು ಕೊಂಡುಕೊಳ್ಳಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಜವಾಬ್ದಾರರಾಗುವಂತೆ ಮಾಡಿದ್ದೇವೆ. ಇದುವರೆಗೆ ಯಾವ ರಾಜ್ಯದವರೂ ಮಾಡದೇ ಇರತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಇದೇರೀತಿ ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್‌ಮೇಲೆ ವಿಧಿಸಿದ್ದ ಸೇಲ್ಸ್ ಟ್ಯಾಕ್ಸ್‌ನ್ನು ೪ ಪರ್ಸೆಂಟ್‌ಗೆ ಇಳಿಸಿರುವುದರಿಂದ ಈ ಇಂಡಸ್ಟ್ರೀಸ್ ಕೂಡ ಚೆನ್ನಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿದೆ. ೩ ಮಹಡಿಗಳುಳ್ಳ ೧೬ ಕಟ್ಟಡಗಳನ್ನು ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದವರು ಕಟ್ಟುತ್ತಿದ್ದಾರೆ.

ಇನ್ನು ರಾ ಮೆಟೀರಿಯಲ್ಸ್ ವಿಚಾರದಲ್ಲಿ ಹೇಳುವುದಾದರೆ, ಗ್ರಾನೈಟ್ ಆಗಿರಲಿ ಅಥವಾ ಬೇರೆ ವಸ್ತು ಆಗಿರಲಿ ಅದು ಸರಿಯಾಗಿ ಉಪಯೋಗ ಆಗುತ್ತಿಲ್ಲ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಸೂಕ್ತ ಗಮನಹರಿಸುತ್ತದೆಂದು ಹೇಳಬಯಸುತ್ತೇನೆ. ನಮ್ಮ ರಾಜ್ಯದ ೯ ಜಿಲ್ಲೆಗಳಲ್ಲಿ ೯ ಟ್ರೈನಿಂಗ್ ಕಂ ಪ್ರೊಡಕ್ಷನ್ ಸೆಂಟರ್‌ಗಳನ್ನು ತೆರೆಯುವ ವ್ಯವಸ್ಥೆ ಮಾಡಿದ್ದೇವೆ. ಇದರಿಂದ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾಗಬಹುದು. ಗುಜರಾತ್‌ನ ಅಹಮದಾಬಾದ್‌ನಲ್ಲಿ ಎಂಟರ್‌ಪ್ರಿನ್ಯೂಯರ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್ ಎಂದು ಏನು ಮಾಡಿದ್ದಾರೆ ಅದೇರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡಲು ಕ್ರಮ ಕೈಗೊಂಡಿದ್ದೇವೆ. ಇದು ಇಷ್ಟರಲ್ಲೇ ಕಾರ್ಯರೂಪಕ್ಕೆ ಬರಲಿದೆ.

ಇನ್ನು ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟೀಸ್ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿ ಬಹಳಷ್ಟು ಸೊಸೈಟಿಗಳು ಡೀ ಫಂಕ್ಟ್ ಆಗಿವೆಯೆಂದು ಹೇಳಿದ್ದಾರೆ. ಈ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀಮಾನ್ ನಂಜಯ್ಯನಮಠ್.-ಶ್ರೀನಿವಾಸ್ ಹಾಗೂ ರೆಡ್ಡಿಯವರು ಇವುಗಳ ಬಗ್ಗೆ ಹೇಳಿದ್ದಾರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ನಾವು ಒಂದು ಆದೇಶವನ್ನು ಹೊರಡಿಸಿದ್ದೇವೆ. ಎಲ್ಲಿ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆಯೊ, ಅದಕ್ಕೆ ಸರ್ಕಾರ ಸಹಕಾರ ಕೊಡುತ್ತದೆ. ಡಿಫೆಂಡ್ ಆದವುಗಳನ್ನು ಲಿಕ್ವಿಡೇಟ್ ಮಾಡುತ್ತೇವೆ. ಈಗಾಗಲೇ ೧೦೩ ಸೊಸೈಟಿಗಳನ್ನು ಲಿಕ್ವಿಡೇಟ್ ಮಾಡಿದ್ದೇವೆ. ಕೇಂದ್ರ ಸರ್ಕಾರದ ಮುಂಗಡ ಪತ್ರದಲ್ಲಿ ಸಣ್ಣ ಕೈಗಾರಿಕೆಗಳ ಬಗ್ಗೆ ಹಾಗೂ ಐಡಿಬಿಐ ಬಗ್ಗೆ ಒಂದು ಫಂಡ್ ಮಾಡಲು ಉದ್ದೇಶಿಸಿರುವ ಬಗ್ಗೆ ಮಾನ್ಯ ಕೆ. ಹೆಚ್. ಶ್ರೀನಿವಾಸ್ ಹೇಳಿದರು. ಸಂತೋಷಪಡುತ್ತೇನೆ. ಸಣ್ಣ ಕೈಗಾರಿಕೆಗಳಿಗೆ ರಿಫೈನಾನ್ಸ್ ಮತ್ತು ಮಾಡರೇಷನ್, ಎರಡೂ ಸಿಕ್ಕುತ್ತಿವೆ. ಇವತ್ತು ನಾವು ಕೇಂದ್ರ ಸರ್ಕಾರವನ್ನು ರಾಷ್ಟ್ರಮಟ್ಟದಲ್ಲಿ ಒಂದು ಸಂಸ್ಥೆಯನ್ನ ಮಾಡಲು ಒತ್ತಾಯಮಾಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ದರದ ಬಡ್ಡಿಯ ಸಹಾಯದಿಂದ, ಸಣ್ಣಕೈಗಾರಿಕೆಗಳಿಗೆ ಅನುಕೂಲವಾಗುತ್ತದೆ. ಅದರ ಪ್ರಕಾರ, ಅಭಿವೃದ್ಧಿ ನಿಗಮಗಳು ಏನಿವೆ, ಅಂದರೆ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್, ಇನ್ನಿತರ ಸಂಸ್ಥೆಗಳಿಗೆ ಕನ್‌ಸೆಷನ್ ರೇಟ್‌ನಿಂದ ಹಣ ಸಹಾಯ ಸಿಕ್ಕಬೇಕಾಗಿದೆ ನಮ್ಮ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂ ಬಗ್ಗೆ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ ಈ ಯೋಜನೆಯಲ್ಲಿ ಸಾಕಷ್ಟು ತೊಂದರೆಯಿದೆ, ಸಾಕಷ್ಟು ಭ್ರಷ್ಟಾಚಾರವಿದೆ, ಬ್ಯಾಂಕ್‌ನವರೂ ಸಾಕಷ್ಟು ತೊಂದರೆ ಕೊಡುತ್ತಾರೆ. ನಾನು ಒಪ್ಪುತ್ತೇನೆ. ಬ್ಯಾಂಕ್‌ನವರಿಂದ ತೊಂದರೆಯಾಗುತ್ತಿದೆ. ಜಿಲ್ಲಾಧಿಕಾರಿಗಳ ಮುಖಾಂತರ ಅವರನ್ನು ಕರೆಸಿ, ಕೇಳುತ್ತಿದ್ದೇವೆ. ಆದರೂ ಸಹ ರಾಜ್ಯದ ಪ್ರಗತಿ ಚೆನ್ನಾಗಿದೆ. ಭ್ರಷ್ಟಾಚಾರದ ಬಗ್ಗೆ ದೂರು ಹೇಳುತ್ತಿದ್ದೀರಿ. ನೀವು ನೇರವಾಗಿ ಆಪಾದನೆ ಕೊಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ನಾನು ಭರವಸೆಯನ್ನು ಕೊಡುತ್ತಿದ್ದೇನೆ. ಅದೇ ಖಾದಿ ಬೋರ್ಡ್ ಬಗ್ಗೆ ಮಾತನಾಡುತ್ತಾ, ಮಾನ್ಯ ಸದಸ್ಯರಿಬ್ಬರು ವಸೂಲಾತಿ ಸರಿಯಾಗಿಲ್ಲ ಇದಕ್ಕೆ ೧೯ ಜನ ಡೈರೆಕ್ಟರುಗಳು ಯಾಕೆಂದು ಕೇಳಿದರು. ವಸೂಲಾತಿ ಸರಿಯಾಗಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಹಾಗೆಂದು ಸರ್ಕಾರಿ ಆಜ್ಞೆಯನ್ನೂ ಹೊರಡಿಸಿದ್ದೇವೆ. ೪ ಜನ ತಹಶೀಲ್ದಾರರನ್ನು ಪ್ರತಿಯೊಂದು ಡಿವಿಜನ್‌ಗೆ ಡೆಪ್ಯೂಟ್ ಮಾಡುತ್ತಿದ್ದೇವೆ. ಈಗಾಗಲೇ ರೆವಿನ್ಯೂ ಇಲಾಖೆಗೆ ಡೆಪ್ಯೂಟ್ ಮಾಡಿದ್ದೇವೆ. ಆದರಿಂದ ಸಾಕಷ್ಟು ವಸೂಲಾತಿ ಆಗಬಹುದೆಂಬ ವಿಶ್ವಾಸವಿದೆ. ಇನ್ನು ವಿಕೇಂದ್ರೀಕರಣ ಏನಿದೆ, ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಸಲಹಾ ಸಮಿತಿ ರಚನೆ ಮಾಡಿದ್ದೇವೆ. ಖಾದಿ ಬೋರ್ಡ್‌ನ ಅಧಿಕಾರಿಗೆ ೨೫ ಸಾವಿರ ರೂಪಾಯಿಗಳನ್ನು ಅಲ್ಲೇ ಮಂಜೂರುಮಾಡುವಂತಹ ಅಧಿಕಾರವನ್ನು ನಾವು ಕೊಟ್ಟಿದ್ದೇವೆ ಈ ಖಾದಿ ಬೋರ್ಡಿನಿಂದ ಬಡವರಿಗೆ, ಗ್ರಾಮಾಂತರ ಪ್ರದೇಶದ ಜನಗಿಗೆ ಸಹಾಯ ಆಗಬಹುದು ಅಥವಾ ಅನುಕೂಲವಾಗಬಹುದೆಂಬ ವಿಶ್ವಾಸ ನನಗೆ ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ತೆಂಗಿನ ನಾರು ಮತ್ತು ಜೇನು ಸಾಕಾಣಿಕೆ ಬಗ್ಗೆ ಹೇಳಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಎರಡು ಉದ್ಯಮಗಳಿಗೆ ಸಾಕಷ್ಟು ಅವಕಾಶವಿದೆ ನಾರಿನ ನಿಗಮವನ್ನು ಈಗಾಗಲೇ ನಾವು ಏನು ಸ್ಥಾಪನೆ ಮಾಡಿದ್ದೇವೆ, ಆದರಿಂದ ಈ ವರ್ಷವೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ಬಗ್ಗೆ ಟ್ರೈನಿಂಗ್-ಕಂ-ಪ್ರೊಡಕ್ಷನ್ ಸೆಂಟರ್ಸ್‌ನ್ನು ನಾವು ಶುರು ಮಾಡುತ್ತಿದ್ದೇವೆ. ಅಷ್ಟೇ ಅಲ್ಲ, ೮೫-೮೬ ರಲ್ಲಿ ೧೩ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ನಾವು ಪ್ರೊವೈಡ್ ಮಾಡಿದ್ದರೆ, ಈ ವರ್ಷ ೧೬.೨ ಲಕ ಪ್ರೊವೈಡ್ ಮಾಡಿದ್ದೇವೆ. ಏಕೆಂದರೆ, ಈ ಉದ್ಯಮಕ್ಕೆ ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶವಿದೆ. ಈ ಉದ್ಯಮವನ್ನು ಪ್ರೋತ್ಸಾಹಿಸಲು ಸರ್ಕಾರ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದೆ ಮಾನ್ಯ ಶ್ರೀನಿವಾಸ್‌ರವರು ಎಂಪ್ಲಾಯ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳಿದರು. ಅದನ್ನು ನಾನೂ ಒಪ್ಪುತ್ತೇನೆ. ಇದು ಕ್ರಿಯಾಶೀಲ ಆಗಬೇಕು. ಆದರೆ ಇದನ್ನು ನಾವು ಸಾಕಷ್ಟು ಸುಧಾರಣೆ ಮಾಡಿದ್ದೇವೆ. ಈ ವರ್ಷ ನಾವು ೯ ಇಡಿಪಿ ಮಾಡಿದ್ದೇವೆ. ಅಷ್ಟೇ ಅಲ್ಲ, ಮಹಿಳೆಯರಿಗೂ ಸಹ ಈ ವರ್ಷ ೩ ಇಡಿಪಿಗಳನ್ನು ಮಾಡಿದ್ದೇವೆ. ಮಹಿಳೆಯರೂ ಸಹ ಮುಂದೆ ಬರಬೇಕೆಂಬ ಉದ್ದೇಶದಿಂದ, ಅವರೂ ಸಹ ಸಣ್ಣ ಕೈಗಾರಿಕೆಯನ್ನು ಶುರುಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ಮಾನ್ಯ ನಂಜಯ್ಯನಮಠ್‌ರವರು ಕೈಮಗ್ಗ ಇಲಾಖೆ ಮತ್ತು ನೇಕಾರರ ಸಹಕಾರ ಸಂಘಗಳಲ್ಲಿ ಮಲತಾಯಿ ಧೋರಣೆಯನ್ನು ನಾವು ಅನುಸರಿಸುತ್ತಿದ್ದೇವೆ ಎಂದು ಹೇಳಿದರು ಇದು ಸರಿಯಲ್ಲ ಅಷ್ಟೇ ಅಲ್ಲ, ತಾವು ಹೇಳಿದಂತಹ ಯಾವುದೇ ಕೆಲಸವನ್ನು ನಾವು ಮಾಡಿಲ್ಲವೆಂದು ಹೇಳಿದರು ಇದೂ ಸರಿಯಲ್ಲ. ಏಕೆಂದರೆ, ರಿಬೇಟ್ ಸಿಗುವ ವ್ಯವಸ್ಥೆ ಏನಿದೆ, ಅದಕ್ಕೆ ಒಂದೇ ಒಂದು ಪ್ರೊಸೀಜರ್. ನಮ್ಮ ಸಂಘ ಅಡಿಷನಲ್ ಡೈರೆಕ್ಟರ್ ಏನಿದ್ದಾರೆ, ಅವರ ಮುಖಾಂತರ

ಡೈರೆಕ್ಟರ್‌ರವರು ಮಂಜೂರು ಮಾಡಬೇಕು. ಇವತ್ತು ಯಾವುದೇ ವಿಧವಾದ ಮಲತಾಯಿ ಧೋರಣೆಯನ್ನು ನಾವು ಮಾಡಿಲ್ಲ ಅಲ್ಲದೆ, ೧ ಕೋಟಿ ರೂಪಾಯಿ ರಿಬೇಟ್ ಕೊಡಬೇಕಾಗಿದೆ ಎಂದು ಹೇಳಿದ್ದೀರಿ. ನಿಜ, ೯೭ ಲಕ್ಷ ರಿಬೇಟ್ ಕೊಡುವುದು ನಿಜ. ಆದರೆ, ಹಣ ವಿತರಣೆ ಮಾಡಬೇಕಾದರೆ ನಮ್ಮ ಮೇಲೆ ಕೆಲವು ಜವಾಬ್ದಾರಿ ಇದೆ, ಅಡಿಷನಲ್ ಡೈರೆಕ್ಟರ್ ಮೇಲೆ ಕೆಲವು ಜವಾಬ್ದಾರಿ ಇವೆ, ಡೈರೆಕ್ಟರ್ ಮೇಲೂ ಕೆಲವು ಜವಾಬ್ದಾರಿಗಳಿವೆ. ಆದ್ದರಿಂದ ಮಾಹಿತಿ ಬಂದ ನಂತರ ಇದೇ ತಿಂಗಳೊಳಗಾಗಿ ಎಲ್ಲಾ ಹಣವನ್ನೂ ಒದಗಿಸುತ್ತೇವೆಂದು ಈ ಸಂದರ್ಭದಲ್ಲಿ ಭರವಸೆಯನ್ನು ಕೊಡಬಯಸುತ್ತೇನೆ. ಮತ್ತು ನಾವು ನಮ್ಮ ಸಹಕಾರ ಸಂಘದಲ್ಲಿರುವ ಅಡಿಷನಲ್ ರಿಜಿಸ್ಟ್ರಾರ್‌ರವರು ಒಳ್ಳೆಯವರು, ಅವರ ಅಧಿಕಾರವನ್ನು ತಮ್ಮ ಡೈರೆಕ್ಟರ್ ವಿತ್‌ಡ್ರಾ ಮಾಡಿದ್ದಾರೆಂದು ಅಪಾದನೆ ಮಾಡಿದ್ದೀರಿ ಆದರೆ, ಅದು ನಿಜವಲ್ಲ ಯಾರ್ಯಾರ ಅಧಿಕಾರವನ್ನೂ ನಾವು ಕಡಿಮೆ ಮಾಡಿಲ್ಲ, ಹೆಚ್ಚೂ ಮಾಡಿಲ್ಲ. ಆದ್ದರಿಂದ ಇದರ ಬಗೆಗೆ ತಮ್ಮ ಭಯ ಅನಾವಶ್ಯಕ ತಾವು ಈ ನಮ್ಮ ಜನತಾ ಸೀರೆಯ ಬಗ್ಗೆ ಹೇಳಿದ್ದೀರಿ. ಆದರೆ ನನ್ನ ಬಳಿ ಜನತಾ ಸೀರೆ ಹೀಗೆ ಇದೆ, ಪಂಚೆ ಹಾಗೆ ಇದೆ ಎಂದು ಒಂದು ದಿನವೂ ಯಾರೂ ಹೇಳಲಿಲ್ಲ. ಆದರೆ ಶಾಸನ ಸಭೆಯಲ್ಲಿ ಟೀಕೆ ಮಾಡಬೇಕೆಂದು ಮಾತ್ರ ಒಂದು ಟೀಕೆ ಮಾತ್ರ ಹೇಳಬಲ್ಲೆ. ಇವತ್ತು ನಮ್ಮ ಆಂಧ್ರ ಪ್ರದೇಶದಲ್ಲಿ ಸಹ ಈ ಸ್ಕೀಂ ಇದೆ. ಆಂಧ್ರದಲ್ಲಿ ಆಫ್‌ಟೇಕ್ ಇನ್ ದಿ ಸ್ಕೀಂ ಈಸ್, ೪೦ ಪರ್ಸೆಂಟ್. ಆದರೆ ಇಲ್ಲಿ ಆಫ್‌ಟೇಕ್ ಇನ್ ದಿ ಸ್ಕೀಂ ೭೨ ಪರ್ಸೆಂಟ್ ಇದೆ. ಮತ್ತು ಈಗಾಗಲೇ ೧೩೪ ತಾಲ್ಲೂಕುಗಳನ್ನು ನಾವು ಕವರ್ ಮಾಡಿದ್ದೇವೆ. ಇದು ಕಡುಬಡವರಿಗೆ ಮಾಡಿದ ಸ್ಕೀಂ. ಇದನ್ನು ತಾವೂ ಸಹ ಮೆಚ್ಚಬೇಕು. ಏನಾದರೂ ಸಮಸ್ಯೆ ಇದ್ದರೆ ನನ್ನ ಗಮನಕ್ಕೆ ತನ್ನಿ, ಪರಿಹರಿಸಲು ಪ್ರಯತ್ನಪಡುತ್ತೇನೆ ಎಂದು ಭರವಸೆ ಕೊಡುತ್ತಿದ್ದೇನೆ. ಇನ್ನು ಈ ರಿಬೇಟ್ ಬಗ್ಗೆ ಹೇಳಬಯಸುತ್ತೇನೆ. ೧೯೮೩-೮೪ರಲ್ಲಿ ಹ್ಯಾಂಡ್‌ಲೂಂ ಕಾರ್ಪೊರೇಷನ್‌ಗೆ ನಾವು ಬಜೆಟ್ ಅಲಾಟ್ ಮಾಡಿದ್ದು ೯೦ ಲಕ್ಷ ಮತ್ತು ವೀವರ್ಸ್ ಕಾರ್ಪೊರೇಷನ್‌ಗೆ ೭೦ ಲಕ್ಷ ಇತ್ತು ೧೯೮೪-೮೫ ರಲ್ಲಿ ೨೦೦ ಲಕ್ಷ ಮಾಡಿದ್ದೇವೆ. ವೀವರ್ಸ್‌ಗೂ ೨೦೦ ಲಕ್ಷ ಮಾಡಿದ್ದೇವೆ. ಕಳೆದ ವರ್ಷ ೩೦೦ ಲಕ್ಷ ಮಾಡಿದ್ದೇವೆ. ವೀವರ್ಸ್ ಕಾರ್ಪೊರೇಷನ್‌ಗೆ ೧೯೦ ಲಕ್ಷ ಮಾಡಿದ್ದೇವೆ. ೧೯೮೬-೮೭ರಲ್ಲಿ ಹ್ಯಾಂಡ್‌ಲೂಂ ಕಾರ್ಪೊರೇಷನ್‌ಗೆ ೩೦೦ ಲಕ್ಷ ಮತ್ತು ವೀವರ್ಸ್ ಕಾರ್ಪೊರೇಷನ್‌ಗೆ ೨೦೦ ಲಕ್ಷ ಮಾಡಿದ್ದೇವೆ. ಅಂದರೆ, ಸರ್ಕಾರ ಉತ್ತೇಜನ ಕೊಡುತ್ತಿದೆ ಎಂಬುದು ಇದರಿಂದ ಕಾಣುತ್ತಿದೆ ಆದ್ದರಿಂದ ತಮ್ಮ ಆಪಾದನೆಯನ್ನು ತಾವೇ ಪರಿಶೀಲನೆ ಮಾಡಬೇಕೆಂದು ಕೋರುತ್ತೇನೆ ಮತ್ತು ಹ್ಯಾಂಡ್ ಲೂಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡುವ ನೇಕಾರರಿಗೆ ನಾವು ಇದೇ ವರ್ಷ ೧೯೮೫ರ ೨ನೇ ಅಕ್ಟೋಬರ್ ಮತ್ತು ಡಿಸೆಂಬರ್‌ನಲ್ಲಿ ೧೮ ಲಕ್ಷ ವೇಜಸ್ ಕೊಟ್ಟಿದ್ದೇವೆ. ತಾವು ಇನ್ನೂ ಕೊಡಿ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ವೀವರ್ಸ್ ಕೋಆಪರೇಟಿವ್ ಸೊಸೈಟಿ ಏನಿದೆ ಅವರಿಗೆ ನಾವು ಕೊಟ್ಟ ವೇಜಸ್ ಅವರು ಕೊಡಲಿಕ್ಕೆ ಸಾಧ್ಯವಿಲ್ಲದಿದ್ದರೆ ಅವರ ಹಿಡಿತದಿಂದ ಹೋಗಿ ಅವರು ನಮ್ಮಲ್ಲಿಗೆ ಬರಬಹುದು. ಅಷ್ಟೇ ಅಲ್ಲ ಎಲ್ಲಿ ವೀವರ್ಸ್ ಸೊಸೈಟಿಗಳು ಕೆಲಸ ಮಾಡುತ್ತಿವೆ ಅಲ್ಲಿ ನಮ್ಮ ನಿಗಮ ಕೈ ಹಾಕುವುದು ಬೇಡವೆಂದು ಹೇಳುತ್ತಿದ್ದಾರೆ ನಿಜ ಇದನ್ನು ನಾನೂ ಒಪ್ಪುತ್ತೇನೆ. ಇದು ಒಳ್ಳೆಯ ಸೂಚನೆಯೂ ಹೌದು. ಆ ಒಂದು ನೇಕಾರ ಸಹಕಾರ ಸಂಘಕ್ಕೆ ಯಾವುದೇ ತರಹದ ತೊಂದರೆ ಆಗಿಲ್ಲವಾದರೆ, ನಾವು ತೆಗೆಯುತ್ತೇವೆಯೋ ವಿನಾ ನೇಕಾರ ಸಹಕಾರ ಸಂಘ ಮುಚ್ಚುವ ಉದ್ದೇಶ ನಮಗೆ ಇಲ್ಲ. ಅದೇ ಪ್ರಕಾರ, ನಮ್ಮ ಒಂದು ಡೈರೆಕ್ಟೊರೇಟ್ ಮಾಡಬೇಕೆಂದು ಒಂದು ಪ್ರೊಪೋಸಲ್ ಇತ್ತು. ಶ್ರೀಮಾನ್ ಬಾಪೂಗೌಡರು ಇದ್ದಾಗ ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದರು. ಇಲ್ಲ ಆದರೆ ಅದು ಇನ್ನೂ ಪರಿಶೀಲನೆಯಲ್ಲಿದೆ. ಇದರ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಅದನ್ನು ಪರಿಶೀಲನೆ ಮಾಡುತ್ತೇವೆ. ಆದರೆ, ಗುಣಮಟ್ಟ ಹೆಚ್ಚಾಗಬೇಕಾದರೆ, ಇದರ ಉಪಯೋಗ ಆಗಬಹುದು ಅಥವಾ ಮತ್ತೊಂದು ಆಗಬೇಕಾದರೆ, ಕೆಲಸಮಾಡುವ ಜನರ ಕಮಿಟ್‌ಮೆಂಟ್ ಇರಬೇಕು. ಹೆಚ್ಚಿಗೆ ಕಾರ್ಪೊರೇಷನ್ ಮಾಡಿದರೆ ಅಥವಾ ಜನ ಹೆಚ್ಚು ಮಾಡಿದರೆ ಆಗುವುದಿಲ್ಲ.

ಆದ್ದರಿಂದ ಯಾವ ಜನ ಅಲ್ಲಿ ಕೆಲಸ ಮಾಡುತ್ತಿದಾರೋ ಅವರ ಬಗ್ಗೆ ಕಮಿಟ್‌ಮೆಂಟ್ ಇರಬೇಕು. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ವೀವರ್ಸ್‌ಗೆ ರಿಬೇಟ್ ಕೊಡುವ ಬಗ್ಗೆಯೂ ಸಹ ಪರಿಶೀಲನೆ ಮಾಡುತ್ತಿದ್ದೇವೆ. ಪವರ್ಸ್ ಡಿಸೆಂಟ್ರಲೈಸ್ ಮಾಡಲು ಪರಿಶೀಲನೆ ಮಾಡುತ್ತಿದ್ದೇವೆ. ಡೈರೆಕ್ಟರ್ ಜನರಲ್‌ನಿಂದ ಮ್ಯಾನೇಜರ್‌ಗೆ ಪವರ್ಸನ್ನು ಏತಕ್ಕೆ ಕೊಡಬಾರದೆಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

ಮತ್ತೆ ಶ್ರೀಮಾನ್ ರೆಡ್ಡಿಯವರು ಬ್ಲಾಕ್ ಲಿಸ್ಟ್ ಆದ ಕೆಲವು ಸೊಸೈಟಿಗಳ ಬಗ್ಗೆ ಹೇಳಿದರು. ಅದೆಲ್ಲವನ್ನೂ ಸಹ ನಾವು ವಿಚಾರಣೆ ಮಾಡುತ್ತಿದ್ದೇವೆ. ಬೆಳಗಾವಮ್, ಬಿಜಾಪುರ, ಧಾರವಾಡದಲ್ಲಿ ರುವ ಬ್ಲಾಕ್ ಲಿಸ್ಟ್ ಸೊಸೈಟಿಗಳ ಬಗ್ಗೆ ಹೇಳಿದರು. ೧೯೭೭ನೇ ಇಸವಿಯಲ್ಲಿ ಮಾಡಿರತಕ್ಕದ್ದು ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಇದರ ಬಗ್ಗೆ ಸಾಕಷ್ಟು ದೂರು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ನಾನು ಸಹ ವಿಚಾರಣೆ ಮಾಡಿ ಪುನಃ ಚೌಕಾಸಿ ಮಾಡಿ ನೇಕಾರ ಸಹಕಾರ ಸಂಘಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದರೆ ಅವುಗಳಿಗೆ ರಿಬೇಟ್ ಕೊಡಿಸುತ್ತೇವೆ. ಒಂದು ವೇಳೆ ಅಧಿಕಾರಿಗಳು ತಪ್ಪು ಮಾಡಿದ್ದರೆ ಅಧಿಕಾರಿಗಳಿಗೆ ಶಿಕ್ಷೆ ಮಾಡುತ್ತೇವೆಂದು ಭರವಸೆ ಕೊಡುತ್ತೇನೆ

ಮತ್ತೆ ಸೇಲಂಟೈಪ್ technolog ಮಾಡಿ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಷನ್ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಸರ್ಕಾರದವರು ಈ ಬಗ್ಗೆ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಕೆಲವು ಸ್ಥಳವನ್ನು ನಿಗದಿ ಮಾಡಬೇಕಾಗಿದೆ. ಮತ್ತೆ ಇದೇ ತಿಂಗಳೊಳಗೆ ಅದರ ಬಗ್ಗೆ ನಿರ್ಣಯವನ್ನು ಸಹ ತೆಗೆದುಕೊಳ್ಳುತ್ತೇವೆಂದು ಈ ಸದನದಲ್ಲಿ ಹೇಳ ಬಯಸುತ್ತೇನೆ.

ಮತ್ತೆ ಕೈಮಗ್ಗದ ಖಾದಿ ಬಗ್ಗೆ ಎಲ್ಲರೂ ಏನು ಹೇಳುತ್ತಾರೆಂದರೆ ಮಾತನಾಡುವುದು ಬಹಳ ವಾಗಿದೆ, ಆದರೆ ಕಮಿಟ್‌ಮೆಂಟ್ ಕಡಿಮೆ ಇದೆ ಎಂದು ಹೇಳಿದರು. ಆದರೆ ಸರ್ಕಾರವೇ ಕಮಿಟ್‌ಮೆಂಟ್ ಮಾಡಿಕೊಂಡಿದೆ. ಅದರ ಸಲುವಾಗಿ ಮತ್ತೊಂದು ಆಜ್ಞೆಯನ್ನು ಹೊರಡಿಸಲಾಗಿದೆ. ಸರ್ಕಾರದ ಪ್ರತಿಯೊಂದು ಇಲಾಖೆ, ಗೌವರ್ನ್‌ಮೆಂಟ್ ಅಂಡರ್ ಟೇಕಿಂಗ್ಸ್ ಕಾರ್ಪೊರೇಷನ್ಸ್ ತಮಗೆ ಬೇಕಾಗುವ requirement ಅಂದರೆ ಖಾದಿ ಕೈಮಗ್ಗದ ಸಿಲ್ಕ್ ಇವೇ ಮುಂತಾದವುಗಳನ್ನು ಈ ಇಲಾಖೆಯಿಂದಲೇ ಖರೀದಿ ಮಾಡಬೇಕೆಂದು ಇದೆ. ಯಾವುದೇ ಅಧಿಕಾರಿಗಳಾಗಲಿ ಇದನ್ನು ಬ್ರೀಚ್ ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ಈಗಾಗಲೇ ಒಂದು ಆಜ್ಞೆಯನ್ನು ಹೊರಡಿಸಿದೆ. ಈಗ ಟೆಕ್ಸ್‌ಟೈಲ್ ಪಾಲಿಸಿಯಿಂದ ಸಾಕಷ್ಟು ಸಮಸ್ಯೆಗಳು ಈ ಕೈಮಗ್ಗದ ಮೇಲೆ ನಿರ್ಮಾಣವಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈವತ್ತು ನಮ್ಮ ಎಕ್ಸ್‌ಪೋರ್ಟ್ ಪಾಲಿಸಿಯನ್ನು ಮಿಲ್ ಸೆಕ್ಟರ್‌ನಿಂದ ಕಂಟ್ರೋಲ್ ಕ್ಲೋತ್ ಹ್ಯಾಂಡ್‌ಲೂಮ್ ಸೆಕ್ಟರ್‌ಗೆ ಟ್ರಾನ್ಸ್‌ಫರ್ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಇದರಿಂದ ನಿಜವಾಗಿ ಬಹಳ ದೊಡ್ಡ ಸಮಸ್ಯೆ ಇಲ್ಲಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರದ ನೀತಿಗೆ ನಾವು ಎಂದೂ ವಿರುದ್ಧವಾಗಿಲ್ಲ. ಆದರೆ Textile sector is a sector where employment could be generated, ಆದರೆ ನಾವು ಎಲ್ಲಿ ಹೋಗುತ್ತಿದ್ದೇವೆಂದರೆ ಈವತ್ತು ಕೇಂದ್ರ ಸರ್ಕಾರದ ನೀತಿಯಿಂದ Total modernisation in production ಏನು ಇದೆ ಆದರಿಂದ ಇವತ್ತು ಲಕ್ಷಾಂತರ ಜನ ಅನ್‌ಎಂಪ್ಲಾಯ್‌ಮೆಂಟ್ ಆಗಬಹುದು. ಇದರ ಬಗ್ಗೆ ಸಹ ಸರ್ಕಾರ ಕ್ರಮ ಕೈಗೊಂಡಿದೆ. ಆದ್ದರಿಂದ ನಾವು ಒಂದು ಪ್ಯಾಕೇಜ್ ಪ್ರೋಗ್ರಾಮ್ ಎಂದು ತೆಗೆದುಕೊಂಡಿದ್ದೇವೆ. ಈ ೧೮ ಕೋಟಿ ರೂಪಾಯಿಗಳ ಯೋಜನೆಗೆ ಈಗಾಗಲೇ ೧೪ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ೨,೭೦೦ ಪೆಡ್ಲುಗಳನ್ನು ತಯಾರು ಮಾಡಿದ್ದೇವೆ. ಮತ್ತು ಇದೇ ಸೆಪ್ಟೆಂಬರ್ ಒಳಗೆ ಪೂರ್ತಿ ಮಾಡುತ್ತೇವೆ. ಮತ್ತು ಸೆಕೆಂಡ್ ಸ್ಟೇಜ್ ಬಗ್ಗೆ ಪ್ಲಾನ್ ತಯಾರು ಮಾಡುತ್ತಿದ್ದೇವೆ. ೨೫ ಕೋಟಿ ಅಥವಾ ೩೦ ಕೋಟಿ ರೂಪಾಯಿಗಳ ಈ ಯೋಜನೆಯಲ್ಲಿ ಈಗಾಗಲೇ ಕೈಮಗ್ಗ, ಲಿಡ್‌ಕರ್, ಸಿರಿಕಲ್ಚರ್ ಮತ್ತು ಹ್ಯಾಂಡಿಕ್ರಾಫ್ಟ್ ಇವುಗಳೆಲ್ಲ ಈಗಾಗಲೇ ಕವರ್ ಆಗಿವೆ. ಆದರೆ ಈ ಬಾರಿ ನಾರಿನಲ್ಲಿ ಏನು ಜನ ಕೆಲಸ ಮಾಡುತ್ತಿದ್ದಾರೆ. ಈ ಕೈಗಾರಿಕೋದ್ಯಮಕ್ಕೆ ಸಹ ಹೆಚ್ಚಿನ ಉತ್ತೇಜನ ಕೊಡುವ ಸಲುವಾಗಿ ಈ ಯೋಜನೆಯನ್ನು ಇಂಪ್ರೂವ್ ಮಾಡುತ್ತಿದ್ದೇವೆ.

ಮಾನ್ಯ ಶ್ರೀ ರೆಡ್ಡಿಯವರು ವಿವರ್ಸ್ ಕೋಆಪರೇಟೀವ್ ಸೊಸೈಟಿಗಳನ್ನು ತೆಗೆದುಕೊಳ್ಳ ಬೇಕೆಂದು ಹೇಳಿದರು. ಅವುಗಳನ್ನೂ ಸಹ ಈ ಯೋಜನೆಯೊಳಗೆ ಇನ್‌ಕ್ಲೂಡ್ ಮಾಡುತ್ತಿದ್ದೇವೆ. ಇಷ್ಟೇ ಅಲ್ಲ. ಮೊದಲನೇ ಹಂತದಲ್ಲಿಯೇ ಕೆಲಸಗಾರರಿಗೆ ಕಮ್ಯುನಿಟಿ ಫೆಸಿಲಿಟೀಸ್ ಕೊಡುವ ಸಲುವಾಗಿ ಅವರಿಗೆ ಸ್ಕೂಲ್ ಬಿಲ್ಡಿಂಗ್, ದವಾಖಾನೆ. ಇವೇ ಮುಂತಾದವುಗಳಿಗೆ ಕಟ್ಟಡಗಳನ್ನು ಕಟ್ಟಿಸತಕ್ಕಂಥ ಯೋಜನೆಯನ್ನೂ ಕೂಡ ಸರ್ಕಾರ ಹಾಕಿಕೊಂಡಿದೆ. ಅದೇ ಪ್ರಕಾರ ಈ ಒಂದು ಹೊಸ ಸ್ಕೀಮಿಗೆ ನಮ್ಮ ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್‌ಗಳು ಮತ್ತು ನಬಾರ್ಡ್‌ನವರು ಮುಂದೆ ಬಂದಿದ್ದಾರೆ. ಅವರು ಹಿಂದೆ ಆರ್ಥಿಕ ನೆರವನ್ನು ಕೃಷಿ ಇಲಾಖೆಗೆ ಮಾತ್ರ ಕೊಡುವುದು ಇತ್ತು

ಈಗ ಮೊದಲಬಾರಿಗೆ ಅವರು ಗುಡಿ ಕೈಗಾರಿಕೆ ಮತ್ತು ಇತರ ಗ್ರಾಮೀಣ ಕೈಗಾರಿಕೆಗಳಿಗೂ ಸಹಾಯ ಮಾಡಬೇಕೆಂದು ಮುಂದೆ ಬಂದಿದ್ದಾರೆ. ಆದ್ದರಿಂದ ಲಾಭ ಬರತಕ್ಕಂಥ ಗ್ರಾಮೀಣ ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಬೇಕೆಂದು ನಾವು ಸಹ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಮತ್ತೆ ತಮಗೆ ಗೊತ್ತಿರುವಂತೆ ಸ್ಥಳೀಯ ಕೈಗಾರಿಕೆಗಳ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡ ನಿಲುವಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸಬೇಕಾಗಿದೆ. ನಮ್ಮ ದೇಶದಲ್ಲಿ ಮೊಟ್ಟ ಮೊದಲನೆಬಾರಿಗೆ ಸೇಲ್ಸ್ ಟ್ಯಾಕ್ಸನ್ನು ಮೂರು ತಿಂಗಳವರೆಗೆ ರಿರ್ಟನ್ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಸಾಕಷ್ಟು ರಾಜ್ಯಕ್ಕೆ ಆರ್ಥಿಕ ಸಮಸ್ಯೆಗಳು ಇದ್ದರೂ ಕಚ್ಚಾ ಅಗರಬತ್ತಿಗೆ ಎಷ್ಟೋ ದಿವಸಗಳಿಂದ ಟ್ಯಾಕ್ಸ್ ಎಕ್ಸಮ್‌ಷನ್ ಮಾಡಬೇಕೆಂದು ಹೇಳುತ್ತಿದ್ದರು, ಅದಕ್ಕೆ ನಮ್ಮ ಸರ್ಕಾರದವರು ಸಹಾಯ ಮಾಡಿದ್ದಾರೆ. ನಮ್ಮ ಲಿಡ್‌ಕಾರ್ ಹ್ಯಾಂಡಿಕ್ರಾಫ್ಟ್ ಕಾರ್ಪೊರೇಷನ್ ಮತ್ತು ಕೈಮಗ್ಗದ ನಿಗಮದಲ್ಲಿಯಾಗಲಿ ಯಾರು ಕೆಲಸಗಾರರು ಅಂದರೆ ನೇಕಾರರಾಗಲಿ, ಆಫೀಸರ್ಸ್ ಆಗಲಿ, ಕಾಬ್ಲರ್ಸ್ ಆಗಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಒಂದು ಯಾರ್ಡ್ ತಯಾರು ಮಾಡಿದ್ದೇವೆ ಯಾರು ಈ ಮೂರು ನಿಗಮಗಳಲ್ಲಿ ಕವರ್ ಆಗಿರತಕ್ಕಂಥವರಿಗೆ ಪ್ರತಿಯೊಬ್ಬರಿಗೂ ಐದು ಸಾವಿರ ರೂಪಾಯಿಗಳ ಗ್ರೂಪ್ ಇನ್‌ಷೂರೆನ್ಸ್ ಯೋಜನೆಯನ್ನು ಅಳವಡಿಸಿದ್ದೇವೆ. ೧೦ ರೂಪಾಯಿಗಳ ಡಿಪಾಸಿಟ್ ಅವರು ಮಾಡಿದರೆ ೧೦ ರೂಪಾಯಿ ಬಡ್ಡಿಯನ್ನು ಕೊಡತಕ್ಕದ್ದು ಈ ಯೋಜನೆಯ ಉದ್ದೇಶವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಬಾಟಾ ಷೂ ಕಂಪನಿಯವರು ಲೆದರ್ ಗೂಡ್ಸ್ ಮಾಡುತ್ತಿದ್ದಾರೆ. ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಡಬೇಕೆಂದು ತಾವು ಒಂದು ಕಡೆ ಹೇಳುತ್ತಿದ್ದೀರಿ, ಚರ್ಮದ ಕೈಗಾರಿಕೆಗಳನ್ನು ಮಾಡುವವರಿಗೆ ಸೇಲ್ಸ್ ಟ್ಯಾಕ್ಸ್ ಹಾಕಿ ಇವರಿಗೆ ಎಕ್ಸಮ್‌ಷನ್ ೩೦ ಪರ್ಸೆಂಟ್ ಕೊಡುತ್ತೇವೆಂದು ಹೇಳುತ್ತೀರಿ. ಈ ಕೈಗಾರಿಕೆಗಳಿಗೆ ವಿನಾಯಿತಿಯನ್ನು ಕೊಟ್ಟರೆ ಇವರಿಗೆ ಉತ್ತೇಜನ ಕೊಟ್ಟಹಾಗೆ ಆಗುತ್ತದೆ. ಟ್ಯಾಕ್ಸ್ ಎಕ್ಸಮ್‌ಷನ್ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಏತಕ್ಕೆಂದರೆ ಬಾಟಾ ಕಂಪನಿಯಂತವರು ೧೦೦–೨೦೦ ಕೋಟಿ ರೂಪಾಯಿಗಳ ಬಂಡವಾಳ ಇಟ್ಟುಕೊಂಡಿರತಕ್ಕಂಥವರಿಗೆ ಏತಕ್ಕೆ ನೀವು ಎಕ್ಸಮ್‌ಷನ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳಿಗೆ ಸಹಾಯ ಮಾಡತಕ್ಕಂಥದ್ದು ಇರುತ್ತದೆ ತಾವು ಹೇಳಿದುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ, ಅದು ಅವರ ನಿರ್ಣಯಕ್ಕೆ ಬಿಟ್ಟಿರತಕ್ಕಂಥದ್ದಾಗಿರುತ್ತದೆ ಈ ಮೂರ ವರ್ಗದಲ್ಲಿ ಸಾಕಷ್ಟು ಬಡತನ ಇದೆ. ಆದರೆ ನಾವು ಮಾಡಿರತಕ್ಕಂಥ ಯೋಜನೆಗಳಿಂದ ಈ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಯಾವ ಪ್ರಮಾಣದಲ್ಲಿ ಸಕ್ಸಸ್ ಆಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಆಗಲಿಲ್ಲ. ಅದು ಎಲ್ಲಿಯುತನಕ ಆಗುವುದಿಲ್ಲವೋ ಅಲ್ಲಿಯುತನಕ ಈ ಮೂರು ವರ್ಗದ ಜನರ ಆರ್ಥಿಕ ಪ್ರಗತಿಯಾಗುವುದಿಲ್ಲ. ಅವರ ಸಲುವಾಗಿ ಇನ್‌ಸೆಂಟೀವ್ ಕೊಡುವಂತಹ ಯೋಜನೆಗಳನ್ನು ಈ ಮೂರು ನಿಗಮಗಳಲ್ಲಿ ಕೊಡುವಂತಹ ಯೋಜನೆಗಳನ್ನು ಈ ವರ್ಷದಲ್ಲಿ ಜಾರಿಯಲ್ಲಿ ತರುತ್ತೇವೆ.

ಮಾನ್ಯ ರೆಡ್ಡಿಯವರು ಪವರ್ loom ಮೇಲೆ power ent ಹಾಕಿದ್ದೇವೆಂದು ಹೇಳಿದ್ದಾರೆ. ಇದು ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಪವರ್ ಸಿಚ್ಯುವೇಶನ್ ಇಂಪ್ರೂವ್ ಆದಮೇಲೆ ನಾವು ಇದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇವೆ. ಮತ್ತೆ ಸ್ಪೆಷಲ್ ಕಾಂಪೊನೆಂಟ್ ಯೋಜನೆಯ ಬಗ್ಗೆ ಮಾನ್ಯ ಲಕ್ಕಪ್ಪನವರು ಮತ್ತು ಮಾನ್ಯ ರಾಮಕೃಷ್ಣರವರು ಪ್ರಸ್ತಾಪ ಮಾಡಿದ್ದಾರೆ.

ನಮ್ಮ ಈ ವರ್ಷದ ಮುಂಗಡಪತ್ರದಲ್ಲಿ ಸ್ಪೆಶಲ್ ಕಾಂಪೋನೆಂಟ್‌ಗೆ ಕಳೆದ ವರ್ಷ ೮೩ ಲಕ್ಷ ಒದಗಿಸಿದ್ದೇವೆ ಈ ವರ್ಷ ೨ ಕೋಟಿ ೪೩ ಲಕ್ಷ ರೂಪಾಯಿ ಪ್ರೊವಾಯ್ಡ್ ಮಾಡಿದ್ದೇವೆ. ಆದ್ದರಿಂದ ಬಡಜನರಿಗೆ, ಹಿಂದುಳಿದವರಿಗೆ, ಪರಿಶಿಷ್ಟ ಜಾತಿಯವರಿಗೆ ಸಾಕಷ್ಟು ಅನುಕೂಲವಾಗಬಹುದು ಎಂಬ ಭರವಸೆ ನನಗೆ ಇದೆ. ಅದೇ ಪ್ರಕಾರ ಇವತ್ತು ಅತೀ ಚಿಕ್ಕ ಕೈಗಾರಿಕೆಗಳ ಬಗ್ಗೆ ಅನೇಕ ಸಮಸ್ಯೆಗಳು ಇವೆ. ಎರಡು ಲಕ್ಷ ಒಳಗಡೆ ಪ್ಲಾನ್ ಅಂಡ್ ಮೆಶಿನರಿ ಇದ್ದರೆ ಅದನ್ನು ಚಿಕ್ಕ ಕೈಗಾರಿಕೆ ಎಂದು ಪರಿಗಣಿಸಬೇಕೆಂದು ಡೆಫಿನಿಶನ್

ಇದೆ. ಇದನ್ನು ಮೂರರಿಂದ ನಾಲ್ಕು ಲಕ್ಷದವರೆಗೆ ಏರಿಸಬೇಕೆಂದು ಕೇಂದ್ರಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇವೆ. ಮತ್ತೊಂದು ಕೈಗಾರಿಕೆ ಸಮಸ್ಯೆ ಬಂದಿದೆ. ಕೇಂದ್ರ ಸರ್ಕಾರದ ನೋ ಇಂಡಸಿ ಡಿಸ್ಟ್ರಿಕ್ಟ್ ಪಾಲಿಸಿ ಏನು ಇದೆ ಸಾಕಷ್ಟು ಸಮಸ್ಯೆ ನಿರ್ಮಾಣ ಮಾಡಿದೆ. ನಮ್ಮ ರಾಜ್ಯದಲ್ಲಿ ಬೀದರ್ ಒಂದೇ ಕೈಗಾರಿಕೆಗಳು ಇಲ್ಲದ ಜಿಲ್ಲೆಯಾಗಿದೆ. ಆದ್ದರಿಂದ ತಾಲೂಕು ಘಟಕ ತೆಗೆದುಕೊಂಡು ನೆರವು ನೀಡುವ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ಮತ್ತು ಕೇಂದ್ರ ಸರ್ಕಾರದವರು ಇದನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಸೂಕ್ತ ಕ್ರಮ ತೆಗೆದುಕೊಳ್ಳುವ ಭರವಸೆ ಕೊಟ್ಟಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಸಂತೋಷಪಡುತ್ತೇನೆ ಮತ್ತೊಂದು ಸಂತೋಷದ ಸಂಗತಿ ಎಂದರೆ, ಕೇಂದ್ರ ಸರ್ಕಾರದವರು ತಮ್ಮ ಪ್ಲಾನಿಂಗ್ ಕಮೀಶನ್‌ನಲ್ಲಿ, ಅದು ಏಪ್ರಿಲ್‌ನಿಂದ ಡಿಸೆಂಬರ್ ೮೫ ವರೆಗೆ ರಿವ್ಯೂ ಆಯಿತು. ಅದರಲ್ಲಿ ಕರ್ನಾಟಕ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಬೆಳವಣಿಗೆಯಾಗಿದೆ ಎಂದು ತಿಳಿಸಿ 'ಎ' ಕ್ಯಾಟಗರಿ ಶಿಫಾರಸ್ಸು ಪತ್ರ ಕೊಟ್ಟಿದ್ದಾರೆ. ಅದೇ ಪ್ರಕಾರ ಬೇರೆ ನಿಗಮಗಳು ಸಹ ಪ್ರಗತಿಯನ್ನು ಸಾಧಿಸಿವೆ. ನಮ್ಮ ಕರ್ನಾಟಕ ರಾಜ್ಯ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಈ ವರ್ಷ ಸುಮಾರು ೬೦೨ ಶೆಡ್ಡುಗಳನ್ನು ಕಟ್ಟಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಪ್ರಕಾರ ಕಾರ್ಯಕ್ರಮ ಕೂಡ ನಡೆಯುತ್ತಿದೆ, ಮತ್ತು ಈ ಒಂದು ರಾ ಮೆಟೀರಿಯಲ್ ಡಿಸ್‌ಬರ್ಸ್‌ಮೆಂಟ್‌ನಲ್ಲಿ ಸಾಕಷ್ಟು ಪ್ರಗತಿಯನ್ನು ಈ ನಿಗಮ ಮಾಡಿದೆ ಇವತ್ತು ಮತ್ತೊಂದು ಸಮಸ್ಯೆ ಬರುತ್ತದೆ ಅದೇನೆಂದರೆ, ಶೆಡ್ಡುಗಳನ್ನು ಕಟ್ಟಿದ ನಂತರ ಅವುಗಳನ್ನು ಈ ನಮ್ಮ ನಿಗಮದ ಮುಖಾಂತರ ಲಾಭನಷ್ಟ ಇಲ್ಲದಹಾಗೆ ಇದನ್ನು ಮಾರುತ್ತೇವೆ. ಇವತ್ತು ಹಿಂದುಳಿದ ಪ್ರದೇಶಗಳಲ್ಲಿ ಸಾಕಷ್ಟು ಸಮಸ್ಯೆ ನಿರ್ಮಾಣವಾಗಿದೆ. ಗುಜರಾತಿನಲ್ಲಿ ಪ್ಲಾಟ್ ಡೆವಲಪ್‌ಮೆಂಟ್ ಮಾಡಿ ಶೆಡ್ಡುಗಳನ್ನು ಕೊಡುತ್ತಾರೆ. ಅದೇ ಪ್ರಕಾರ ಇಲ್ಲೂ ಕೂಡ ಕೊಡಬೇಕೆಂದು ನಿಗಮ ನಿರ್ಣಯ ತೆಗೆದುಕೊಂಡಿದೆ. ಅದೇ ಪ್ರಕಾರ ಹಿಂದಿನ ಅಧಿವೇಶನದಲ್ಲಿ own your shed ಬಗ್ಗೆ ಶ್ರೀಮಾನ್ ಮೊಯಿಲಿಯವರು ಪ್ರಸ್ತಾಪ ಮಾಡಿದ್ದರು. ಸರ್ಕಾರ ೩೨೦ ಜನರಿಗೆ ಮಂಜೂರು ಮಾಡಿದೆ. ಇದನ್ನು ಸಹ ಮಾಡಿದ್ದೇವೆ ಎಂದು ಹೇಳುವುದಕ್ಕೆ ಸಂತೋಷಪಡುತ್ತೇನೆ. ಇದೇ ಪ್ರಕಾರ ಸಣ್ಣ ಕೈಗಾರಿಕೆ ಮಾರುಕಟ್ಟೆ ನಿಗಮ ಕೂಡ ಬಹಳ ಪ್ರಗತಿಮಾಡುತ್ತಿದೆ. ಇದರಿಂದ ಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಸಹಾಯ ಆಗುತ್ತಾ ಇದೆ ಎಂದು ನನಗೆ ವಿಶ್ವಾಸ ಇದೆ. ಈಗ ಔಷಧಿ ತಯಾರಿಕೆ ಮಾಡಲಿಕ್ಕೆ ಕೆಲವು ಮನವಿಗಳು ಬಂದಿವೆ. ಇದನ್ನು ವಿಚಾರ ಮಾಡಿ ಹಾಸನ, ಬೆಳಗಾವಿಯಲ್ಲಿ ಪ್ರತ್ಯೇಕವಾಗಿ ಔಷದಿ ತಯಾರು ಮಾಡತಕ್ಕಂಥ ವಸಾಹತುಗಳನ್ನು ಮಾಡುವ ನಿರ್ಣಯ ಸಹ ನಿಗಮ ತೆಗೆದುಕೊಂಡಿದೆ. ಆದ್ದರಿಂದ ಈ ನಿಗಮ ಬಹಳ ಪ್ರಗತಿಯನ್ನು ಮಾಡಿದೆ ಎಂದು ಹೇಳುತ್ತೇನೆ. ಹಾಗೆಯೇ ಕರ್ನಾಟಕ ತೆಂಗಿನ ನಾರು ನಿಗಮ ೭ನೇ ಯೋಜನೆಯಲ್ಲಿ ೨೨ ಸಾವಿರ ಟನ್ ಗುರಿಯನ್ನು ಇಟ್ಟುಕೊಂಡಿದೆ. ಇದರಿಂದ ೨೧,೫೫೦ ಜನರಿಗೆ ಉದ್ಯೋಗಾವಕಾಶ ಆಗಬಹುದು. ಲಿಡ್ಕರ್ ಸಂಸ್ಥೆ ಸಹ ಚೆನ್ನಾಗಿ ಪ್ರಗತಿ ಮಾಡುತ್ತಿದೆ. ಇದರಿಂದ ಸಾಕಷ್ಟು ಬಡಜನರಿಗೆ ಹಾಗೂ ಪರಿಶಿಷ್ಟ ಜನರಿಗೆ ಸಹಾಯವಾಗಿದೆ. ಇದರ ಸೇಲ್ಸ್ ಪರ್ಫಾರಮೆನ್ಸ್ ೧೯೮೪-೮೫ರಲ್ಲಿ ೨೭ ಲಕ್ಷ ೮೩ ಸಾವಿರ ಇದ್ದರೆ, ಈ ವರ್ಷ ಜನವರಿ ತನಕ ೭೫ ಲಕ್ಷ ೯೦ಸಾವಿರ ಆಗಿದೆ. ಅದೇ ಪ್ರಕಾರ ರಾಮೆಟೀರಿಯಲ್ ಸಪ್ಲೈ ಸಹ ಹೆಚ್ಚಾಗುತ್ತಿದೆ. ೧೯೮೪-೮೩ರಲ್ಲಿ ೭ ಲಕ್ಷ ೩೪ ಸಾವಿರ ಇದ್ದರೆ, ಈ ವರ್ಷ ೩೧ ಲಕ್ಷ ೨೧ ಸಾವಿರ ಆಗಿದೆ. ಈ ದೃಷ್ಟಿಯಿಂದ ಎಲ್ಲಾ ರೀತಿಯಿಂದಲೂ ಪ್ರಗತಿ ಹೊಂದುತ್ತಿದೆ. ಟರ್ನ್‌ಓವರ್ ಸಹ ಜಾಸ್ತಿಯಾಗಿದೆ. ೧೯೮೪-೮೫ರಲ್ಲಿ ೫೩ ಲಕ್ಷ ಇದ್ದರೆ, ಈ ವರ್ಷ ಜನವರಿ ಖೈರುವರೆಗೆ ೧೮೫ ಲಕ್ಷ ಆಗಿದೆ. ನಮ್ಮ ಕೈಮಗ್ಗ ಇಲಾಖೆಯಲ್ಲಿ ಸಹ ಸಾಕಷ್ಟು ಪ್ರಗತಿಯಾಗಿದೆ. ಜನತಾ ಬಟ್ಟೆ ೧೯೮೪-೮೩ರಲ್ಲಿ ೯೦.೭೫ ಲಕ್ಷ ಮೀಟರ್ ಇದ್ದರೆ, ಈ ವರ್ಷದ ಉತ್ಪಾದನೆ ಜನವರಿ ಆಖೈರಿಗೆ ೧೦೪.೧೫ ಲಕ್ಷ ಮೀಟರ್ ಆಗಿದೆ. ಈ ನಿಗಮ ಸಹ ಪ್ರಗತಿಯನ್ನು ಸಾಧಿಸುತ್ತಿದೆ ಎಂದು ಹೇಳುತ್ತೇನೆ. ೧೯೮೪-೮೩ರಲ್ಲಿ ಹಾನಿ ಇದ್ದದ್ದು ಈಗ ಅದು ಲಾಭ ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ. ಈ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ, ಹಿಂದುಳಿದ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆ ಬೆಳೆಯಬೇಕೆಂಬ ಸರ್ಕಾರದ ಉದ್ದೇಶ ಈಡೇರಿದೆ ಎಂದು ಹೇಳಬಹುದು. ಇಷ್ಟು ಹೇಳಿ ಈ ಸಂದರ್ಭದಲ್ಲಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಇಲಾಖೆಗೆ ಸಂಬಂಧಿಸಿದ ಬೇಡಿಕೆಗಳಿಗೆ ಅನುಮೋದನೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

SMT. MUKTHARUNNISA.—Our Hon'ble Minister talked about Mahilas. I would like to ask some questions. Under Self-Employment Scheme,

what is the representations given to Mahilas? Have you extended loan facility to women entrepreneurs ? If so, what is the perecentage ? Have you fixed any percentage of sheds to be allotted to women ? As you know, the percentage of women population is 53. But there is no reservation for women as per the percentage. Then have you thought about the sick industries ? While starting new industries, you should not forget the sick industries. For example, K.R. Mills You said that it is opening shortly. But have you done that ?

ಶ್ರೀ ಆರ್. ಬಿ. ದೇಶಪಾಂಡೆ.—ಮೇಡಮ್, ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ನಲ್ಲಿ ಸ್ತ್ರೀ ಪುರುಷರು ಅಂತ ಏನೂ ಭೇದಭಾವ ಇಲ್ಲ. ಕೆಲವು ವರ್ಗಗಳಲ್ಲಿ ಯಾರು ೧೮–೩೫ ವರ್ಷಗಳ ಒಳಗೆ ಇದ್ದು ನಿರುದ್ಯೋಗಿಗಳು ಇರುತ್ತಾರೆ ಅವರು ಇದರ ಪ್ರಯೋಜನ ಪಡೆಯಬಹುದು. ಮಹಿಳೆಯರೂ ಕೂಡ ಇದರ ಪ್ರಯೋಜನವನ್ನು ದೊಡ್ಡ ಪ್ರಮಾಣದಲ್ಲಿ ಪಡೆಯಬೇಕೆಂಬುದು ನಮ್ಮ ಇಚ್ಛೆ. ಆದ್ದರಿಂದ ಈ ವರ್ಷ ಮತ್ತು ಕಳೆದ ವರ್ಷ ಮಹಿಳೆಯರಿಗೆ ಈ ಯೋಜನೆಯ ಕೆಳಗೆ ಎಷ್ಟರಮಟ್ಟಿಗೆ ಸಹಾಯ ಸಿಕ್ಕಿದೆ ಎಂಬ ಬಗ್ಗೆ ನನ್ನ ಬಳಿ ಈಗ ವಿವರಗಳು ಇಲ್ಲ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಇನ್ನು ಮುಂದೆ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವಂತೆ ನಾವು ಒಂದು ಸರ್ಕ್ಯುಲರ್‌ನ್ನು ಸಹ ಹೊರಡಿಸುತ್ತೇವೆ.

SMT. MUKTHARUNNISA.—You can quote figures but actually they have failed to get the benefits. You can fix up some percentage.

SRI J. H. PATEL.—The hon. Member Smt Muktharunnisa mentiond that women are more intelligent now. I would like to correct her. Sir, a woman has been more intelligent since the days of Adam & Eve and not now.

SMT. MUKTHARUNNISA.—I have personally told the Minister to fix up certain percentage in proportion to the population of 53% of Women in our State. You are introducing certain beautiful schemes Let our Women take the benefit. You cannot achieve the welfare and improve the status of Women by giving them Thali and Sarees. I would like that they should be treated on par with men. I would like the Hon. Minister to take a serious note of this.

ಶ್ರೀ ಆರ್. ವಿ. ದೇಶಪಾಂಡೆ —ನಿಮ್ಮ ಸಮಾಜದಲ್ಲಿ ತಾಳಿಭಾಗ್ಯ ಯೋಜನೆಗೆ ಅಷ್ಟು ಮಹತ್ವ ಕೊಡುವುದಿಲ್ಲ. ಆದರೆ ನಮ್ಮ ಸಮಾಜದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಏನು ಕಡುಬಡವರು ಇದ್ದಾರೆ, ಅವರ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಇದನ್ನು ತಾವು ಮೆಚ್ಚಬೇಕು. ಕೈಗಾರಿಕೆಗಳನ್ನು ಸ್ಥಾಪಿಸಲು ಮಹಿಳೆಯರಿಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ನೀವು ಏನು ಸಲಹೆ ಮಾಡಿದ್ದೀರಿ, ಅದನ್ನು ಪರಿಶೀಲನೆ ಮಾಡುತ್ತೇವೆ.

SRI S.R. LAKSHMAIAH.—Are you opposed Madam for giving Thalis ?

SMT. MUKTHARUNNISA.—Yes. Thali is not helpful to them. It does not improve their status. You must fix up certain percentage in respect of self-employment schemes, tiny industries, allotment of industrial sheds etc. There are so many lady I.A.S. Officers and they are managing everything.

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ಕೇಂದ್ರ ಸರ್ಕಾರದವರು ಪ್ಲಾಸ್ಟಿಕ್ ಮೇಲೆ ಕೆ.ಜಿ.ಗೆ ಹತ್ತು ರೂಪಾಯಿಗಳಷ್ಟು ತೆರಿಗೆ ಹೆಚ್ಚು ಮಾಡಿರುವುದರಿಂದ ನಮ್ಮ ರಾಜ್ಯದ ಅನೇಕ ಪ್ಲಾಸ್ಟಿಕ್ ಇಂಡಸ್ಟ್ರಿಗಳು ಮುಚ್ಚುವ ಸ್ಥಿತಿಯಲ್ಲಿವೆ. ಈಗಾಗಲೇ ಕೆಲವು ಮುಚ್ಚಿ ಹೋಗಿವೆ. ಇದರಿಂದ ಸುಮಾರು ೧೦–೧೫ ಸಾವಿರ ಬಡ ಜನರ ಜೀವನಕ್ಕೇ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಈ ಬಗ್ಗೆ ಒತ್ತಡ ತಂದು ಸಣ್ಣ ಸಣ್ಣ ಕೈಗಾರಿಕೆಯಲ್ಲಿ ಬರುವಂತಹ ಈ ಪ್ಲಾಸ್ಟಿಕ್ ಇಂಡಸ್ಟ್ರಿ ಬೆಳವಣಿಗೆಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಈಗಾಗಲೇ ಈ ಬಗ್ಗೆ ನನ್ನ ಜೊತೆ ಚರ್ಚೆ ಮಾಡಿದ್ದಾರೆ. ನಾನು ಆದಷ್ಟು ಬೇಗ ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮಾತನಾಡುತ್ತೇನೆ. ಈ ವಿಚಾರದಲ್ಲಿ ನಾನು ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಜೇನು ಸಾಕಣೆ ಬಗ್ಗೆ ಮತ್ತು ತೆಂಗಿನ ನಾರಿನ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದರು. ನಮ್ಮಲ್ಲಿ ಇಟ್ಟಿಗೆ ತಯಾರು ಮಾಡುವ ಉದ್ದಿಮೆದಾರರು ಇದ್ದಾರೆ. ಇಟ್ಟಿಗೆ ತಯಾರು ಮಾಡಲು ಬೇಕಾದ ಮಣ್ಣಿನ ಮೇಲೆ ತೆರಿಗೆ ಹಾಕಿರುವುದರಿಂದ ಈ ಉದ್ದಿಮೆದಾರರಿಗೆ ಬಹಳ ತೊಂದರೆ ಆಗಿದೆ. ಅದೇರೀತಿ ಹೆಂಚುಗಳನ್ನು ತಯಾರು ಮಾಡುವ ಉದ್ದಿಮೆದಾರರಿಗೂ ಸಹ ತೊಂದರೆಯಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಚಿನ ಉದ್ಯಮದಲ್ಲಿ ಬಹಳ ಜನರು ತೊಡಗಿದ್ದಾರೆ. ಈ ಹೆಂಚುಗಳು ಇಡೀ ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿವೆ. ಆದರೆ ಇವೊತ್ತು ಈ ತೆರಿಗೆ ಭಾರದಿಂದ ಈ ಖಾಸಗೀ ಉದ್ದಿಮೆದಾರರು ಬಹಳ ಕಷ್ಟದಲ್ಲಿದ್ದಾರೆ. ಈ ಹೆಂಚುಗಳ ವಿಚಾರದಲ್ಲಿ ನಮ್ಮ ರಾಜ್ಯದ ಹೆಸರು ಪರದೇಶಗಳಲ್ಲಿ ರಾರಾಜಿಸುತ್ತಿರುವಾಗ ಈ ರೀತಿ ತೆರಿಗೆ ಹೆಚ್ಚು ಮಾಡಿದ್ದು ಸರಿಯೇ ? ಸುಣ್ಣದ ಕಲ್ಲಿನ ಉದ್ಯಮದಲ್ಲಿ ಕೆಲಸ ಮಾಡುವ ಜನರು ನಮ್ಮಲ್ಲಿ ಜಾಸ್ತಿ ಇದ್ದಾರೆ. ಆದರೆ ತಾವು ಈ ಸಲ ಸುಣ್ಣದ ಮೇಲೂ ಸಹ ತೆರಿಗೆ ಜಾಸ್ತಿ ಮಾಡಿದ್ದೀರಿ. ಇದು ಸರಿಯಲ್ಲ. ಇವುಗಳ ಮೇಲೆ ಹಾಕಿರುವ ತೆರಿಗೆಯನ್ನು ತೆಗೆದು ಈ ಉದ್ದಿಮೆದಾರರಿಗೆ ಎಲ್ಲ ರೀತಿಯ ಸವಲತ್ತುಗಳನ್ನು ಒದಗಿಸಿಕೊಡಬೇಕು ಮತ್ತು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಅರ್ಧ ಗಂಟೆಯಲ್ಲಿ ಉತ್ತರ ಕೊಟ್ಟು ಮುಗಿಸಬೇಕೆಂದು ಹೇಳಿದ ಕಾರಣದಿಂದ ನಾನು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಲು ಸಾಧ್ಯವಾಗಲಿಲ್ಲ. ಸುಣ್ಣ ಮತ್ತು ಹೆಂಚಿನ ಉದ್ಯಮಗಳು ನಮ್ಮ ಜಿಲ್ಲೆಯಲ್ಲಿ ಸಹ ಇವೆ. ಈ ಬಗ್ಗೆ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ನೀಡಿದ್ದಾರೆ. ಈ ಬಗ್ಗೆ ನಾನು ಮುಖ್ಯ ಮಂತ್ರಿಗಳ ಜೊತೆ ಮಾತನಾಡುತ್ತೇನೆ. ಈಗ ಏನು ಸಲಹೆ ನೀಡಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ನಿನ್ನೆ ದಿವಸ ನಾನು ಒಂದು ವಿಷಯ ಪ್ರಸ್ತಾಪ ಮಾಡಲಿಲ್ಲ. ಆದರೆ ಹೋದ ಸಲ ನಾನು ಪ್ರಸ್ತಾಪ ಮಾಡಿದ್ದೆ. ಅದೇನೆಂದರೆ, ಮದನ್‌ಲಾಲ್ ವರ್ಮಾ ಎಂಬುವರು ಶಹಬಾದ್‌ನಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯನ್ನು ಸರ್ವೇ ನಂ. ೪೪೫ರಲ್ಲಿ ಸುಮಾರು ಮೂರು ಎಕರೆ ಜಮೀನಿನಲ್ಲಿ ೪–೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪ್ರಾರಂಭ ಮಾಡಿದ್ದಾರೆ. ಆದರೆ ಅವರು ಇನ್ನೂ ಕಾಂಪೆನ್‌ಸೇಷನ್ ತೆಗೆದುಕೊಂಡಿಲ್ಲ. ಈ ಬಗ್ಗೆ ಅಕ್ವಿಜಿಷನ್ ಪ್ರೊಸೀಡಿಂಗ್ ಎಲ್ಲ ಮುಗಿದಿದೆ. ಈಗ ಇವರ ಒಂದು ಬೇಡಿಕೆ ಕೆ.ಎಸ್.ಎಸ್.ಐ.ಡಿ.ಸಿ. ಮುಂದಿದೆ. ಆದ್ದರಿಂದ ತಾವು ಒಂದು ಸಲ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿ, ಅವರು ನಿಜವಾಗಿಯೂ ಉದ್ಯಮವನ್ನು ನಡೆಸುತ್ತಿದ್ದರೆ, ಅವರಿಗೆ ಎಲ್ಲ ರೀತಿಯ ಪ್ರೋತ್ಸಾಹವನ್ನು ಕೊಡುವುದರ ಮೂಲಕ, ಆ ಜಮೀನನ್ನು ಸಹ ಅವರಿಗೆ ಬಿಟ್ಟು ಕೊಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಈ ಬಗ್ಗೆ ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಈ ವಿಚಾರ ಈಗ ಕೆ.ಎಸ್.ಎಸ್.ಐ.ಡಿ.ಸಿ. ಮುಂದಿದೆ. ಈ ಬಗ್ಗೆ ಬೇಗ ಕ್ರಮತೆಗೆದುಕೊಳ್ಳಿ ಎಂದು ಈ ನಿಗಮದವರಿಗೆ ತಿಳಿಸಿದ್ದೇನೆ. ಈಗ ಮತ್ತೊಮ್ಮೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಚಂದ್ರಶೇಖರಯ್ಯ.—ಮಾನ್ಯ ಅಧ್ಯಕ್ಷರೇ, ನಾರಿನ ಉತ್ಪಾದನೆ ಬಗ್ಗೆ ಮತ್ತು ನಾರಿನ ಇಂಡಸ್ಟ್ರಿ ಬಗ್ಗೆ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಉದ್ಯಮದ ಬೆಳವಣಿಗೆಗೆ ಕಡೆ ಸರ್ಕಾರ

ಸಾಕಷ್ಟು ನಿಗಾ ಕೊಟ್ಟಿಲ್ಲದ ಕಾರಣದಿಂದ ನಮ್ಮ ಅರಸೀಕೆರೆಯಲ್ಲಿ ಇದರ ಖರೀದಿ ಬೆಲೆ ಟನ್ ಒಂದಕ್ಕೆ ೩ ಸಾವಿರದಿಂದ ಎರಡೂವರೆ ಸಾವಿರ ರೂಪಾಯಿಗಳಿಗೆ ಇಳಿದಿದೆ. ದಂಡ್ವದಲ್ಲಿ ಒಂದು ಫ್ಯಾಕ್ಟರಿ ಇದೆ. ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ತೆಂಗಿನ ನಾರಿನ ಉತ್ಪನ್ನಗಳು ತಯಾರಾಗುತ್ತಿದ್ದರೂ ಸಹ, ಅದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡದೆ ಕೇರಳದಿಂದ ತರಿಸುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಇದು ಸರಿಯಲ್ಲ. ಚೆನ್ನಪಟ್ಟಣ, ಅರಸೀಕೆರೆ ಮತ್ತು ತಿಪಟೂರಿನಲ್ಲಿ ಹೊಸ ಹೊಸ ಮಾದರಿಯಲ್ಲಿ ತೆಂಗಿನ ನಾರಿನಿಂದ ಬೈ-ಪ್ರಾಡಕ್ಟ್‌ಗಳು ತಯಾರಾಗುತ್ತಿದ್ದರೂ ಸಹ ಕೇರಳದಿಂದ ತರಿಸುವಂತಹ ಅಗತ್ಯ ಏನಿದೆ ? ಇಲ್ಲಿ ತಯಾರಾಗುವಂತಹ ವಸ್ತುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಈಗ ಕೈಮಗ್ಗದ ಬಟ್ಟೆಗಳ ಉತ್ಪಾದನೆಗೆ ಯಾವ ರೀತಿ ಹೆಚ್ಚಿನ ಪ್ರೋತ್ಸಾಹ ಕೊಡಲಾಗುತ್ತಿದೆಯೋ ಅದೇರೀತಿ ಇದಕ್ಕೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಇದರ ಜೊತೆಗೆ ಇಂಡಸ್ಟ್ರಿಗೆ ಅಗತ್ಯವಾದ ಪವರ್‌ನ್ನು ಒದಗಿಸಬೇಕು. ಈಗ ನಮ್ಮ ರಾಜ್ಯದಲ್ಲಿ ಇಂತಹ ೪೫ ಇಂಡಸ್ಟ್ರಿಗಳಿವೆ. ಈ ೪೫ ಇಂಡಸ್ಟ್ರಿಗಳಿಗೆ ಸರ್ಕಾರದವರು ಪ್ರೋತ್ಸಾಹ ಕೊಟ್ಟರೆ, ತೆಂಗನ್ನು ಬೆಳೆಯುತಕ್ಕಂಥ ಹತ್ತು ಲಕ್ಷ ರೈತ ಕುಟುಂಬದವರಿಗೆ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಈ ಕಾರಣದಿಂದ ಸರ್ಕಾರದವರು ಈ ಇಂಡಸ್ಟ್ರಿಗಳಿಗೆ ಹಣದ ನೆರವನ್ನು ಸಹ ಕೊಟ್ಟು ಎಲ್ಲ ರೀತಿಯಿಂದ ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಒಂದು ತೆಂಗಿನ ನಾರಿನ ಕೈಗಾರಿಕಾಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ತೆಂಗಿನ ನಾರಿನ ಆಧಾರಿತ ಉದ್ಯಮಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ಕಾರಣದಿಂದಲೇ ಇದನ್ನು ಸ್ಥಾಪಿಸಲಾಗಿದೆ. ಈ ಸಂಬಂಧದ ಉದ್ಯಮದಾರರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ರಾಜ್ಯದ ಕೆಲವು ಕಡೆಗಳಲ್ಲಿ ಪ್ರೊಕ್ಯೂರ್‌ಮೆಂಟ್ ಮತ್ತು ಡಿಸ್ಟ್ರಿಬ್ಯೂಷನ್ ಸೆಂಟರ್‌ಗಳನ್ನು ತೆರೆಯಬೇಕೆಂದು ಸಲಹೆ ಮಾಡಿದ್ದಾರೆ. ಇಂತಹ ಸೆಂಟರ್‌ಗಳನ್ನು ಚೆನ್ನಪಟ್ಟಣ ಮತ್ತು ಕಡೂರಿನಲ್ಲಿ ಬೇಗ ಪ್ರಾರಂಭ ಮಾಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಡಚ್ ಸ್ಕೀಮಿನಲ್ಲಿ ಈಗಾಗಲೇ ನಿರ್ಮಾಣ ಆಗಿರುವ ಷೆಡ್‌ಗಳಲ್ಲಿ ಕೇವಲ ೫೦ ಪರ್ಸೆಂಟ್ ಮಾತ್ರ ಅಲಾಟ್‌ಮೆಂಟಾಗಿದೆ, ಉಳಿದವು ಇನ್ನೂ ಆಗಿಲ್ಲ ಎಂದು ತಿಳಿದುಬಂದಿದೆ. ಇದರ ಬಗ್ಗೆ ಫೇಸ್ಡ್ ಮ್ಯಾನರ್‌ನಲ್ಲಿ ಅಲಾಟ್ ಮಾಡುತ್ತಾರೆಂದು ಕೇಳಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ಇನ್ನೊಂದು. ಸಣ್ಣ ಕೈಗಾರಿಕೆಗಳಿಗೆ ಸ್ಥಾಪನೆ ಮಾಡುವುದಕ್ಕೆ ಎಷ್ಟು ಗಮನ ಕೊಡುತ್ತಿದ್ದೀರೋ ಅಷ್ಟೇ ಗಮನವನ್ನು ರೋಗಗ್ರಸ್ತ ಕೈಗಾರಿಕೆಗಳಿಗೆ ಪುನರ್ಜೀವ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ಈಗ ಪುನರುಜ್ಜೀವನ ಮಾಡಬೇಕಾಗಿರುವುದು ೧,೨೦೦ ಕೈಗಾರಿಕೆಗಳಿವೆ. ಆದರೆ ನೀವು ಕ್ರಮ ಕೈಗೊಂಡಿರುವುದು ೭೦ ಕೈಗಾರಿಕೆಗಳ ಬಗ್ಗೆ ಮಾತ್ರ. ಆ ಒಂದು ದೃಷ್ಟಿಯಿಂದ ಸಮರ್ಪಕವಾಗಿ ಮಾಡಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ನಿಮ್ಮ ಅಭಿಪ್ರಾಯವನ್ನು ನಿಮ್ಮ ಉತ್ತರದಲ್ಲಿ ಹೇಳಬೇಕು.

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಕೈಗಾರಿಕೆಗಳ ಮಂತ್ರಿಗಳು).—ಷೆಡ್‌ಗಳ ಬಗ್ಗೆ ಹೇಳುವುದಾದರೆ ರಾಜ್ಯದ ಬೇರೆ ಬೇರೆ ಭಾಗದಲ್ಲಿ ನಾವು ಕಟ್ಟುತ್ತಿದ್ದೇವೆ. ಅದು ಸಿರಿಕಲ್ಚರ್ ಆಗಬಹುದು, ಕೈಮಗ್ಗದ್ದು ಆಗಬಹುದು, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಗಿರಬಹುದು ಕಾಬ್ಲರ್ಸ್ ಆಗಬಹುದು. ನಾವು ಸಣ್ಣ ಕೈಗಾರಿಕೆಗಳವರಿಗೆ ಲಿವಿಂಗ್-ಕಮ್-ವರ್ಕಿಂಗ್ ಷೆಡ್ ಎಂದು ಕಟ್ಟುತ್ತಿದ್ದೇವೆ. ಇದು ೧೮ ಕೋಟಿ ರೂ.ಗಳ ಯೋಜನೆ ಈಗಾಗಲೇ ೧೬ ಕೋಟಿ ಖರ್ಚು ಮಾಡಿದ್ದೇವೆ. ಇನ್ನುಳಿದ ಹಣವನ್ನು ಆದಷ್ಟು ಬೇಗ ರಿಲೀಸ್ ಮಾಡುತ್ತೇವೆ ಹಾಗೂ ಸೆಪ್ಟೆಂಬರ್ ವೇಳೆಗೆ ಮುಗಿಸುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆದರೆ ನೀವು ಕಂಪ್ಲೀಟ್ ಆಗಿರುವ ಬಗ್ಗೆ ಏನು ಹೇಳುತ್ತೀರಿ ಎಂದರೆ Sheds are allotted to the beneficiaries in a phased manner. That does not make any sense.

ಶ್ರೀ ಆರ್. ವಿ. ದೇಶಪಾಂಡೆ.—ಅದಕ್ಕೋಸ್ಕರ ಎರಡನೇ ಹಂತದ ಯೋಜನೆಯನ್ನು ಸಹ ತಯಾರು ಮಾಡುತ್ತಿದ್ದೇವೆ. ಇನ್ನು ಅನಾರೋಗ್ಯಪೀಡಿತ ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಪಾರ್ಲಿಮೆಂಟಿನಲ್ಲಿ ಇಂಡಸ್ಟ್ರೀಸ್ ಬಗ್ಗೆ ಒಂದು ಬಿಲ್ ಪಾಸು ಮಾಡಿದರು. ಆಗ ಬಹಳ ಒತ್ತಾಯ ಮಾಡಿದ್ದೆವು. ಅದರಲ್ಲಿ ಸಣ್ಣ ಕೈಗಾರಿಕೆಗಳನ್ನು ಇನ್‌ಕ್ಲೂಡ್ ಮಾಡಲಿಲ್ಲ. ಆದರೂ

ಇನ್ನೂ ಒತ್ತಾಯ ತರುತ್ತಿದ್ದೇವೆ. ರಾಜ್ಯ ಸರ್ಕಾರ ಕೂಡ ಸಿಕ್ ಇಂಡಸ್ಟ್ರೀಸ್ ಬಗ್ಗೆ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ೧೯೭೮ರಲ್ಲಿ ವಿ. ಐ. ಎಸ್. ಎಲ್. ನಲ್ಲಿ ಅನೇಕ ಹುದ್ದೆಗಳನ್ನು ಕ್ರಿಯೇಟ್ ಮಾಡಲಾಗಿದೆ. ಇವುಗಳಿಗೆ ಹಂಗಾಮಿಯಾಗಿ ನೇಮಕ ಮಾಡಿಕೊಳ್ಳಲಾಗಿದೆ. They created positions of Joint Directors, Deputy Directors, Functional Managers and Assistant Directors. ಈಗ ಅಸಿಸ್ಟೆಂಟ್ ಡೈರೆಕ್ಟರ್ಸ್, ಫೈನಾನ್ಸಿಯಲ್ ಡೈರೆಕ್ಟರ್ಸ್ ಮುಂತಾದ ಮುಖ್ಯ ಹುದ್ದೆಗಳವರು ಅಡೇಜಾಗದಲ್ಲಿ ಉಳಿಯಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಸಮಾಚಾರ ಗೊತ್ತಾಗಿದೆ. ಆದರೆ ಸರ್ಕಾರದ ಕಾನೂನಿನಲ್ಲಿ ಈ ರೀತಿ ಇದೆ.—

The officials of the Department of Industries and Commerce are to be recruited by K. P. S. C., only for the cadre of Assistant Director and below and not for the cadre of fudctional Managers, Deputy Directors as per the Cadre and Recruitment Rules of the Industries and Commerce.

ಇದು ಕ್ಲಿಯರಾದ ರೂಲ್. ಇದಕ್ಕೆ ವಿರುದ್ಧವಾಗಿ ಮೇಲಿನ ಜನಗಳನ್ನು ನೀವು ಆ ಸ್ಥಳದಲ್ಲಿ ಉಳಿಸುವುದಾದರೆ, ಇಲಾಖೆಯಲ್ಲಿ ಮೊದಲಿಂದ ಯಾರು ಸೇವೆ ಮಾಡಿದ್ದಾರೋ ಅವರಿಗೆ ಬಡ್ತಿ ಸಿಗುವುದಕ್ಕೆ ಅಡಚಣೆ ಆಗುತ್ತದೆ. ಇದರ ಬಗ್ಗೆ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ, ಹೇಳಲಿ.

ಶ್ರೀ ಆರ್. ವಿ ದೇಶಪಾಂಡೆ.—ಸ್ವಾಮಿ ಇದರ ಬಗ್ಗೆ ಯಾವುದೂ ಕ್ರಮ ತೆಗೆದುಕೊಂಡಿಲ್ಲ. ಕಾಯಿದೆಯಂತೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯನ ಮಠ್.—ಅಧ್ಯಕ್ಷರೇ, ನಾನು ವಿಶೇಷವಾಗಿ ಕೈಮಗ್ಗದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಪ್ರಯತ್ನಿಸಿದ್ದೇನೆಯೇ ಹೊರತು ಸರ್ಕಾರದ ಮೇಲೆ ಅಪಾದನೆ ಮಾಡಬೇಕೆಂಬ ಉದ್ದೇಶ ಇರಲಿಲ್ಲ. ಮಾನ್ಯ ದೇಶಪಾಂಡೆಯವರ ವಿಷಯದಲ್ಲಂತೂ ಇಲ್ಲವೇ ಇಲ್ಲ. ರಿಬೇಟ್ ವಿಷಯವಾಗಿ ಮಂತ್ರಿಗಳು ಹೇಳುವಾಗ ಈ ಸಹಕಾರ ಸಂಘಗಳು ಮತ್ತು ಕೆ.ಎಫ್.ಡಿ.ಸಿ. ಮಧ್ಯೆ ರಿಬೇಟ್ ಮಂಜೂರು ಮಾಡುವಾಗ ಪ್ರತ್ಯೇಕ ಧೋರಣೆ ತಾಳಿಲ್ಲವೆಂದಿದ್ದಾರೆ. ದಯವಿಟ್ಟು ಇದನ್ನು ಪರಿಶೀಲಿಸಿ. ಕೆ. ಎಫ್. ಡಿ. ಸಿ. ಗೆ ಎಷ್ಟು ದಿವಸದಲ್ಲಾಗಿದೆ, ಸಹಕಾರ ಸಂಘಗಳಿಗೆ ಎಷ್ಟು ದಿವಸದಲ್ಲಾಗಿದೆ ಎಂಬುದನ್ನೂ ನೋಡಿ. ತಾರತಮ್ಯ ಆಗಿರಬಹುದು. ಆಗಿರದೇಹೋದರೆ ಬಹಳ ಒಳ್ಳೆಯದು. ಜೊತೆಗೆ ವಿಕೇಂದ್ರೀಕರಣ ಮಾಡುವುದಾಗಿ, ಜನರಲ್ ಮೇನೆಜರ್ ಅವರಿಗೆ ಒಂದು ಜವಾಬ್ದಾರಿಯನ್ನು ಹೊರಿಸುವುದಾಗಿ ಹೇಳಿದರು. ಇದನ್ನು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ದೀರ್ಘವಾಗಿ ಆಲೋಚಿಸಿದರೆ ಒಳ್ಳೆಯದು. ಆದಷ್ಟು ಡೈರೆಕ್ಟಾಗಿ ಇದ್ದರೆ ಒಳ್ಳೆಯದೆಂದು ನನ್ನ ಭಾವನೆ. ಈಗ ಶಿಫಾರಸ್ಸಾಗಿ ಬರುವಂಥ ಹಂತದಲ್ಲಿ ಕೆಲವೊಂದು ಅನಾವಶ್ಯಕ ವಿಷಯಗಳು ನಡೆಯುವುದರಿಂದ ಇಷ್ಟೊಂದು ಅಧಿಕಾರ ಕೊಟ್ಟರೆ ಸಂಘ ಸಂಸ್ಥೆಗಳನ್ನು ಪೇಚಿನಲ್ಲಿ ಸಿಕ್ಕಿಸುವ ಸಂದರ್ಭ ಬರುತ್ತದೆ. ಈ ಮೊದಲಿದ್ದ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ತರಬೇತಿ ಕೇಂದ್ರಗಳನ್ನು ವ್ಯವಸ್ಥೆ ಮಾಡಿರುವುದಾಗಿ ಹೇಳಿದ್ದಾರೆ. ಅದಕ್ಕಾಗಿ ಕೃತಜ್ಞತೆಗಳು. ಆ ರೀತಿ ವ್ಯವಸ್ಥೆ ಮಾಡಿರುವುದು ಕಾರ್ಯರೂಪಕ್ಕೆ ಬಂದರೆ ಒಳ್ಳೆಯದು. ತಮ್ಮ ಮೂಲಕ ತಿಳಿಸುವುದಾದರೆ ಒಂದು ವೇಳೆ ನಿಮಗೆ ಸರಿಯಾದಂಥ ಪ್ರಕ್ಕಟೆ ಸೈಟ್ ಸಿಗದೇಹೋದರೆ ಎಷ್ಟು ಎಕರೆ ನಿಮಗೆ ಬೇಕಾಗಿದೆಯೋ ಅಷ್ಟನ್ನು ಕೊಡಲು ಸಿದ್ಧವಾಗಿದ್ದೇವೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಇನ್ನು ನೇಕಾರರ ಲಿವಿಂಗ್ ಕಮ್ ವರ್ಕಿಂಗ್ ಶೆಡ್ ಅನ್ನು ಕಟ್ಟಲು ೨೦ ಸಾವಿರ ಯೋಜನೆಯ ಅಡಿಯಲ್ಲಿ ೩ ಸಾವಿರ ಇರುವುದನ್ನು ೫ ಸಾವಿರಕ್ಕೆ ಏರಿಸಿ ಎಂದು ಕೇಳಿದ್ದೆ. ಅದನ್ನು ಅವರು ಪ್ರಸ್ತಾಪಿಸಿಲ್ಲ.

ಇನ್ನು ನಮ್ಮ ಇಲಾಖೆಯ ಅಡಿಷನಲ್ ಡೈರೆಕ್ಟರ್ಸ್ ಅಧಿಕಾರವನ್ನು ಮೊಟಕುಗೊಳಿಸುವ ಬಗ್ಗೆ ಹೇಳುವಾಗ ಅಡಿಷನಲ್ ಡೈರೆಕ್ಟರ್ ಬಗ್ಗೆ ಹೇಳಿದೆನೇ ಹೊರತು ಅವರು ಒಳ್ಳೆಯವರೆಂದೋ ಕೆಟ್ಟವರೆಂದೋ ನಾನು ಹೇಳಿಲ್ಲ, ಅದು ಗೊತ್ತೂ ಇಲ್ಲ, ತಮಗೆ ಗೊತ್ತಿರಬೇಕು.

ಇನ್ನು ಜನತಾ ಸೀರೆ ವಿಚಾರದಲ್ಲಿ ನನ್ನ ಅಪಾದನೆ, ಟೀಕೆ ಏನೂ ಇಲ್ಲ. ಆದರೆ ಅದರ ಗುಣ ಮಟ್ಟ ಏನೇ ಇರಲಿ ಸ್ವಲ್ಪ ದಪ್ಪವಾಗಿದ್ದರೆ ಒಳ್ಳೆಯದೆಂದು ಹೇಳುತ್ತಾ ರೀಬೇಟನ್ನು ಮಾರ್ಚಿ ೩೦ ರೊಳಗೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರಿಂದ ಮಂತ್ರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಖಾದಿ ಬೋರ್ಡ್ ವಿಚಾರದಲ್ಲೂ ಕೂಡ ರೀಬೇಟ್ ಕೊಡುತ್ತೇವೆಂದು ಹೇಳಿದ್ದು ೧ ರೂ.ಗೆ ೪೦ ಪೈಸೆ ರಿಬೇಟ್ ಕೊಟ್ಟಿದ್ದು ಮೆಚ್ಚತಕ್ಕಂಥ ವಿಚಾರ. ಇದರಿಂದ ಖಾದಿ ಆಕರ್ಷಕವಾಗಿ ಕಾಣುತ್ತದೆ. ರಿಬೇಟನ್ನು ಅನೌನ್ಸ್‌ಮೆಂಟ್‌ನ್ನು ಪೇಪರಲ್ಲಿ ಕೊಟ್ಟುಬಿಟ್ಟರೆ ಒಳ್ಳೆಯದು ಒಂದು ಕೋಟಿ ರೂ. ವ್ಯವಹಾರ ಆಗಬಹುದು. ಇದನ್ನು ಕೂಡಲೇ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳಲ್ಲಿ ರಿಬೇಟ್ ಕೊಡುವ ವಿಷಯದಲ್ಲಿ ಮಲತಾಯಿ ಧೋರಣೆ ಇಲ್ಲ ಎಂದು ನಾನು ಹೇಳಿದ್ದೇನೆ. ಎರಡನೆಯದು, ತಾವು ರಿಬೇಟ್ ಸಿಗುವುದರಲ್ಲಿ ಸಾಕಷ್ಟು ತೊಂದರೆಯಾಗಿದೆ ಎಂದು ಹೇಳಿದಿರಿ. ವಿಕೇಂದ್ರೀಕರಣವಾಗಬೇಕು ಎಂಬುದು ಸರ್ಕಾರದ ಉದ್ದೇಶ ಇವತ್ತು ಅಧಿಕಾರವನ್ನು ನಾವು ಜನರಲ್ ಮ್ಯಾನೇಜರ್‌ಗೆ ಕೊಟ್ಟರೆ ಬಟವಾಡೆ ಆಗುತ್ತದೆಂಬುದು ಉದ್ದೇಶ ಇಟ್ಟುಕೊಂಡಿದ್ದೇವೆ.

ಅದು ಏನೇ ಇರಲಿ, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ನೇಕಾರರ ಹಿತದೃಷ್ಟಿ ಯಿಂದ ಯಾವುದು ಯೋಗ್ಯ ಎಂಬುದನ್ನು ನಿರ್ಧರಿಸಿ ಅದರ ಬಗ್ಗೆ ಸರಕಾರವು ನಿರ್ಣಯವನ್ನು ತೆಗೆದು ಕೊಳ್ಳುತ್ತದೆ. ಇನ್ನು ಖಾದಿ ಬಗ್ಗೆ ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಸ್ವಲ್ಪ ಹಣವನ್ನು ರಿಲೀಸ್ ಮಾಡಿದ್ದೇವೆ. ಮತ್ತು ಕೆಲವು ರಿಲೀಸ್ ಮಾಡಬೇಕಾಗಿದೆ. ಆದಷ್ಟು ಜಾಗ್ರತೆ ಅದನ್ನು ಮಾಡುತ್ತೇವೆ. ಆದರೆ ಈ ಇಲಾಖೆಯ ಬಗ್ಗೆ ತಮಗೂ ಗೊತ್ತು. ಈಗಾಗಲೇ ನಾವು ೪೦ ಪರ್ಸೆಂಟ್ ರಿಬೇಟ್ ಕೊಡುತ್ತಾ ಇದ್ದೇವೆ. ಬೇರೆ ೬೦ ದಿವಸ ಹೊರತಾಗಿ ೨೦ ಪರ್ಸೆಂಟ್ ಬಿಟ್ಟು ಕೊಡುತ್ತಾ ಇದ್ದೇವೆ. ಖಾದಿಯಿಂದ ಜನರಿಗೆ ಸಹಾಯ ಆಗಬೇಕು ಎಂಬುದು ಸರಕಾರದ ಉದ್ದೇಶ ವಾಗಿದೆ. ಆದರೆ ಏನು ಕ್ಲಿಯರೆನ್ಸ್ ಇದೆ ಅದು ಸರ್ಟಿಫೈ ಆದನಂತರ ನಾವು ಆದಷ್ಟು ಜಾಗ್ರತೆ ಆದನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಸ್ವಯಂ ಉದ್ಯೋಗ ಯೋಜನೆಯ ಪ್ರಕಾರ ಸಣ್ಣ ಕೈಗಾರಿಕೆ ಗಳನ್ನು ಸ್ಥಾಪನೆ ಮಾಡುವುದಕ್ಕೆ ೨೫ ಸಾವಿರ ರೂ. ಗಳ ಸಾಲವನ್ನು ಕೊಡುತ್ತಾ ಇದ್ದೀರಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಅವರು ಯಾರು ಇರುತ್ತಾರೆ ಅವರು ಈ ಆಯ್ಕೆ ಗಳನ್ನು ಮಾಡುತ್ತಾರೆ. ನಮಗೆ ಬಂದಿರತಕ್ಕಂತಹ ವರದಿಗಳ ಪ್ರಕಾರ ಯಾರು ೨೫ ಸಾವಿರ ರೂ. ಗಳನ್ನು ಡಿಪಾರ್ಟ್‌ಮೆಂಟಿನ ಮೂಲಕ ಕೊಡುತ್ತಾ ಇದ್ದಾರೆ ಈ ದುಡ್ಡು ಸಾಮಾನ್ಯವಾಗಿ ವಾಪಸ್ಸು ಬರುತ್ತಿಲ್ಲ. ಅದಕ್ಕೆ ೬ ಸಾವಿರ ರೂಗಳ ಸಬ್ಸಿಡಿ ಇದೆ. ಅದರಲ್ಲಿ ೨ – ೩ ಸಾವಿರ ರೂ.ಗಳ ಲಂಚವನ್ನು ತೆಗೆದುಕೊಂಡು ಆಯ್ಕೆಗಳು ಆಗುತ್ತಿವೆ ಎಂದು ಕೇಳಿಬರುತ್ತಿದೆ. ಇದಕ್ಕೆ ಒಂದು ಶಾಸನ ಬದ್ಧವಾದ ಖಾಸಗೀ ಸಮಿತಿಯನ್ನು ತಾವುಗಳು ಏಕೆ ಮಾಡಬಾರದು ? ಸಬ್ಸಿಡಿ ೬ ಸಾವಿರ ರೂ.ಗಳು ಸಿಗುತ್ತವೆ. ೨೫ ಸಾವಿರ ರೂಪಾಯಿಗಳ ಹಣ ದೊರೆಯುತ್ತದೆ, ಹಾಗೂ ಮಂಜೂರು ಆದ ಹಣದ ಮರುಪಾವತಿಯ ಬಗ್ಗೆಯೂ ಕೂಡ ಅಷ್ಟು ಕಟ್ಟುನಿಟ್ಟಾದ ಕ್ರಮ ಇಲ್ಲ. ಈ ಪದ್ಧತಿ ಅಷ್ಟು ಪರಿಣಾಮಕಾರಿಯಾಗಿ ಇಲ್ಲ ಎಂದು ನನಗನ್ನಿಸುತ್ತದೆ. ಜನರ ಹಣವನ್ನು ಕೆಲವೇ ಜನರು ನುಂಗಿ ಹಾಕಬಾರದು ಹಾಗೂ ಈ ಹಣ ಪೋಲು ಆಗಬಾರದು. ಇದರ ಬಗ್ಗೆ ಖಾಸಗಿ ಸಮಿತಿಯೊಂದನ್ನು ಏಕೆ ನೇಮಕಮಾಡಬಾರದು ?

ಶ್ರೀ ಆರ್. ವಿ. ದೇಶಪಾಂಡೆ ಅಧ್ಯಕ್ಷರೆ, ಖಾಸಗಿ ಸಮಿತಿಯೊಂದನ್ನು ಮಾಡಿದರೆ ಭ್ರಷ್ಟಾಚಾರ ದೂರವಾಗುತ್ತದೆ ಎಂದು ನಾನು ಒಪ್ಪಿಕೊಳ್ಳಲಿಕ್ಕೆ ತಯಾರಾಗಿಲ್ಲ. ಇದರಲ್ಲಿ ಒಂದು ಕಮಿಟ್‌ಮೆಂಟ್ ಇರಬೇಕಾಗುತ್ತದೆ. ಆದುದರಿಂದ ಕೆಲವು ಒಳ್ಳೆಯ ಅಧಿಕಾರಿಗಳು ಇದ್ದಾರೆ. ಕೆಲವರು ಕೆಟ್ಟವರು ಇ... ಒಂದುವೇಳೆ ಇಂತಹ ಆಯ್ಕೆಯಲ್ಲಿ ನೇರವಾಗಿ ಇಂತಹವರು ಹಣ ತೆಗೆದುಕೊಂಡಿದ್ದಾರೆ

ಎಂದು ಹೇಳಿದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬಹುದು. ಇದಕ್ಕಾಗಿ ಖಾಸಗಿ ಸಮಿತಿಯ ಅವಶ್ಯಕತೆಯು ಇಲ್ಲ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಹಾಗಾದರೆ ನೇಮಕ ಮಾಡಿದ ಸಮಿತಿಗಳಲ್ಲಿ ಲಂಚ ಇರುತ್ತದೆ ಎನ್ನುವುದು ತಮ್ಮ ಅಭಿಪ್ರಾಯ. ಸಮಿತಿಯನ್ನು ನೇಮಿಸದಿದ್ದರೆ ಅಧಿಕಾರಿಗಳಿಗೆ ಲಂಚ ಹೊಡೆಯಲು ಪ್ರೋತ್ಸಾಹ ಮಾಡಿದ ಹಾಗೆ ಆಗುತ್ತದೆ. ಸಮಿತಿಯಲ್ಲಿ ಲೋಕಲ್‌ನವರನ್ನು ಹಾಕಿದರೆ ಸ್ವಲ್ಪ ಹೆದರಿಕೆ ಇರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ.—ಇದಕ್ಕೆ ಈಗಾಗಲೇ ಒಂದು ಸಮಿತಿ ಇದೆ. ಅದಕ್ಕೆ ಜನರಲ್ ಮ್ಯಾನೇಜರ್ ಡಿ ಐ ಸಿ ಯವರು ಅಧ್ಯಕ್ಷರು. ಲೀಡ್ ಬ್ಯಾಂಕ್‌ನ ಮ್ಯಾನೇಜರ್‌ರವರು ಅದಕ್ಕೆ ಸದಸ್ಯರು ಇರುತ್ತಾರೆ. ಜವಾಬ್ದಾರಿಯುತವಾದಂತಹ ಜನರು ಇರುತ್ತಾರೆ. ಅಲ್ಲಿ ನಡೆಯುತ್ತಿರುವ ಕಾರ್ಯದ ಬಗ್ಗೆ ದೂರುಗಳು ಇವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯಾರೂ ಸ್ಪಷ್ಟವಾಗಿ ಇಂತಹವರು ತೆಗೆದುಕೊಂಡಿದ್ದಾರೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಸುಮ್ಮನೆ ಭ್ರಷ್ಟಾಚಾರ ಇದೆ ಎಂದು ಹೇಳುತ್ತಾರೆ. ಯಾರ ಮೇಲಾದರೂ ಕ್ರಮ ತೆಗೆದುಕೊಳ್ಳ ಬೇಕಾದರೆ ಸಾಕ್ಷಿಪುರಾವೆಗಳು ಬೇಕು. ಈ ಸಂದರ್ಭದಲ್ಲಿ ನಾನು ತಮಗೆ ಭರವಸೆ ಕೊಡುವುದೇನೆಂದರೆ, ನಿರ್ದಿಷ್ಟವಾದ ದೂರುಗಳು ಬಂದರೆ ಅಂತಹವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ನಾವು ಹಿಂಜರಿಯುವುದಿಲ್ಲ.

ಶ್ರೀ ಎಸ್. ಪ್ರಭಾಕರ ರಾಣೆ.—ಕರ್ನಾಟಕ ಸರಕಾರದವರು ಕಳೆದವರ್ಷ ಇಲೆಕ್ಟ್ರಾನಿಕ್ ಉದ್ಯಮದಲ್ಲಿ ತರಬೇತಿ ಪಡೆಯಲು ಸಿರ್ಸಿಯಲ್ಲಿ ಒಂದು ಕೇಂದ್ರವನ್ನು ಪ್ರಾರಂಭಿಸಿದರು. ಅದರ ಬಗ್ಗೆ ಸರಕಾರದವರನ್ನು ಅಭಿನಂದಿಸುತ್ತೇನೆ. ಆದರೆ ಸಿರ್ಸಿಯಲ್ಲಿ ಪ್ರಾರಂಭಿಸುವ ಮೊದಲು ಸುಮಾರು ಒಂದು ವರ್ಷದ ಪೂರ್ವದಲ್ಲಿ ಅಂಕೋಲದಲ್ಲಿ ಇಂತಹ ಒಂದು ಕೇಂದ್ರವನ್ನು ಪ್ರಾರಂಭಿಸುವುದಾಗಿ ಸರಕಾರಿ ಆಜ್ಞೆಯನ್ನು ಹೊರಡಿಸಲಾಗಿತ್ತು. ಅಷ್ಟೇ ಅಲ್ಲ. ಕಾರವಾರ ಮತ್ತು ಅಂಕೋಲ ತಾಲ್ಲೂಕಿನ ಅನೇಕ ನಿರುದ್ಯೋಗಿ ಯುವಕರಿಂದ ಅರ್ಜಿಗಳನ್ನು ಸಹ ಆಹ್ವಾನಿಸಲಾಗಿತ್ತು. ಅರ್ಜಿಗಳನ್ನು ಅನೇಕ ಜನರು ಸಲ್ಲಿಸಿದರು. ಆದರೆ ಹಠಾತ್ತಾಗಿ ಅಂಕೋಲದಲ್ಲಿ ಪ್ರಾರಂಭ ಮಾಡತಕ್ಕಂತಹ ಈ ಸಂಸ್ಥೆಯನ್ನು ಸಿರ್ಸಿಯಲ್ಲಿ ಏಕೆ ಪ್ರಾರಂಭ ಮಾಡಿದರು ? ಅಲ್ಲಿ ಮಾಡಬಾರದು ಎಂದೇನು ಅಲ್ಲ. ಆದರೆ ಅಂಕೋಲದಲ್ಲಿಯೂ ಇದೇ ರೀತಿಯ ಕೇಂದ್ರವನ್ನು ಪ್ರಾರಂಭಿಸುವ ಯೋಜನೆಯನ್ನು ಸರಕಾರದವರು ಹಾಕಿಕೊಂಡಿದ್ದಾರೆಯೇ ? ಅದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಸದಸ್ಯರ ಸೂಚನೆಯು ಉತ್ತಮವಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಕ್ರಮತೆಗೆದುಕೊಳ್ಳುವಲ್ಲಿ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು.—ಈಗ ಚರ್ಚೆಯಲ್ಲಿ ಭಾಗವಹಿಸಲು ೧೨–೧೫ ಜನರ ಲಿಮಿಟಿನ ಪ್ರಕಾರ ಈಗ ಆಗಿದೆ. ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಕ್ಲಾರಿಫಿಕೇಶನ್‌ಗೂ ಒಂದು ಲಿಮಿಟ್ ಬೇಡವೇ ?

ಶ್ರೀ ಬಿ ಎಸ್.. ಯಡಿಯೂರಪ್ಪ.— ಈ ಸ್ವಯಂ ಉದ್ಯೋಗ ಯೋಜನೆಯಲ್ಲಿ ಈ ವರ್ಷ ೧೯೮೫–೮೬ರಲ್ಲಿ ೧೨,೪೦೦ ಜನರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಸುಮಾರು ೫೭ ಸಾವಿರ ಅರ್ಜಿಗಳು ಬಂದಿವೆ ಎಂದು ಹೇಳಿದ್ದೀರಿ. ಕಳೆದ ಮೂರು ವರ್ಷಗಳಲ್ಲಿ ಇದೇ ೧೨,೦೦೦-ಜನರಿಗೆ ಕೊಡುತ್ತೀರಾ ? ಆದುದರಿಂದ ಇದರ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಹಾಗೆಯೇ ಈ ೨೫,೦೦೦–ಸಾವಿರ ರೂಪಾಯಿಗಳು ಎನ್ನುವುದು ಕೇವಲ ಪುಸ್ತಕದಲ್ಲಿ ಮಾತ್ರ ಇದೆ. ಅದರ ಅಂಕಿ ಸಂಖ್ಯೆಯನ್ನು ಕೊಡಬಹುದೇ ಎಂದು ನಾನು ಕೇಳಿದೆ ನಿಜವಾಗಿಯೂ ಅಲ್ಲಿರುವಂತಹವರಿಗೆ ೨೫,೦೦೦ ರೂಪಾಯಿಗಳನ್ನು ಕೊಡುತ್ತಾ ಇಲ್ಲ. ೨-೩ ಸಾವಿರ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ. ಇದರಿಂದಾಗಿ ಅಂತಹವರು ಪೂರ್ಣ ವೃತ್ತಿಯಲ್ಲಿ ನಿಲ್ಲುವ ಹಾಗೂ ಇಲ್ಲ ಬಿಡುವ ಹಾಗೂ ಇಲ್ಲ. ಈ ೨೫ ಸಾವಿರ ರೂಪಾಯಿಗಳು ಎಷ್ಟು ಜನರಿಗೆ ಸಿಕ್ಕಿರ ಬಹುದು ? ಹೋದ ವರ್ಷದ ಅಂಕಿ–ಸಂಖ್ಯೆಯನ್ನು ಕೊಡುತ್ತೀರಾ ? ಮತ್ತು ಈ ಸಂಖ್ಯೆಯನ್ನೂ ಕೂಡ ಜಾಸ್ತಿ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತೇನೆ, ೫೭ ಸಾವಿರ ಅರ್ಜಿಗಳು ಇದ್ದಾಗ ಕೇವಲ ೧೨,೪೦೦ ಜನರಿಗೆ ಮಾತ್ರ ಸಹಾಯ ಮಾಡಲಾಗಿದೆ. ಇದು ನಮಗೂ ಕೂಡ ಒಂದು ದೊಡ್ಡ ಸಮಸ್ಯೆಯಾಗಿದೆ. ಹೆಚ್ಚಿನ ಯುವಕರಿಗೆ ಸಹಾಯ ಮಾಡಬೇಕೆಂದು ಈ ದಿಶೆಯಲ್ಲಿ ನಾವು ಈಗಾಗಲೇ ಕೇಂದ್ರ ಸರಕಾರದವರಿಗೆ ಪತ್ರವನ್ನು ಬರೆದಿದ್ದೇವೆ. ನಾನು ಸ್ವತಃ ಕೇಂದ್ರ ಸಚಿವರು ಇಲ್ಲಿಗೆ ಬಂದಾಗ ಈ ಯೋಜನೆಯಲ್ಲಿ ೧೨,೪೦೦ ಎಂದು ಟಾರ್ಗೆಟ್ ಫಿಕ್ಸ್ ಮಾಡಿದರೆ ನಮಗೆ ಕಷ್ಟವಾಗುತ್ತದೆ, ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಜನ ನಿರುದ್ಯೋಗಿಗಳು ಇದ್ದಾರೆ ಅದಕ್ಕಾಗಿ ಇನ್ನೂ ಹೆಚ್ಚಿಗೆ ಟಾರ್ಗೆಟ್ ಫಿಕ್ಸ್ ಮಾಡಬೇಕೆಂದು ಲಿಖಿತ ಮೂಲಕವಾಗಿ ಕೇಳಿಕೊಂಡಿದ್ದೇನೆ. ಇನ್ನು ೨೫ ಸಾವಿರ ರೂಪಾಯಿಗಳನ್ನು ಕೊಡುವ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆ. ಪ್ರತಿಯೊಬ್ಬರಿಗೂ ೨೫ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಇಲ್ಲ. ಒಬ್ಬ ಕಿರಾಣಿ ಅಂಗಡಿ ಹಾಕುವವನಿರುತ್ತಾನೆ. ಬೀಡಿ ಅಂಗಡಿ ಹಾಕುವವನು ಇರುತ್ತಾನೆ, ಸೈಕಲ್ ಅಂಗಡಿ ಹಾಕುವವನು ಇರುತ್ತಾನೆ. ಆದುದರಿಂದ ಎಲ್ಲರಿಗೂ ೨೫ ಸಾವಿರ ರೂಪಾಯಿಗಳು ಬೇಕಾಗುವುದಿಲ್ಲ. ಗರಿಷ್ಠ ಸಾಲದ ಲಭ್ಯತೆ ೨೫ ಸಾವಿರ ರೂಪಾಯಿಗಳು. ಆದ್ದರಿಂದ ಎಲ್ಲರಿಗೂ ೨೫ ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವುಗಳು ಹೇಳಿದ ಹಾಗೆ ಅವರ ಪ್ರಾಜೆಕ್ಟ್ ನೋಡಿಕೊಂಡು ಯಾವ ಯಾವ ಉದ್ಯೋಗಕ್ಕೆ ಎಷ್ಟು ಬೇಕಾಗುತ್ತದೆ ಎಂದು ಅರಿತುಕೊಂಡು ಅವಶ್ಯಕತೆ ಇದ್ದಷ್ಟು ಕೊಡಿ. ಆದರೆ ೨೫ ಸಾವಿರ ರೂಪಾಯಿಗಳ ಅವಶ್ಯಕತೆ ಇರುವವರಿಗೆ ೨-೩ ಸಾವಿರ ರೂಪಾಯಿಗಳನ್ನು ಕೊಟ್ಟರೆ ಹೇಗೆ ? ಕಿರಾಣಿ ಅಂಗಡಿಯು ಒಂದು ಸಾವಿರಕ್ಕೂ ಆಗುತ್ತದೆ, ೨೫ ಸಾವಿರ ರೂಪಾಯಿಗಳಿಗೂ ಆಗುತ್ತದೆ, ಆದರೆ ನಾನು ಒಂದು ಸ್ವಂತವಾಗಿ ಒಳ್ಳೆಯ ಅಂಗಡಿ ಇಡುತ್ತೇನೆ. ಅದಕ್ಕೆ ೨೫ ಸಾವಿರ ರೂಪಾಯಿಗಳು ಬೇಕಾಗುವಾಗ ನೀವು ಐದು ಸಾವಿರ ಕೊಟ್ಟರೆ ಹೇಗೆ ? ನಾನು ಸುಮ್ಮನೆ ಆರೋಪ ಮಾಡುವುದಕ್ಕೆ ಇದನ್ನು ಹೇಳುತ್ತಾ ಇಲ್ಲ. ಅಗತ್ಯಕ್ಕಿಂತ ಕಡಿಮೆ ಹಣವನ್ನು ನೀವು ಅವರಿಗೆ ಕೊಟ್ಟರೆ, ಅವರು ಅರ್ಧದಲ್ಲಿ ನಿಲ್ಲಿಸುತ್ತಾರೆ. ಇದರಿಂದಾಗಿ ಹಣದ ಪ್ರಯೋಜನ ಮತ್ತು ಉದ್ದೇಶದ ಸಾಫಲ್ಯವೂ ಆಗುವುದಿಲ್ಲ. ಈ ಬಗ್ಗೆ ತಾವುಗಳು ದಯವಿಟ್ಟು ಪರಿಶೀಲಿಸ ಬೇಕು.

ಶ್ರೀ ಕೆ. ಮಲ್ಲಪ್ಪ.—ಅಧ್ಯಕ್ಷರೇ, ಈ ರಾಜ್ಯದಲ್ಲಿ ಕಂಬಳಿ ನೇಕಾರರ ಉದ್ಯಮವು ಬೃಹತ್ ಪ್ರಮಾಣದಲ್ಲಿ ಇದೆ. ಅವರ ಬಗ್ಗೆ ಸಚಿವರು ಪ್ರಸ್ತಾಪ ಮಾಡಿಲ್ಲ. ಅವರ ಜೀವನ ಪರಿಸ್ಥಿತಿಯೂ ಶೋಚನೀಯವಾಗಿದೆ. ಅವರಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಬೇಕು. ತಾವುಗಳು ಕೈ ಮಗ್ಗದವರಿಗೆ ಮತ್ತು ಖಾದಿಯವರಿಗೆ ಪ್ರೋತ್ಸಾಹ ನೀಡುವ ಪ್ರಕಾರ, ಅಂದರೆ ಅವರುಗಳಿಗೆ ಯಾವ ರೀತಿಯಲ್ಲಿ ರಿಬೇಟ್ ಕೊಡುತ್ತಿದ್ದೀರಿ, ಅದೇ ರೀತಿ ಕಂಬಳಿ ಉದ್ಯಮಕ್ಕೂ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳಿದ ವಿಚಾರಗಳನ್ನು ನಿನ್ನೆ ಪ್ರಸ್ತಾಪ ಮಾಡಿದ್ದರೆ ಚೆನ್ನಾಗಿತ್ತು. ಅವರು ನಿನ್ನೆ ಪ್ರಸ್ತಾಪ ಮಾಡಿಲ್ಲ. ಅಂತೂ ಅವರು ಹೇಳಿದ ವಿಚಾರಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ. ನಮ್ಮ ಇಲಾಖೆಯ ಬೇಡಿಕೆಗಳ ಮೇಲೆ ಸಾಕಷ್ಟು ಚರ್ಚೆಯಾಗಿ ನನ್ನ ಸಹೋದ್ಯೋಗಿಗಳು ರೇಷ್ಮೆ ಇಲಾಖೆ, ಸಣ್ಣ ಕೈಗಾರಿಕೆಗಳ ಇಲಾಖೆ ಬಗ್ಗೆ ಅವರ ಉತ್ತರವನ್ನು ಕೊಟ್ಟು ವಿವರಣೆ ಕೊಟ್ಟಿದ್ದಾರೆ. ಈಗ ದೊಡ್ಡ ಅಥವಾ ಭಾರಿ ಹಾಗೂ ಮತ್ತು ಮಧ್ಯಮ ಕೈಗಾರಿಕೆಗಳ ಬೇಡಿಕೆ ಬಗ್ಗೆ ನಾನು ಮಾತನಾಡುವುದಕ್ಕೆ ಮುಂಚೆ ಹಾಗೂ ಮಾನ್ಯ ಸದಸ್ಯರುಗಳು ಹೇಳಿದಂತಹ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಮುಂಚೆ ಕೆಲವು ಸಾಮಾನ್ಯವಾಗಿ ಎಲ್ಲರ ಭಾಷಣದಲ್ಲಿ ಬಂದಿರತಕ್ಕಂತಹ ಸಾಮಾನ್ಯ ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಒಂದನೇಯದಾಗಿ, ಮಾನ್ಯ ಶ್ರೀನಿವಾಸ್‌ರವರು ತಮ್ಮ ಪ್ರಾರಂಭ ಭಾಷಣದಲ್ಲಿ ಹೇಳಿದರು, ನಿಮ್ಮ ಯೋಜನೆ ನೀತಿ ಏನು ಇದೆ ಅದು ಸ್ಪಷ್ಟವಾಗಿ ಇಲ್ಲ, ನೀವು ಹೇಳಿರತಕ್ಕಂತಹ ಔದ್ಯೋಗಿಕ ಬೆಳವಣಿಗೆಯ ಪತ್ರ ಕೊಡುವುದಕ್ಕೆ ನೀವು ಯೋಜನೆಯಲ್ಲಿ ಹಾಕಿಕೊಂಡಿರತಕ್ಕಂತಹ, ಒದಗಿಸಿರತಕ್ಕಂತಹ ಹಣದ ಮೊತ್ತಕ್ಕೂ ವ್ಯತ್ಯಾಸ ಇದೆ ಎಂದಿದ್ದಾರೆ. ನಾನು ಮಾನ್ಯ ಶ್ರೀನಿವಾಸ್‌ರವರಿಗೆ ಮತ್ತು ಮಾನ್ಯ ಸದಸ್ಯರಿಗೆ ಹೇಳುವುದು ಇಷ್ಟೆ

ನಮ್ಮ ಔದ್ಯೋಗಿಕ ನೀತಿಯಲ್ಲಿ ಒಂದು ಬದಲಾವಣೆ ಇದೆ. ೧೯೮೫ರ, ಜುಲೈ ತಿಂಗಳಲ್ಲಿ ನಾವು ಒಂದು ಪ್ರಕಟಣೆ ಮಾಡಿದ್ದೇವೆ. ಆ ನೀತಿಯ ಪ್ರಕಾರ ನಾವು ಬುದ್ಧಿಪೂರ್ವಕವಾಗಿ ಈ ಭಾರಿ ಮತ್ತು ದೊಡ್ಡ ಕಾರ್ಖಾನೆಗಳಿಗೆ ಸರಕಾರದ ಯೋಜನೆಯ ಹಣವನ್ನು ಅದಕ್ಕೆ ಹಾಕಬಾರದು ಎಂದು ತೀರ್ಮಾನಿಸಿದ್ದೇವೆ ನಮ್ಮ ಹೆಚ್ಚಿನ ಒಲವು ಗ್ರಾಮಾಂತರ ಮತ್ತು ಸಣ್ಣ ಕೈಗಾರಿಕೆಗಳಿಗೆ ಇದೆ. ಅವುಗಳು ಎಲ್ಲಿಯೇ ಇರಲಿ, ಅಂದರೆ ಗ್ರಾಮದಲ್ಲಿ ಇರಲಿ, ಬೇರೆ ಕಡೆಗಳಲ್ಲಿ ಇರಲಿ, ಅದನ್ನು ನಾವು ಮಾಡಿದ್ದೇವೆ. ಇನ್ನೊಂದು ವಿಷಯವನ್ನು ನಮ್ಮ ನೀತಿಯಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ವಿದ್ಯುಚ್ಛಕ್ತಿ ಅಭಾವದ ಅರಿವು ಇರುವ ನಮ್ಮ ಸರಕಾರ ಹೆಚ್ಚು ವಿದ್ಯುಚ್ಛಕ್ತಿಯನ್ನು ಬಳಸತಕ್ಕಂತಹ ಕಾರ್ಖಾನೆಗಳಿಗೆ ಉತ್ತೇಜನವನ್ನು ಕೊಡುವುದಿಲ್ಲ.

ಕೆಲವು ಭಾಗಗಳಲ್ಲಿ ಅಂದರೆ ಬೆಂಗಳೂರು, ಮೈಸೂರು ಇಂತಹ ಕಡೆಗಳಲ್ಲಿ ಕೈಗಾರಿಕೆಗಳ ಒತ್ತಡ ಜಾಸ್ತಿ ಇದ್ದು ಹೆಚ್ಚು ಕೈಗಾರಿಕೆಗಳು ಬರುವುದರಿಂದ ನಗರ ಪ್ರದೇಶಗಳಲ್ಲಿ ಆ ಕೈಗಾರಿಕೆಗಳಿಗೆ ಬೇಕಾದಂಥ ಸೌಲಭ್ಯಗಳನ್ನು ಒದಗಿಸಿಕೊಡುವುದು ಕಷ್ಟವಾಗುತ್ತದೆ ಮತ್ತು ಲಾ ಅಂಡ್ ಆರ್ಡರ್ ಪ್ರಾಬ್ಲಂ ಬರುವುದರಿಂದ ಇಂಡಸ್ಟ್ರೀಸ್‌ಗಳನ್ನು ಬೇರೆ ಕಡೆ ಡಿಸ್‌ಪರ್ಸ್ ಮಾಡಬೇಕೆಂದು ನಾವು ನಮ್ಮ ಕೈಗಾರಿಕಾ ನೀತಿಯಲ್ಲಿ ಎಲ್ಲಾ ವಿವರಗಳನ್ನು ಹೇಳಿದ್ದೇವೆ. ಆ ಎಲ್ಲಾ ವಿವರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ಒಂದು ನೀತಿಯ ಆಧಾರದ ಮೇಲೆಯೇ ನಾವು ಇವತ್ತು ಕೈಗಾರಿಕಾ ಆರ್ಥಿಕ ನೀತಿಯನ್ನು ಸ್ಥಾಪನೆ ಮಾಡಿಕೊಂಡು ಅವುಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತೋ ಅಷ್ಟು ಪ್ರಾಮುಖ್ಯತೆಯನ್ನು ನಾವು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿದ್ದೇವೆ, ಇವತ್ತು ನಮ್ಮ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಬಡತನ ರೇಖೆ ದಿನೇದಿನೇ ಜಾಸ್ತಿಯಾಗುತ್ತಾ ಹೋಗುತ್ತಿದೆ. ಆದ್ದರಿಂದ ನಾವು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪಾದನೆಯ ಕಡೆಗೆ ಹೆಚ್ಚು ಒತ್ತು ಕೊಟ್ಟು ಉತ್ಪಾದನೆಯನ್ನು ಹೆಚ್ಚು ಮಾಡಿದ್ದೇವೆ. ಎಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗುತ್ತದೆಯೋ ಅಷ್ಟು ಉತ್ಪಾದನೆಯನ್ನು ಮಾಡಿ ನಾವು ಜನತೆಗೆ ಅದರ ಪ್ರತಿಫಲವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈಗ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಖ್ಯವಾಗಿ ಮೂರು ಅಬ್ಜೆಕ್ಟೀವ್ಸ್ ಇವೆ. ಅವು ಯಾವುವೆಂದರೆ ಒಂದು ಫುಡ್ ಎರಡನೆಯದು ಎಂಪ್ಲಾಯ್‌ಮೆಂಟ್ ಮೂರನೆಯದು ಪ್ರೊಡಕ್ಟಿವಿಟಿ ಈ ಮೂರು ವಿಷಯಗಳನ್ನು ನಾವು ೧೯೮೫ನೇ ಇಸವಿಯ ಔದ್ಯಮಿಕ ನೀತಿಯಲ್ಲಿ ಅಳವಡಿಸಿಕೊಂಡು ಉತ್ಪಾದನೆಯನ್ನು ಹೆಚ್ಚು ಮಾಡಿ ಅದರ ಪ್ರತಿಫಲ ಸಾಮಾನ್ಯ ಜನರಿಗೆ ತಲುಪಿಸಲು ಪ್ರಯತ್ನ ಮಾಡಿದ್ದೇವೆ. ಇದರಿಂದ ಪರ್‌ಕ್ಯಾಪಿಟಾ ಇನ್‌ಕಮ್ ಜಾಸ್ತಿಯಾಗುತ್ತದೆ. ಆದರೆ ಈ ಬಗ್ಗೆ ಕೆಲವರು ತಪ್ಪು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಈ ದೇಶದಲ್ಲಿ ೧೯೫೦ನೇ ಇಸವಿಯಲ್ಲಿ ಇದ್ದಂತಹ ಪರ್‌ಕ್ಯಾಪಿಟಾ ಇನ್‌ಕಮ್ ೨೫೦ ಇದ್ದದ್ದು ೧೯೮೪-೮೫ನೇ ಇಸವಿಗೆ ಸುಮಾರು ೩೧೦೦ಕ್ಕೆ ಹೋಗಿದೆ. ಇದರಿಂದ ರಿಯಲ್ ಪರ್‌ಕ್ಯಾಪಿಟಾ ಇನ್‌ಕಮ್ ಮತ್ತು ಪ್ರೈವೇಟ್ ಕನ್‌ಸಮ್‌ಷನ್ ೧೯೫೦ನೇ ಇಸವಿಯಲ್ಲಿ ೧೦೦ ಇದ್ದದ್ದು ಈಗ ೧೯೯ಕ್ಕೆ ಬಂದಿದೆ. ಈಗ ಪ್ರೊಡ್ಯೂಜ್ ಏನು ಆಗುತ್ತದೆಯೋ ಅದು ಎಲ್ಲರಿಗೂ ಸಿಗುತ್ತದೆ. ಆದ್ದರಿಂದ ನಮ್ಮ ಯೋಜನೆಯಲ್ಲಿ ದೊಡ್ಡ ದೊಡ್ಡ ಇಂಡಸ್ಟ್ರಿಗಳಿಗೆ ಬಂಡವಾಳವನ್ನು ಹಾಕುವುದು ಅವಶ್ಯಕ ಇಲ್ಲ ಎನ್ನುವ ಒಂದು ತೀರ್ಮಾನಕ್ಕೆ ನಾವು ಬಂದಿದ್ದೇವೆ. ಮತ್ತು ಸಣ್ಣ ಸಣ್ಣ ಕೈಗಾರಿಕೆಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಕೈಗಾರಿಕೆಗಳಿಗೆ ಮತ್ತು ವಿದ್ಯುಚ್ಛಕ್ತಿ ಕಡಿಮೆ ತೆಗೆದುಕೊಳ್ಳತಕ್ಕಂಥ ಕೈಗಾರಿಕೆಗಳಿಗೆ ಹೆಚ್ಚಿನ ಸಹಾಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತು ನಮ್ಮ ಯೋಜನೆಯಲ್ಲಿ ಭಾರಿ ಉದ್ದಿಮೆಗಳಿಗೆ ರಾಜ್ಯ ಸರ್ಕಾರದ ಯೋಜನೆಯಲ್ಲಿ ಅಲೋಕೇಶನ್ ಕಡಿಮೆ ಇದೆ. ಎತಕ್ಕೆ ಕಡಿಮೆ ಇದೆ ಎನ್ನುವುದನ್ನು ನಾನು ಆಮೇಲೆ ಹೇಳುತ್ತೇನೆ. ಆದರೆ ಅಲೋಕೇಶನ್ ಕಡಿಮೆ ಇದ್ದರೂ ಸಹ ಉತ್ಪಾದನೆ ಕಡಿಮೆಯಾಗಿಲ್ಲ. ರಾಜ್ಯ ಸರ್ಕಾರದ ಯೋಜನೆಯ ಔಟ್ ಲೇ ಎಂದು ಏನು ಇದೆ ಅದರಲ್ಲಿ ಮಾತ್ರ ಕಡಿಮೆ ಇವೆ. ಯಾವ ರೀತಿಯಲ್ಲಿ ಅದನ್ನು ತುಂಬಿಕೊಳ್ಳುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಬಹುದು. ಆ ವಿಚಾರವನ್ನು ನಾನು ಬೇರೆ ಸಂದರ್ಭ ಬರುತ್ತದೆ ಆಗ ಹೇಳುತ್ತೇನೆ. ಆದರೆ ನಮ್ಮ ಯೋಜನೆಯಲ್ಲಿ ಭಾರಿ ಕೈಗಾರಿಕಗಳಿಗೆ ಇಟ್ಟಿರತಕ್ಕಂಥ ಅಲೋಕೇಶನ್ ಹೇಳುವುದಾದರೆ ೪ ನೇ ಯೋಜನೆಯಲ್ಲಿ ಕೇಂದ್ರ ಸರ್ಕಾರ ಇಟ್ಟಿದ್ದ ಅಲೋಕೇಶನ್ ಸುಮಾರು ೨೨ ಪರ್ಸೆಂಟ್. ಆಮೇಲೆ ೫ನೇ ಯೋಜನೆಯಲ್ಲಿ ಇಟ್ಟಿದ್ದ ಅಲೋಕೇಶನ್ ಸುಮಾರು ೨೦ ಪರ್ಸೆಂಟ್‌ಗೆ ಬಂತು. ಮತ್ತೆ ೬ನೇ ಯೋಜನೆಯಲ್ಲಿ ಸುಮಾರು ೧೩ ಪರ್ಸೆಂಟ್‌ಗೆ ಬಂತು. ಈಗ ೭ನೇ

ಯೋಜನೆಯಲ್ಲಿ ಇಟ್ಟಿರತಕ್ಕಂಥ ಅಲೋಕೇಶನ್ ಸುಮಾರು ೧೨ ಪರ್ಸೆಂಟ್‌ಗೆ ಇಳಿದಿದೆ. ನಾನು ಕೇಂದ್ರ ಸರ್ಕಾರದ ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಹೇಳುತ್ತಿಲ್ಲ. ಈ ಬಗ್ಗೆ ಪ್ರೊಫೆಸರ್ ಲಕಡವಾಲ್‌ರವರು ಒಂದು ಮಾತು ಹೇಳಿದ್ದಾರೆ. ಅದೇನೆಂದರೆ ಎಷ್ಟು ಉತ್ಪಾದನೆಯಾಗುತ್ತದೆಯೋ ಅದರ ಫಲ ಜನರಿಗೆ ಸಿಗುವಂತೆ ಆಗಬೇಕು. ಅಷ್ಟು ಫಲ ಜನರಿಗೆ ಸಿಗದಿದ್ದರೆ ಏನಾಗುತ್ತದೆ ಎಂದರೆ ಒಂದು ಸಂಸಾರದಲ್ಲಿ ೧೧೦ ರೂಪಾಯಿಗಳನ್ನು ಸಂಪಾದನೆ ಮಾಡಿ ೮೦-೯೦ ರೂಪಾಯಿಗಳಷ್ಟು ಊಟ ಮಾಡಿ ಇನ್ನು ಉಳಿದಂಥ ೧೦ ರೂಪಾಯಿಗಳನ್ನು ೯೦ ಜನರಿಗೆ ಹಂಚಿದಂತಾಗುತ್ತದೆ. ಈ ಒಂದು ದೃಷ್ಟಿಯಿಂದ ನಾವು ಭಾರಿ ಇಂಡಸ್ಟ್ರಿಗಳಿಗೆ ಅಲೋಕೇಷನ್ ಕಡಿಮೆ ಇಟ್ಟಿದ್ದೇವೆ. ಮತ್ತು ಈ ಭಾರಿ ಇಂಡಸ್ಟ್ರಿಗಳಿಗೆ ಯಾವ ರೀತಿಯಲ್ಲಿ ಹಣವನ್ನು ತುಂಬಿಕೊಳ್ಳುತ್ತೀರಿ ಎನ್ನುವ ಬಗ್ಗೆ ಹಾಗೂ ನಮ್ಮ ರಾಜ್ಯದ ಇಂಡಸ್ಟ್ರೀಸ್‌ಗಳ ಬಗ್ಗೆ ಹಾಗೂ ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಕೆಲವರು ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಮೊದಲು ಒಂದು ಕೈಗಾರಿಕಾ ನೀತಿ ಇರುತ್ತದೆ. ಆಮೇಲೆ ೧೯೭೭ನೇ ಇಸವಿಯಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಾಗ ಮತ್ತೊಂದು ಇಂಡಸ್ಟ್ರೀ ನೀತಿ ಬರುತ್ತದೆ. ಅದಾದನಂತರ ಮತ್ತೆ ಒಂದು ಇಂಡಸ್ಟ್ರೀ ನೀತಿ ಬಂತು. ಈಗಿರ ತಕ್ಕಂಥ ಕೇಂದ್ರ ಸರ್ಕಾರವೇ ಒಂದು ಇಂಡಸ್ಟ್ರೀ ನೀತಿಯನ್ನು ತಂದಿದೆ. ಆ ಸರ್ಕಾರ ಈ ಸರ್ಕಾರ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶ್ರೀನಿವಾಸ್‌ರವರು ಹೇಳಿದ ಹಾಗೆ ಅವರು ಒಂದು ಪಾಯಿಂಟ್ ಸ್ಕೋರ್ ಮಾಡಿದರೆಂದು ಹೇಳಿ ನಾವು ಒಂದು ಪಾಯಿಂಟ್ ಸ್ಕೋರ್ ಮಾಡುವ ವಿಷಯವಲ್ಲ. ಆದರೆ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಬೇಕಾಗುತ್ತದೆ. ಯಾವುದೇ ರಾಜ್ಯ ಸರ್ಕಾರದ ನೀತಿಯಾಗಲಿ ಅಥವಾ ಕೇಂದ್ರ ಸರ್ಕಾರ ಕೈಗಾರಿಕಾ ನೀತಿಯಾಗಲಿ ಮೂಲಭೂತವಾಗಿರಬೇಕಾದುದು ಉತ್ಪಾದನೆಯ ಫಲ ಜನರಿಗೆ ಸಿಗಬೇಕು. ಅದು ಸಿಗದಿದ್ದರೆ ಆ ನೀತಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಕೇಂದ್ರ ಸರ್ಕಾರದ್ದೇ ಆದ ಒಂದು ನಾರಂಸ ಇರುತ್ತದೆ. ಈ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಇಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ ಈಗ ಕೇಂದ್ರ ಸರ್ಕಾರದ ಟೆಕ್ಸ್‌ಟೈಲ್ ಪಾಲಿಸಿಯನ್ನೇ ತೆಗೆದುಕೊಳ್ಳಿ. ನಮಗೆ ಸುಮಾರು ೧೨ ಸಾವಿರ ಕೋಟಿ ಮೀಟರ್ ಬಟ್ಟೆ ಬೇಕಾಗುತ್ತದೆ. ನಮ್ಮಲ್ಲಿರತಕ್ಕ ಆರ್ಗನೈಜ್ಡ್ ಮಿಲ್ಸ್ ಕೇವಲ ೩೦ ಪರ್ಸೆಂಟ್‌ನಷ್ಟು ಬಟ್ಟೆಯನ್ನು ಉತ್ಪಾದನೆ ಮಾಡುತ್ತವೆ. ಇನ್ನು ಉಳಿದ ೭೦ ಪರ್ಸೆಂಟ್‌ನಷ್ಟು ಬಟ್ಟೆಯನ್ನು ಪವರ್‌ಲೂಮ್ಸ್‌ನಿಂದ ಹಾಗೂ ಹ್ಯಾಂಡ್‌ಲೂಮ್ಸ್‌ನಿಂದ ಉತ್ಪಾದನೆಯಾಗುತ್ತಿದೆ. ಸಂಖ್ಯಾ ದೃಷ್ಟಿಯಿಂದ ಇದರ ಕೆಲಸಗಾರರು ಯಾರು ? ಮತ್ತು ಕ್ವಾಂಟಮ್ ದೃಷ್ಟಿಯಿಂದ ಒಟ್ಟು ಉತ್ಪಾದನೆ ಮಾಡ ತಕ್ಕಂಥ ಬಟ್ಟೆ ಸುಮಾರು ೧೨೦೦೦ ಕೋಟಿ ಮೀಟರುಗಳು. ಇದರಲ್ಲಿ ತೊಡಗಿರತಕ್ಕಂಥ ವರ್ಕರ್ಸ್ ಸುಮಾರು ಒಂದು ಕೋಟಿ ಇಪ್ಪತ್ತು ಲಕ್ಷ ಜನ. ಇದರಲ್ಲಿ ಸುಮಾರು ೧೩ ಲಕ್ಷ ಜನ ಆರ್ಗನೈಜ್ ಮಿಲ್‌ನಲ್ಲಿ. ಇನ್ನು ೩೨ ಲಕ್ಷ ಜನ ಪವರ್‌ಲೂಮ್‌ನಲ್ಲಿ ಮತ್ತು ೭೫ ಲಕ್ಷ ಜನ ಹ್ಯಾಂಡ್‌ಲೂಮ್‌ನಲ್ಲಿ ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಈ ಟೆಕ್ಸ್‌ಟೈಲ್ ಪಾಲಿಸಿಯಿಂದ ಸಿಂಥೆಟಿಕ್ ಫೈಬರ್ಸ್ ಮಾಡುವುದಕ್ಕೆ ಬೇಕಾದಂಥ ಆಧುನಿಕ ಯಂತ್ರಗಳನ್ನು ವಿದೇಶದಿಂದ ತರಿಸಿಕೊಳ್ಳುವುದಕ್ಕೆ ಬಂಡವಾಳವನ್ನು ಹಾಕಿ ಇನ್‌ಫ್ಲೈಟ್ ಮಾಡಬಹುದು. ಆದರೆ ಅವರು ಹೇಳಬಹುದು ನಾವು ಲಿಬರ್‌ಲೈಜ್ಡ್ ಮಾಡಿದ್ದೇವೆ. ಮತ್ತು ಎಫೆಕ್ಟೀವ್ ಆಗಿ ಕೆಲಸ ಆಗುತ್ತದೆ ಎಂದು ನಮಗೆ ಬೇಕಾದಂಥ ಬಟ್ಟೆಗಿಂತ ನಾವು ಜಾಸ್ತಿ ಈ ಯಂತ್ರಗಳಿಂದ ನೇಯ್ದರೂ ಸಹ ಸುಮಾರು ೨೦ ಲಕ್ಷ ಜನರಿಗೆ ಕೆಲಸ ಕೊಡಬಹುದು. ಆದರೆ ಇನ್ನು ಉಳಿದ ಒಂದು ಲಕ್ಷದಷ್ಟು ಜನ ಬೀದಿಗೆ ಬರುತ್ತಾರೆ. ಆಗ ತಾವು ಏನು ಮಾಡುವುದಕ್ಕಾಗುತ್ತದೆ ? ಈ ಟೆಕ್ಸ್‌ಟೈಲ್ ಪಾಲಿಸಿಯಿಂದ ಆ ಜನರ ರಕ್ಷಣೆಯಾಗುತ್ತದೆಯೇ ?

ಟೆಕ್ಸ್‌ಟೈಲ್ ಸೆಕ್ಟರ್‌ನಲ್ಲಿ, ಆ ಪಾಲಿಸಿಯಿಂದ ಅನುಕೂಲವಾಗುವುದು ಯಾರಿಗೆ ಎಂದರೆ, ೫-೬ ಜನರಿಗೆ ಮಾತ್ರ. ಯಾರು ಎಂದರೆ, ರಿಲೆಯನ್ಸ್‌ನವರು, ಬಾಂಬೆ ಡೈಯಿಂಗ್‌ನವರು, ಆರ್.ಕೆ. ಮಿಲ್ಸ್‌ನವರಿಗೆ, ಜೆ. ಕೆ. ಮಿಲ್ಸ್‌ನವರಿಗೆ, ಇಂತಹವರಿಗೆ ಅನುಕೂಲವಾಗುತ್ತದೆ. ಅವರ ಕೆಪಾಸಿಟಿ ಎಕ್ಸ್‌ಪ್ಯಾಂಡ್ ಆಗುತ್ತದೆ. ಅವರು ಟೆಕ್ನಾಲಜಿ ಇಂಪೋರ್ಟ್ ಮಾಡಿಕೊಳ್ಳುತ್ತಾರೆ. ಈವನ್ ಮಲ್ಟಿ ನ್ಯಾಷನಲ್ಸ್ ಬಂಡವಾಳ ಹಾಕಬಹುದೆಂದು ಈ ರೀತಿ ಮಾಡಿದ್ದಾರೆ. ಆದ್ದರಿಂದ ಈ ನೀತಿ ಉದ್ದೇಶ ಪ್ರೊಡಕ್ಟಿವಿಟಿ ಕಡೆಗೆ ಇರುವುದರಿಂದ: ಪ್ರೊಡಕ್ಟಿವಿಟಿಯಿಂದ ಏನಾಗುತ್ತದೆ, ಅದು

ಸಾಮಾನ್ಯ ಜನರಿಗೆ ತಲುಪುತ್ತದೆಯೋ ಇಲ್ಲವೇ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಇದನ್ನು ರಾಜಕೀಯ ಕಾರಣಕ್ಕೋಸ್ಕರ ಹೇಳುತ್ತಿಲ್ಲ, ಈಗ ಷುಗರ್ ಇಂಡಸ್ಟ್ರಿ ಬಗ್ಗೆ ಜನರಲ್ಲಾಗಿ ಹೇಳುತ್ತೇನೆ. ಮಾನ್ಯ ಶ್ರೀನಿವಾಸ್‌ರವರಿಗೂ ಗೊತ್ತಿದೆ. ೧೯೮೨–೮೩ರಲ್ಲಿ ಕೇಂದ್ರ ಸರ್ಕಾರದ ನೀತಿ ಕಾರಣವಾಗಿ, ಬಹಳ ಷುಗರ್ ಮಿಲ್‌ಗಳು ಬಾಗಿಲು ಮುಚ್ಚಿದವು. ಕಾಸ್ಟ್ ಆಫ್ ಪ್ರೊಡಕ್ಷನ್ ಆಗಲಿಲ್ಲ. ಕನ್‌ವರ್ಷನ್ ಫೀ ಸಿಗಲಿಲ್ಲ. ಲೆವಿ ನೀತಿ ಅಂದರೆ ಭಾರತದಲ್ಲಿ ಕಡಿಮೆ ಕಬ್ಬು ಬೆಳೆಯಂತಕ್ಕ ರಾಜ್ಯಗಳಿಗೆ ಹೆಚ್ಚಿನ ಬೆಲೆ ಕೊಡತಕ್ಕ, ಜಾಸ್ತಿ ಕಬ್ಬು ಬೆಳೆಯಂತಕ್ಕ ರಾಜ್ಯಗಳಿಗೆ ಕಡಿಮೆ ಬೆಲೆ ಕೊಡತಕ್ಕ ದ್ವಿಮುಖ ನೀತಿಯಾಗಿದೆ. ಮಾನ್ಯ ರಾಜೀವ್ ಗಾಂಧಿಯವರು ಬಂದಮೇಲೆ ಇದನ್ನು ಸ್ವಲ್ಪ ಕಡಿಮೆ ಮಾಡಿದ್ದಾರೆ. ಮೇಲಾಗಿ ಲೇವಿ ಸಿಸ್ಟಂ ಶೇಕಡ ೬೫ನ್ನು ನಾವು ಸರ್ಕಾರಕ್ಕೆ ಲೇವಿ ಕೊಡಬೇಕು, ೩೫ನ್ನು ನಾವು ಮಾಡಿಕೊಳ್ಳಬೇಕೆಂದು ಇತ್ತು. ಯಾವುದೇ ಕಾರ್ಖಾನೆ ತಾನು ಉತ್ಪಾದನೆ ಮಾಡತಕ್ಕಂಥ ವಸ್ತುವನ್ನು, ಲುಕ್ಸಾನಿಗೆ ಸರ್ಕಾರಕ್ಕೆ ಜಾಸ್ತಿ ಕೊಟ್ಟು, ಸ್ವಲ್ಪ ಭಾಗವನ್ನು ಲಾಭಕ್ಕೆ ಮಾಡಿಕೊಳ್ಳಿ ಎಂದರೂ, ಯಾವ ಕಾರ್ಖಾನೆಗಳೂ ಉಳಿಯಲಿಲ್ಲ. ಮಹಾರಾಷ್ಟ್ರದಲ್ಲಿ ೧೯–೨೦ ಮಿಲ್ಲುಗಳು ಕ್ಲೋಸ್ ಆದವು. ನಮ್ಮ ರಾಜ್ಯದಲ್ಲಿ ೨೮ ಮಿಲ್ಲುಗಳ ಪೈಕಿ, ಎರಡು ಮಿಲ್‌ಗಳು ಲಾಭ ಮಾಡಿವೆ. ಒಂದು ಸಂಕೇಶ್ವರ ಮತ್ತು ಇನ್ನೊಂದು ಉಗಾರ್. ಇನ್ನುಳಿದ ಎಲ್ಲಾ ಕಾರ್ಖಾನೆಗಳೂ ನಷ್ಟದಲ್ಲಿವೆ. ನಾನು ಹೇಳುವುದೇನೆಂದರೆ. ಟೆಕ್ಸ್‌ಟೈಲ್ ಪಾಲಿಸಿಯನ್ನು, ಅಂದರೆ ಷುಗರ್ ಕೇನ್ ಎಷ್ಟು ಕೊಂಡು ಕೊಳ್ಳಬೇಕು, ಭತ್ತ ಎಷ್ಟು ಕೊಂಡುಕೊಳ್ಳಬೇಕು ಎಂಬ ಬಗ್ಗೆ ದೆಹಲಿಯಲ್ಲಿ ಕುಳಿತುಕೊಂಡು ಏನು ಮಾಡಿದರೆ, ಇಲ್ಲಿ ನಾನು, ಶ್ರೀನಿವಾಸ್‌ರವರು ಇಲ್ಲಿ ಕುಳಿತುಕೊಂಡು ಏನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ, ಇದು ಮೂಲ. ನಮ್ಮ ಮೂಲಭೂತ ಕಚ್ಚಾ ವಸ್ತುಗಳ ಬೆಲೆ ಮತ್ತು ಕಾರ್ಖಾನೆಗಳು ನಡೆಸತಕ್ಕಂಥ ಖರ್ಚು, ಉತ್ಪಾದನೆ ಆಗಿರತಕ್ಕಂಥ ವಸ್ತುವಿನ ಬೆಲೆ. ಇದಕ್ಕೆ ಒಂದು ವೈಜ್ಞಾನಿಕ ಆಧಾರ ಇರಬೇಕು. ಮಾನ್ಯ ಸದಸ್ಯರು ಹೇಳಿದರು, ನಾವು ಕಬ್ಬು ಬೆಳೆಯುತ್ತೇವೆ, ಹಾಗೂ ಸಕ್ಕರೆ ಮಾಡುತ್ತೇವೆ ಎಂದು ಆದರೆ ಸಕ್ಕರೆ ಕೊಂಡು ತಿನ್ನುವವನಿಗೂ ಬೆನಿಫಿಟ್ ಆಗುವುದಿಲ್ಲ, ಕಬ್ಬು ಬೆಳೆದವನಿಗೂ ಬೆನಿಫಿಟ್ ಆಗುವುದಿಲ್ಲ. ಆದರೆ ಕನ್‌ವರ್ಟ್ ಮಾಡಿದರಿಗೆ ಬೆನಿಫಿಟ್ ಆಗುತ್ತದೆ. ಅದೇ ನಮ್ಮ ರಾಜ್ಯದಲ್ಲಿ ಏನಾಗುತ್ತಿದೆ ಎಂದರೆ, ಇದನ್ನು ಕನ್‌ವರ್ಟ್ ಮಾಡಿದವನಿಗೂ ಆಗುತ್ತಿಲ್ಲ. ಇದೊಂದು ವಿಷಚಕ್ರದಲ್ಲಿ ನಾವಿದ್ದೇವೆ ಈಗ ನಾವು ಹತ್ತಿ ಬೆಳೆಯುತ್ತೇವೆ, ಕಾರ್ಖಾನೆಗೆ ಹೋಗುತ್ತದೆ, ಬಟ್ಟೆ ಬರುತ್ತದೆ. ಬಟ್ಟೆಯವನಿಗೆ ಜಾಸ್ತಿ ಕೊಡುತ್ತೇವೆ, ಹತ್ತಿ ಬೆಳೆಯುವವನು ಕಡಿಮೆ ತೆಗೆದು ಕೊಳ್ಳುತ್ತಾನೆ. ಆದ್ದರಿಂದ ಈ ಬಗ್ಗೆ ಒಂದು ಮೂಲಭೂತ ಫಾರ್ಮುಲಾವನ್ನು ಕೇಂದ್ರ ಸರ್ಕಾರ ಇಟ್ಟುಕೊಳ್ಳದೇ ಹೋದರೆ, ಬಹಳ ಕಷ್ಟವಾಗುತ್ತದೆ. ಮಾರ್ಪಾಟು ಮಾಡತಕ್ಕಂಥ ಕಾರ್ಖಾನೆ ಯಾವುದೇ ಇರಲಿ, ಅದು ಬಟ್ಟೆ ಇರಲಿ, ಸ್ಪಿನ್ನಿಂಗ್ ಇರಲಿ, ಷುಗರ್ ಇರಲಿ, ಕಾರ್ಖಾನೆಗೆ ಇಷ್ಟು ನಿಗದಿಯಾದ ಖರ್ಚು ಮಾತ್ರ ಸಿಗಬೇಕು. ಎಲ್ಲಾ ಪ್ರಯೋಜನವನ್ನೂ ಅವರೇ ತೆಗೆದುಕೊಳ್ಳಬಾರದು. ಅಥವಾ ಯಾವುದೇ ಒಂದು ವರ್ಷದಲ್ಲಿ ವಸ್ತುಗಳ ಬೆಲೆ ಮಾರ್ಚಿ ತಿಂಗಳಲ್ಲಿ ೫ ರೂಪಾಯಿ ಇದ್ದುದು ಡಿಸೆಂಬರ್ ತಿಂಗಳಲ್ಲಿ ೧೫ ರೂಪಾಯಿ ಆಗತಕ್ಕಂತಾದ್ದು ಇರುತ್ತದೆ. ಇಂತಹ ವಿಚಿತ್ರಗಳನ್ನು ನಾವು ನೋಡುತ್ತಿದ್ದೇವೆ, ಈಗ ನಾವು ಸೇಂಗಾ ಬೆಳೆಯುತ್ತೇವೆ, ಮಾರಾಟ ಮಾಡುತ್ತೇವೆ. ಅದೇ ಸೇಂಗಾ ಬಿತ್ತನೆ ಕಾಲದಲ್ಲಿ, ನಾವು ಕೊಳ್ಳುವುದಕ್ಕೆ ಹೋದಾಗ ಜಾಸ್ತಿ ಬೆಲೆ ಕೊಟ್ಟು ತರುತ್ತೇವೆ. ಇಂತಹ ವಿಚಿತ್ರವಾದ ವ್ಯವಸ್ಥೆ ಬೇರೆ ದೇಶಗಳಲ್ಲಿ ಇಲ್ಲ. ನಮ್ಮ ಅರ್ಥ ವ್ಯವಸ್ಥೆ ಅಷ್ಟು ಸಿಂಪಲ್ ಆಗಿ ಇಲ್ಲ. ನಾನು ಬೇರೆ ಬೇರೆ ರಾಜ್ಯಗಳ ಅರ್ಥ ವ್ಯವಸ್ಥೆಯನ್ನೂ ನೋಡಿದ್ದೇನೆ. ಚೈನಾ ದೇಶ ನಮಗಿಂತ ಎರಡು ವರ್ಷದ ನಂತರ ಸ್ವಾತಂತ್ರ್ಯವನ್ನು ಪಡೆದಿದ್ದಾರೆ. ಅಮೇರಿಕಾ, ರಷ್ಯಾ ಈ ರಾಜ್ಯಗಳ ತತ್ವ ಸಿದ್ಧಾಂತ ಒಂದೇ ಆದರೂ, ಬೇರೆ ರಾಜ್ಯದಲ್ಲಿ ಅಂದರೆ, ಯಾವ ರಾಷ್ಟ್ರದಲ್ಲಿ ಪ್ರಜಾಸಂಖ್ಯೆ ಕಡಿಮೆ ಇದ್ದು ಭೂಮಿ ಜಾಸ್ತಿ ಇದೆ. ಅವರ ವಾತಾವರಣ ಬೇರೆ. ಅದೇ ಇಂಡಸ್ಟ್ರಿಯಲ್ ಗ್ರೋಥ್ ಆಗಿರತಕ್ಕಂಥ ರಾಷ್ಟ್ರಗಳ ವಾತಾವರಣ ಬೇರೆ. ಇವತ್ತು ಚೈನಾದವರು ಕಮ್ಯುನಿಸ್ಟರಾದರೂ, ರಷ್ಯಾವನ್ನು ಇಮಿಟೇಟ್ ಮಾಡಲಿಲ್ಲ. ಅವರು, ಅವರದೇ ಆದಂಥ ಕೃಷಿಯನ್ನು ಅವಲಂಬಿಸಿದ್ದಾರೆ. ನಮಗೆ ಮೂರು ಸಂಪತ್ತುಗಳು ಇವೆ, ಒಂದು ಭೂಮಿ, ಇನ್ನೊಂದು ಜಲ, ಮತ್ತೊಂದು ಮ್ಯಾನ್ ಪವರ್ ಈ ಮೂರನ್ನು ಮ್ಯಾನೇಜ್ ಮಾಡಬೇಕು. ಈ ಮೂರನ್ನು ಸರಿಯಾದ ರೀತಿಯಲ್ಲಿ ಯಾವ ರಾಷ್ಟ್ರ ಮ್ಯಾನೇಜ್ ಮಾಡುತ್ತದೋ, ಅವರು ಇನ್ನೊಬ್ಬರಿಗೆ ಯಾವುದೇ ರೀತಿಯಲ್ಲಿ ಸಲಾಮು ಹೊಡೆಯು ಬೇಕಾಗಿಲ್ಲ. ಇವುಗಳಲ್ಲಿ ಸರಿಯಾದ ವ್ಯವಸ್ಥೆ ಮಾಡಿಕೊಂಡಿರುವುದರಿಂದ, ಚೈನಾ ದೇಶ ಇವತ್ತು ನಮ್ಮ ನಂತರ ಸ್ವಾತಂತ್ರ್ಯವನ್ನು ಪಡೆದರೂ, ನಮಗಿಂತ ಮೇಲೆ ಹೋಗಿದ್ದಾರೆ. ರೇಗನ್ ಮತ್ತು ಗೋರ್ಬ್

ಚೇವ್ ಅವರುಗಳು ಸ್ಟಾರ್ ವಾರ್ ಬಗ್ಗೆ ಮಾತುಕತೆ ನಡೆಸಿ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ. ಅವರು ಭೂಮಿ ಸಮಸ್ಯೆಯನ್ನು ಮುಗಿಸಿ ಕೊಂಡಿದ್ದಾರೆ, ಅವರು ಆಕಾಶದ ಕಡೆ ಹೋಗುತ್ತಾರೆ. ಆದರೆ ನಮಗೆ ಭೂಮಿ ಸಮಸ್ಯೆ ಇರುವಾಗ, ಹೊಟ್ಟೆ ಸಮಸ್ಯೆ ಇರುವಾಗ, ಆಕಾಶದ ಕಡೆ ಹೋಗಬೇಕಾಗಿಲ್ಲ. ಅವರು ಸ್ಟಾರ್ ವಾರ್ ಮಾಡಿದರೂ ಅಷ್ಟೇ, ಬಿಟ್ಟರೂ ಅಷ್ಟೆ ಅವರು ಮಾಡಬೇಕೆಂದು ತೀರ್ಮಾನ ಮಾಡಿದರೆ, ನಮ್ಮ ಕೈಯಲ್ಲಿ ಬಿಡಿಸುವುದಕ್ಕೆ ಆಗುವುದಿಲ್ಲ. ಅವರು ಮಾಡುವುದಿಲ್ಲವೆಂದು ತೀರ್ಮಾನ ಮಾಡಿದರೂ, ನಾವು ಮಾಡಿ ಎಂದು ಹೇಳುವವರಲ್ಲ. ನಮ್ಮ ಚಿಂತೆ ನಮಗೆ ಸಾಕು, ಪರರ ಚಿಂತೆ ನಮಗೇಕಯ್ಯ ಎಂಬ ಅರ್ಥವಲ್ಲಿ ಚೈನಾದ ಜಿಯಾಂಗ್ ಹೇಳಿದರು, ಚೈನಾ ದೇಶದ ಪ್ರಧಾನ ಮಂತ್ರಿಗ, ಅವರ ದೇಶದ ಜನಗಳಿಗೆ ಕೆಲಸ ಕೊಡುವುದು, ಅನ್ನ ಕೊಡುವ ಚಿಂತೆ ಇದ್ದರೆ, ನಮ್ಮ ದೇಶದ ಪ್ರಧಾನಮಂತ್ರಿಗಳಿಗೆ, ಅವರು ಯಾರೇ ಆಗಿರಲಿ, ಸದಾ ಬೇರೆಯವರ ಚಿಂತೆ ಇರುತ್ತದೆ. ಆ ಒಂದು ನೇಚರ್ ಇರಬೇಕು, ನಿಜ. ಯಾರೋ ಪಕ್ಕದ ಮನೆಯಲ್ಲಿ ಊಟ ಮಾಡುತ್ತಾರೆ ಎಂಬುದನ್ನು ನೋಡದೇ, ನಮ್ಮ ಮನೆಯಲ್ಲಿ ಏನು ಮಾಡುತ್ತೇವೆಂಬುದನ್ನು ನೋಡಬೇಕು. ಸ್ವದೇಶಿ ಚಿಹ್ನನ ಇರಬೇಕು. ಇದು ಮಹಾತ್ಮ ಗಾಂಧಿಯವರಿಗೆ ಇತ್ತು ಜವಹರಲಾಲ್ ನೆಹರು ಅವರಿಗೆ ಇತ್ತು. ನಂತರ ಬಂದ ವ್ಯವಸ್ಥೆಯಲ್ಲಿ. "ಊರ ದನ ಕಾದು ದೊಡ್ಡಬೋರೇಗೌಡ ಅನಿಸಿಕೊಂಡರು" ಹಾಗೆ ಆಗಿದೆ. ನಮ್ಮ ಮನೆಯಲ್ಲಿ ತಿನ್ನುವುದಕ್ಕೆ. ಅನ್ನ ಇದೆಯೋ ಎಂಬುದನ್ನು ನೋಡುವುದಕ್ಕೆ ಹೋಗದೆ ಇರತಕ್ಕ ಪರಿಸ್ಥಿತಿ ಇವತ್ತು ಇದೆ. ಈಗ ಯಾವುದೊ ಒಂದು ತೀರ್ಮಾನದಿಂದ ಒಂದು ಹಡಗಿನಲ್ಲಿ ಹೋಗುತ್ತಿರುವಾಗ. ಆ ಹಡಗಿನ ನಾವಿಕ ಇಂಡೋನೇಷಿಯಾ ಕಡೆಗೆ ಹೋಗುತ್ತಿರುತ್ತಾನೆ. ನಾನು ಇರಾಕ್ ಕಡೆಗೆ ಹೋಗಬೇಕೆಂದರೆ, ಅದು ಬರುವುದಿಲ್ಲ. ಬೇಕಾದರೆ ಇರಾಕ್ ಕಡೆಗೆ ಮುಖ ಮಾಡಿ ಕೊಂಡು ಕುಳಿತುಕೊಳ್ಳಬಹುದು. ಹಡಗಿನಲ್ಲಿ ನಾನು ಪಶ್ಚಿಮಕ್ಕೆ ಹೋಗಬೇಕೆಂದರೆ, ಅದು ಮಾತ್ರ ಪೂರ್ವಕ್ಕೇ ಹೋಗುತ್ತಿರುತ್ತದೆ. ಇದು ಹೀಗಾಗಬಾರದು. ಕೆಲವೊಂದು ಪೀಠಿಕೆಗಳಿಗೆ ಕೇಂದ್ರ ಸರ್ಕಾರ ಪ್ಲಾನಿಂಗ್ ಏನಿವೆ, ಅವು ನಮಗೆ ಬೇಕು. ಇವತ್ತು ಗ್ರಾಮಾಂತರ ಕೈಗಾರಿಕೆಗಳು, ಜನರಿಗೆ ಉದ್ಯೋಗ, ಮ್ಯಾನ್‌ಪವರ್ ಉಪಯೋಗ ಇವುಗಳಿಗೆ ಆದ್ಯತೆ ಕೊಡಬೇಕು. ಇವತ್ತು ಅಮೇರಿಕಾದವರು ಆಕಾಶಕ್ಕೆ ಹೋಗಲೀ ಅಥವಾ ಎಲ್ಲಿ ಬೇಕಾದರೂ ಹೋಗಲಿ, ಅದು ನಮಗೆ ಬೇಕಾಗಿಲ್ಲ....

ಶ್ರೀ ಬಿ. ಬಸವಲಿಂಗಪ್ಪ.—ತಾವು ಆಲ್ಡ್ ಆಗುವುದಾದರೆ ಒಂದು ಮಾತು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ನೀವು ಆ ಮೇಲೆ ಏನು ಬೇಕಾದರೂ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಈಗ ನೀವೇನೋ ಬಹಳ ಚೆನ್ನಾಗಿ ಹೇಳುತ್ತಿದ್ದೀರಿ, ನೀವು ಎಲ್ಲಿಗೆ ಬಿಟ್ಟಿದ್ದೀರಿ, ಅಲ್ಲಿಂದ ಮುಂದಕ್ಕೆ ಹೋಗತಕ್ಕಂಥ ಸಾಮರ್ಥ್ಯ ನಿಮಗೆ ಉಂಟು. ಒಂದು ಮಾತು ಹೇಳುತ್ತೇನೆ, ಮೊನ್ನೆ ಕೇಂದ್ರ ಸರ್ಕಾರದವರು ಈ ಕೈಗಾರಿಕಾ ನೀತಿಯನ್ನು ಬದಲಾವಣೆ ಮಾಡಿದ್ದಾರೆ, ಆರ್ಥಿಕ ನೀತಿಯನ್ನು ಬದಲಾವಣೆ ಮಾಡಿದ್ದಾರೆ, ಮತ್ತೆ ಯಾವ ರೀತಿಯಾದ ಆರ್ಥಿಕ ವ್ಯವಸ್ಥೆಯನ್ನು ರೂಢಿಸಿಕೊಳ್ಳಬೇಕೆಂಬುದನ್ನೂ ಬದಲಾವಣೆ ಮಾಡಿಕೊಂಡಿದ್ದಾರೆ. ಮೂರು ತಿಂಗಳಿಗೊಂದು ಸಾರಿ ಬಜೆಟ್ ವ್ಯವಸ್ಥೆ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ ನೀವು ಹೇಳುತ್ತಿರುವುದು ಈ ಸ್ಟಾರ್ ವಾರ್, ಗೋರ್ಬಚೇವ್ ಮಾತುಕತೆ ಇದೆಲ್ಲಾ ನಮಗೆ ಬೇಕಾಗಿಲ್ಲ. ''ನಮ್ಮ ಚಿಂತೆ ನಮಗೆ, ಪರರ ಚಿಂತೆ ನಮಗೇಕಯ್ಯ'' ಎಂದು ತಾವೇ ಹೇಳುತ್ತೀರಿ. ಆದ್ದರಿಂದ ದಯಮಾಡಿ, ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿ ಹೇಳಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಬಸವಲಿಂಗಪ್ಪನವರಿಗೆ ನನ್ನ ವಿಚಾರ ಚೆನ್ನಾಗಿ ಗೊತ್ತು. ಹಾಗಾದರೆ ವಿ.ಐ.ಎಸ್.ಎಲ್.ನಲ್ಲಿ ೫೦ ಕೋಟಿ ಲುಕ್ಸಾನು ಆಗಿದೆ. ಇದರ 4 ಕೋಟಿ ಲಾಭ ಆಗಿದೆ ಇವನ್ನು ಹೇಳಬೇಕೆ. ಹೇಳುವುದು ಔದ್ಯೋಗಿಕ ನೀತಿ ಆಧಾರದಲ್ಲಿ ಇರಬೇಕು. ಇಂಟರ್ ನ್ಯಾಷನಲ್ ಸಿಚುಯೇಷನ್ ಏನು ಎಂಬುದನ್ನು ನೋಡಬೇಕು. ಆ ದೃಷ್ಟಿಯಲ್ಲಿ ನಾವು ನೋಡಬೇಕು. ಆದ್ದರಿಂದ ಯಾವುದೇ ಒಂದು ರಾಜ್ಯದ ಮಟ್ಟಿಗೆ, ಅದು ಉಕ್ಕಿನ ಕಾರ್ಖಾನೆ ಇರಲಿ, ಷುಗರ್ ಕಾರ್ಖಾನೆ ಇರಲಿ, ಇವತ್ತು ನೇರವಾಗಿ ಕೇಂದ್ರ ಸರ್ಕಾರದ ನೀತಿಗೆ, ಅವರು ತೆಗೆದುಕೊಳ್ಳತಕ್ಕ ತೀರ್ಮಾನಕ್ಕೆ ಬದ್ಧವಾಗಿರುವಂಥ ಪರಿಸ್ಥಿತಿ ಇದೆ.

ಕೆಲವು ಸೇಲ್ಸ್‌ಟ್ಯಾಕ್ಸ್ ಮನ್ನಾ ಮಾಡಬೇಕಾದರೆ ಆ ಬಗ್ಗೆ ರಾಜ್ಯ ಸರ್ಕಾರಗಳು ಕ್ಲಾರಿಫೈ ಮಾಡಬೇಕಾಗುತ್ತದೆ. ಈಗ ರಾಜ್ಯದಲ್ಲಿರುವ ನಮ್ಮ ಯೋಜನೆಗಳನ್ನು ತೆಗೆದುಕೊಂಡರೆ ರಾಜ್ಯದ 4½ ಕೋಟಿ

ಜನಕ್ಕೆ 2½ ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ತಮ್ಮ ಗಮನಕ್ಕೆ ತರಬೇಕಾದರೆ one year,s budget of New York Municipality will be equal to a Five Year Plan of India. ಆದರೆ ನಮ್ಮಲ್ಲಿ ಇರತಕ್ಕಂಥಾ ಯೋಜನೆಗಳನ್ನು ಯಾವ ರೀತಿಯಾಗಿ ಮಾಡಬೇಕು ಅನ್ನುವುದನ್ನು ಯೋಚನೆ ಮಾಡದೆ ಯಾರನ್ನೋ ನೋಡಿ ನಾವು ಸಮಾಧಾನ ಮಾಡಿ ಕೊಳ್ಳುವುದಕ್ಕಾಗುವುದಿಲ್ಲ. ಬೇರೆಯವರು ಹಂಗೆ ಮಾಡಿದರು, ಹಿಂಗೆ ಮಾಡಿದರು ಎಂದು ಹೇಳದೆ ನಾವು ನಮ್ಮದನ್ನು ನೋಡಿಕೊಳ್ಳಬೇಕು. ಲೋಹಿಯಾರವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ನಮ್ಮ ಎಕನಾಮಿಕ್ ಗ್ರೋತ್ ಏನು ಅನ್ನುವುದನ್ನು ಯೋಚನೆ ಮಾಡಬೇಕು. ಇದು cosmopolite and universalist ಆಗಬಾರದು. ಸ್ಟಾಲಿನ್ ಸಮಗ್ರ ಮಾನವ ಕೋಟಿಗೆ ಜನತೆಗೆ ಏನು ಮಾಡುತ್ತಿದ್ದನು, ಅವರ ಸಿದ್ಧಾಂತ ಏನು ಮತ್ತು ಲಂಡನ್ ವಾಷಿಂಗ್‌ಟನ್‌ನಲ್ಲಿ ಅವರ ಸಿದ್ಧಾಂತ ಏನು ಇದೆ ಅದನ್ನೆಲ್ಲಾ ಇಲ್ಲಿ ಯೋಚನೆ ಮಾಡುವುದು ಅನಾವಶ್ಯಕ ಏಕೆಂದರೆ ಅವರವರ ಸಿದ್ಧಾಂತ ಅವರವರಿಗೆ ಸರಿಹೋಗುತ್ತದೇ ವಿನಾ ಆ ಸಿದ್ಧಾಂತ ನಮಗೆ ಸರಿಹೋಗುವುದಿಲ್ಲ. ಮೊದಲಿನಿಂದಲೂ ನಮ್ಮಲ್ಲಿ ಏನು ಸಿದ್ಧಾಂತ ಇಟ್ಟುಕೊಂಡು ಬಂದಿದ್ದೇವೆಯೋ ಅದನ್ನು ನೋಡಿಕೊಂಡು ನಾವು ಇಲ್ಲಿ ಕೆಲಸ ಮಾಡಬೇಕು. ಈಹೊತ್ತು ಕೈಗಾರಿಕಾ ಕ್ಷೇತ್ರದಲ್ಲಿ, ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯ ೧೧ನೇ ಸ್ಥಾನದಲ್ಲಿದೆ ಎಂದು ಹೇಳಬಯಸುತ್ತೇನೆ. ಕೈಗಾರಿಕಾ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ಇನ್‌ವೆಸ್ಟ್‌ಮೆಂಟ್ ನೋಡಿದರೆ, cosmopolite Bihar, Maharashtra, West Bengal, Uttar Pradesh, Andhra Pradesh, Orissa and Gujarath ಈ ರಾಜ್ಯಗಳಿಗೆ ನಾವು ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿರುವ ಕೈಗಾರಿಕಾ ಕ್ಷೇತ್ರಕ್ಕೆ ಕೇಂದ್ರವು ಬಂಡವಾಳ ಹೂಡಿರುವುದರಲ್ಲಿ ತಾರತಮ್ಯ ತೋರಿಸಿದೆ ಅನ್ನುವ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಬೇಕಾದರೆ ಅಂಕಿಅಂಶ ಕೊಡುತ್ತೇನೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಇಲ್ಲಿರುವ ಕೈಗಾರಿಕಾ ಕ್ಷೇತ್ರಕ್ಕೆ ಏನು ಹಣವನ್ನು ತೊಡಗಿಸಿದ್ದಾರೆ, ಈ ಬಗ್ಗೆ ಪರ್ಸೆಂಟೇಜ್ ಆಫ್ ಗ್ರೋತ್ ಏನು ಇದೆ ಅದನ್ನೂ ನಾವು ಲೆಕ್ಕಕ್ಕೆ ತೆಗೆದುಕೊಳ್ಳೋಣ. ಇವರು ೧೯೭೦ರಲ್ಲಿ ಕರ್ನಾಟಕದಲ್ಲಿರುವ ಕೈಗಾರಿಕಾ ಕ್ಷೇತ್ರಕ್ಕೆ ಇನ್‌ವೆಸ್ಟ್ ಮಾಡಿರುವುದು ಕೇವಲ ೯೦ ಕೋಟಿ ರೂಪಾಯಿ ಮಾತ್ರ. ಅದು ೧೯೮೫ಕ್ಕೆ increased to Rs 1065 crores. Percentage increase comes to 3.3 percent. ಇತರೇ ರಾಜ್ಯಗಳ percentage of increase ಯಾವರೀತಿ ಇದೆ ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. 19 percent increase in Bihar, 11 percent increase in West Bengal, 10 percent increase in Orissa ಈ ರೀತಿ ಇದೆ. Here it is only 3.[illegible] percent increase in Central investment in Industrial Sector. ಇನ್ನು ವಿಜಯನಗರ ಉಕ್ಕಿನ ಕಾರ್ಖಾನೆಗೆ ಸುಮಾರು ೧೫-೨೦ ಸಾವಿರ ರೂಪಾಯಿ ಇನ್‌ವೆಸ್ಟ್ ಮಾಡಿದ್ದಾರೆ. ಆದುದರಿಂದ ನಾನು ಹೇಳುವುದು ಕರ್ನಾಟಕದಲ್ಲಿರುವ ಕೈಗಾರಿಕಾ ಕ್ಷೇತ್ರಗಳಿಗೆ ಕೇಂದ್ರದ ಇನ್‌ವೆಸ್ಟ್‌ಮೆಂಟ್ ಸರಿಯಾಗಿ ಆಗಿಲ್ಲ. ಅಲ್ಲದೆ ಪೆಟ್ರೋ ಕೆಮಿಕಲ್ಸ್‌ಗೂ ಕೂಡ ಅವರು ಇನ್‌ವೆಸ್ಟ್ ಮಾಡಿಲ್ಲ. ಮೊನ್ನೆ ದಿವಸ ಕೇಂದ್ರ ಸರ್ಕಾರದ ಸಚಿವರಾದ ಶ್ರೀ ತಿವಾರಿಯವರು ಬಂದಿದ್ದಾಗ ಅವರು ಕರ್ನಾಟಕದಲ್ಲಿರುವ ಕೈಗಾರಿಕಾ ಕ್ಷೇತ್ರಗಳಿಗೆ ಬಹಳ ಇನ್‌ವೆಸ್ಟ್‌ಮೆಂಟ್ ಮಾಡಿದ್ದೇವೆಂದು ಹೇಳಿದರು, ಅವರು ಇನ್‌ವೆಸ್ಟ್ ಮಾಡಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ITI, HMT, BEL expansion projectಗೆ ಇನ್‌ವೆಸ್ಟ್ ಮಾಡಿರುವುದು ಎಲ್ಲಾ ಸೇರಿದರೆ ೧೦೬೫ ಕೋಟಿ ರೂಪಾಯಿ ಆಗುತ್ತದೆ. ಕೇಂದ್ರದವರು ಇಲ್ಲಿ ಇರತಕ್ಕಂಥ ಗಾಲಿ ಮತ್ತು ಅಚ್ಚು ಕಾರ್ಖಾನೆ ಒಂದನ್ನು ಬಿಟ್ಟರೆ ಬೇರೆ ಯಾವ ಕಾರ್ಖಾನೆಗೂ ಇನ್‌ವೆಸ್ಟ್ ಮಾಡಿಲ್ಲ. ಇಲ್ಲಿರುವ ಪೆಟ್ರೋ ಕೆಮಿಕಲ್ಸ್‌ಗಾಗಲಿ, ಪವರ್ ಸೆಕ್ಟರ್‌ಗಾಗಲಿ ಯಾವುದಕ್ಕೂ ಇನ್‌ವೆಸ್ಟ್ ಮಾಡಿಲ್ಲ, ಇವಕ್ಕೆ ಇನ್‌ವೆಸ್ಟ್ ಮಾಡಿದ್ದರೆ ಪೊಟೆನ್‌ಷಿಯಲ್ ಆಗಿ ಟ್ರೀಟ್ ಮಾಡಿದ್ದರೆ ನಮ್ಮ ರಾಜ್ಯಕ್ಕೆ ಬಹಳ ಅನುಕೂಲವಾಗುತ್ತಿತ್ತು. ಕೇಂದ್ರ ಸರ್ಕಾರ ನೀಡುವ ಆದ್ಯತೆ ಯೋಜನೆಗಳಿಗೂ ರಾಜ್ಯ ಸರ್ಕಾರದ ಆದ್ಯತೆ ಯೋಜನೆಗಳಿಗೂ ವ್ಯತ್ಯಾಸ ಇದೆ. ನಮ್ಮ ಪ್ರಶ್ನೆ ಏನೆಂದರೆ ನಮ್ಮ ರಾಜ್ಯದ ಬೇಡಿಕೆ ಬಗ್ಗೆ ನಾವು ಇದುವರೆಗೆ ನಡೆಸಿಕೊಂಡು ಬಂದ ದಾರಿಯಲ್ಲೇ, ನಾವು ಇದುವರೆಗೆ ನಡೆಸಿಕೊಂಡು ಬಂದ ರೀತಿಯಲ್ಲೇ ಕೇಂದ್ರ ಸರ್ಕಾರ ಗಮನಹರಿಸಿದ್ದರೆ ನಮ್ಮ ರಾಜ್ಯದ ಜನತೆಗೆ ಇನ್ನಷ್ಟು ಶಕ್ತಿ ಬರುತ್ತಿತ್ತು, ಅವರು ಇನ್ನಷ್ಟು ವೃದ್ಧಿಯಾಗುತ್ತಿದ್ದರು ಈ ಬಗ್ಗೆ ಅವರು ಗಮನ

ಹರಿಸಲಿಲ್ಲ, ತಮ್ಮ ಗಮನಕ್ಕೆ ತರಬೇಕಾದರೆ ಈ ಕಾಳೀನದಿ ಯೋಜನೆಗೆ ಅವರು ಗಮನಹರಿಸಿದ್ದರೆ ಪ್ರತಿ ವರ್ಷವೂ ೧೦೦೦ ಮೆಗೋವಾಟ್ಸ್ ಅಷ್ಟು ಪವರ್ ಇಂಕ್ರೀಸ್ ಆಗುತ್ತಿತ್ತು. average growth 200 to 500 MW ಆಗುತ್ತಿತ್ತು. ಹಾಗೆಯೇ power sectorನಲ್ಲಿ 7.5 percent ಗ್ರೋತ್ ಆಗುತ್ತಿತ್ತು. ೧೯೭೨ರಿಂದ ೧೯೮೨ರವರೆಗೆ ಲೆಕ್ಕ ಹಾಕಿದರೆ ನಮ್ಮಲ್ಲಿ generation increased by 7.5%. But our demand has gone upto 19.5 percent. ನಮಗೆ ಪವರ್ ಕೊರತೆ ೧೯೭೮-೭೯ರಲ್ಲಿ ಪ್ರಾರಂಭವಾದದ್ದು. ಈಗ ೮೦ ಪರ್ಸೆಂಟ್‌ಗೆ ಬಂದಿದೆ. ಇನ್ನು ಕೈಗಾರಿಕೆಗಳಿಗೂ ವಿದ್ಯುತ್ ಬೇಕಾಗಿದೆ, ಜೊತೆಗೆ ಕೃಷಿ ಕೈಗಾರಿಕೆಗೂ ವಿದ್ಯುಚ್ಛಕ್ತಿ ಬೇಕಾಗಿದೆ. ವಿದ್ಯುಚ್ಛಕ್ತಿ ಇಲ್ಲದೆ ಯಾವ ಬೆಳೆಯನ್ನೂ ಬೆಳೆಯುವುದಕ್ಕಾಗುವುದಿಲ್ಲ. ಇನ್ನು ಟೈನಿ ಸೆಕ್ಟಾರ್‌ಗೆ ಪವರ್ ಇಲ್ಲದೇ ಹೋದರೆ ಅಚೀವ್‌ಮೆಂಟ್ ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಕಳೆದ ೩-೪ ವರ್ಷಗಳಿಂದಲೂ ಇದೆ. ನಮ್ಮ ಪ್ರಾಜೆಕ್ಟ್‌ನ ರಿಸರ್ವಾಯರ್‌ನಲ್ಲಿ ನೀರಿನ ಕೊರತೆ ಇರುವುದರಿಂದ ಕೃಷಿ ವಲಯದಲ್ಲೂ ಸಹ ವಿದ್ಯುಚ್ಛಕ್ತಿ ಕೊರತೆ ಬೀಳುತ್ತದೆ. ಇದರಿಂದ ಕೃಷಿ ವಲಯದಲ್ಲಿರತಕ್ಕಂತಹ ಇಂಡಸ್ಟ್ರೀಸ್ ವೀಕ್ ಆಗುತ್ತದೆ. ಎಲ್ಲಿ ಇನ್‌ಸಪರ್‌ಬಲ್ ಸ್ಟ್ರಾಂಗ್ ಫಾರ್ಮರ್ಸ್ ಇರುತ್ತಾರೆ ಅಲ್ಲಿ ಇಂಡಸ್ಟ್ರೀಸ್ ಇರುತ್ತದೆ. ಆದುದರಿಂದ industrial growth aorne is not the strength of the nation. I would like to correct my young friend, ಇಂಡಸ್ಟ್ರಿಯಲ್ ಗ್ರೋತ್ ಆದ ತಕ್ಷಣ ದೊಡ್ಡದಾಗಿ ಸಾಧನೆ ಮಾಡಿದಂತಲ್ಲ. Industrial growth should commensurate with economic growth and benefits should go to the maximum population and that is the only strength of the nation. ಆದುದರಿಂದ ಕೆಲವು ರಾಷ್ಟ್ರ ಮತ್ತು ನಮ್ಮ ರಾಜ್ಯದ ಹಿನ್ನೆಲೆಯಲ್ಲಿ ಕೆಲವು ಕಾರ್ಖಾನೆಗಳು ಕೆಲಸ ಮಾಡತಕ್ಕಂಥ ರೀತಿಯನ್ನು ನೋಡಿ ರಾಜ್ಯದ ಎಕನಾಮಿಕ್ ಪಾಲಿಸಿ ಏನು ಇದೆ ಅನ್ನುವುದನ್ನು ಸದಸ್ಯರು ಹೇಳಿದ್ದಾರೆ.

ಇನ್ನು ಮಾನ್ಯ ಸದಸ್ಯರು ಹೇಳಿರತಕ್ಕಂಥಾ ಪಾಯಿಂಟ್ಸ್‌ಗಳನ್ನು ಒಂದೊಂದಾಗಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಉದ್ಯೋಗ ಚಿತ್ರವನ್ನು ಮಾನ್ಯ ಸದಸ್ಯರು ಓದಿದ್ದಾರೆ. ಅದರಲ್ಲಿ ಲಾಭ ಇಲ್ಲವೇ ಲುಕ್ಸಾನು ಯಾವ್ಯಾವ ಕಂಪನಿಯಲ್ಲಿ ಆಗಿದೆ ಎನ್ನುವುದನ್ನು ಓದಿರಬಹುದು. ಒಂದು ಸಂತೋಷ ಏನೆಂದರೆ ಷುಗರ್ ಒಂದರಲ್ಲಿ ಮಾತ್ರ ಇಂಪ್ರೂ ಆಗಿದೆ. ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಇದರಲ್ಲಿ ೧೯೮೨-೮೩ರಲ್ಲಿ ಎರಡು ಕಂಪನೀಸ್ ಲಾಭ ಮಾಡಿದೆ. ೧೯೮೪-೮೫ರಲ್ಲಿ ೮ ಕಂಪನಿಗಳು ಲಾಭ ಮಾಡಿದೆ, ೧೯೮೫-೮೬ರಲ್ಲಿ ೧೨ ಕಂಪನಿಗಳು ಲಾಭ ಮಾಡಿದೆ, ಇಷ್ಟು ಇಂಪ್ರೂವ್‌ಮೆಂಟ್ ಆಗಿದೆ.

ಮಾನ್ಯ ಅಧ್ಯಕ್ಷರೇ, ನಮ್ಮ ಕಾರ್ಖಾನೆಗಳು ಏನು ಇವೆ ಎಲ್ಲದರಲ್ಲೂ ಲುಕ್ಸಾನು ಇಲ್ಲ ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರು ಹೇಳಿದರು. ಅದೇನೆಂದರೆ ಸರ್ಕಾರೀ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ವಿಚಾರ ಮಾಡುತ್ತಿದ್ದಾರೆ ಎಂದು ಹೇಳಿದರು. ನಾನು ಹೋದ ಸಲವೂ ಹೇಳಿದ್ದೇನೆ. ಅದೇನೆಂದರೆ, ಈ ಸರ್ಕಾರೀ ಕಾರ್ಖಾನೆಗಳನ್ನು ತೆಗೆದುಕೊಂಡು ನಡೆಸುವುದಕ್ಕೆ ಆಗುವುದಿಲ್ಲ. ಖಾಸಗಿಯವರು ಹೇಳಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ, Our Government is not in a position to take over sick mills run by private owners and run them ಎಂದು ಹೇಳಿದ್ದೇನೆ. ಇಂಥಾದ್ದನ್ನು ತೆಗೆದುಕೊಂಡರೆ ಇದರಲ್ಲಿ ಕಾರ್ಮಿಕರ ಹಿತದ ಪ್ರಶ್ನೆ ಬರುತ್ತದೆ. ತಮಗೆ ಹೇಳಬೇಕಾದರೆ ಯಾರೋ ಒಬ್ಬರು ನನ್ನ ಹತ್ತಿರ ಬಂದು ನನಗೆ ಇದರಲ್ಲಿ ಇನ್‌ಸೆಂಟೀವ್ ಇದೆ, ಸಬ್ಸಿಡಿ ಸಿಕ್ಕುತ್ತದೆ ಎಂದು ತೆಗೆದುಕೊಂಡಿದ್ದೇನೆ ಎಂದರು. ಅವರು ಆ ಕಾರ್ಖಾನೆ ತೆಗೆದುಕೊಂಡ ಮೇಲೆ ಅಲ್ಲಿದ್ದ ನೂರಾರು ಜನ ಕಾರ್ಮಿಕರು ಬಿಟ್ಟು ಹೋದರು. ಅವರಿಂದ ನ್ಯಾಯ ಸಿಕ್ಕಲಿಲ್ಲ. ಹೀಗಾದರೆ ಹೇಗೆ ? ಇಂಥ ಸಿಕ್ ಮಿಲ್ಸ್‌ನ್ನು ತೆಗೆದುಕೊಂಡು ಸರ್ಕಾರ ಏನು ಮಾಡುವುದು ? ನಮ್ಮ ಮಕ್ಕಳಿಗೇನೇ ಕುಡಿಯುವುದಕ್ಕೆ ಹಾಲು ಇಲ್ಲದೇ ಇರುವಾಗ ಬೇರೆಯವರ ಮಕ್ಕಳಿಗೆ ಹಾಲು ಕೊಡುವುದೆಲ್ಲಿ ? ರಾಜ್ಯ ಸರ್ಕಾರದ ವಶದಲ್ಲಿ ಕೆಲವು ಕಾರ್ಖಾನೆಗಳು ಇವೆ. ಆ ಕಾರ್ಖಾನೆಗಳಲ್ಲಿರುವ ಕೂಲಿಗಾರರ ಹಿತವನ್ನು ಕಾಪಾಡುವುದು ನಮ್ಮ ಜವಾಬ್ದಾರಿ. ಇವರ ಜವಾಬ್ದಾರಿಯನ್ನೇ ನೋಡಿಕೊಂಡರೆ ಸಾಕು. ಇನ್ನು ಬೇರೆಯವರದನ್ನೆಲ್ಲಾ ತೆಗೆದುಕೊಂಡರೆ ಅದನ್ನೆಲ್ಲಾ ಹೆಗಲ ಮೇಲೆ ಹಾಕಿಕೊಂಡು ಅದರ ಬರ್ಡನ್ನೆಲ್ಲಾ ನಾವು ತೆಗೆದುಕೊಳ್ಳ

ವುದಕ್ಕೆ ಸಾಧ್ಯವಿಲ್ಲ ಎಂದು ನಾನು ಆಗಲೇ ಹೇಳಿದ್ದೇನೆ. ಇನ್ನು ಎರಡನೆಯದಾಗಿ, ನಮ್ಮ ಪಬ್ಲಿಕ್ ಸೆಕ್ಟರ್‌ನಲ್ಲಿರತಕ್ಕಂಥ ಕಾರ್ಖಾನೆಗಳನ್ನೇ ಸರಿಯಾಗಿ ನಡೆಸುವುದಕ್ಕೆ ಸಾಧ್ಯವಿಲ್ಲದಿರುವಾಗ ಈ ಸಾರ್ವಜನಿಕ ಉದ್ದಿಮೆಗಳು ರೋಗಗ್ರಸ್ತ ಆಗಿ ಮರಣಾವಸ್ಥೆಯಲ್ಲಿ ಇರುವಾಗ ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ನಾನು ಹೋದಸಲವೇ ಉತ್ತರ ಕೊಟ್ಟಿದ್ದೇನೆ. ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರಿಗೆ ಈ ಮಾತನ್ನು ಹೇಳಿದ್ದೇನೆ, ಇದನ್ನು ಹೊರಗಡೆಯವರು ಅಡ್ವಾಂಟೇಜ್ ತೆಗೆದುಕೊಂಡು ಅದನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ತಮಗೆ ಹೇಳಬೇಕಾದರೆ, ಸರ್ಕಾರೀ ವಲಯದಲ್ಲಿರತಕ್ಕಂಥ, ಜಾಯಿಂಟ್ ಸೆಕ್ಟರ್‌ನಲ್ಲಿರತಕ್ಕಂಥ ಕಾರ್ಖಾನೆಗಳು ಕಳೆದ ವರ್ಷ sick ಆಗಿದ್ದರೂ ಸಾಮಾನ್ಯವಾಗಿ ೪-೫ ವರ್ಷಗಳಿಂದಲೂ ಅವುಗಳು ತಕ್ಕಮಟ್ಟಿಗೆ ಸುಧಾರಣೆ ಆಗಿವೆ. ತಮಗೆ ಗೊತ್ತಿರುವ ಹಾಗೆ ಎಷ್ಟೋ ಕಾರ್ಖಾನೆಗಳಲ್ಲಿ power cut ಆಗಿವೆ, power cut is one of the major factors ಆದರೂ ಅದರ ಜೊತೆಗೆ mismanagement and non availability of raw materials ಸಹ ಇದೆ. ಮತ್ತು ಅಲ್ಲಿ ಕೆಲಸ ಮಾಡುವುದಕ್ಕೆ ಎಷ್ಟು ಜನ ಬೇಕು ಅದನ್ನೂ ಸಹ ಲೆಕ್ಕ ಹಾಕಬೇಕಾಗುತ್ತದೆ. ಮತ್ತು ಇದಕ್ಕೆ ಓವರ್‌ಲೋಡೂ ಒಂದು ಕಾರಣ. ಈ ಅನೇಕ ಕಾರಣಗಳಿಂದ ಕೆಲವು ಇಂಡಸ್ಟ್ರೀಸ್ ಕೊಲಾಪ್ಸ್ ಆಗುತ್ತದೆ. ರಾಜ್ಯ ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ಕಾರ್ಖಾನೆಗಳು ಇದ್ದರೂ ಕೂಡ ಇದು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯವಾಗುತ್ತದೆ.

ಈಗ ಸೇಲ್ ಲುಕ್ಸಾನ್‌ನಲ್ಲಿದೆ ಅಂದರೆ ನನಗೆ ಸಮಾಧಾನವಾಯಿತೇ. ವಿಐಎಸ್‌ಎಲ್ ಲುಕ್ಸಾನಿನಲ್ಲಿದೆ ಏನು ಯೋಜನೆ ಮಾಡುವುದು, ಸ್ಟೀಲ್ ಮಿನಿಸ್ಟರ್ ಹತ್ತಿರ ಹೋದೆ, ಸೇಲ್‌ನವರ ಹತ್ತಿರ ಹೋದೆ ಏನಾದರೂ ಮಾಡಿ ನಡೆಸಿ ಎಂದು ಹೇಳಿದೆ, ಅವರು ಮ್ಯಾನೇಜ್‌ಮೆಂಟ್ ಸರಿಮಾಡಿ ಸರಿಹೋಗಬಹುದು ಎಂದು ಹೇಳಿದರು ವಿತ್ ದಿಸ್ ಪವರ್‌ಕಟ್ ಪ್ರಾಬಬಲಿಟಿ ಇಲ್ಲ. ಈಗ ನೆನೆಗುದಿಗೆ ಬಿದ್ದಿದೆ. ಅದನ್ನು ನಾನು ಏನೂ ಮಾಡುವಹಾಗಿಲ್ಲ. ೨ ಕೋಟಿ ರೂಪಾಯಿ ವೇಜ್ ಬಿಲ್ ಇದೆ. ಇಲ್ಲಿರತಕ್ಕಂಥ ರಾಮೆಟೀರಿಯಲ್ಸ್, ಅವರಿಗೆ ಕೊಡತಕ್ಕ ಎಲೆಕ್ಟ್ರಿಕ್ ಸಪ್ಲೈ ಏನಿದೆ ಅದು ಸುಮ್ಮನೆ ಉಸಿರು ಹಿಡಿದುಕೊಂಡಿರುವುದಕ್ಕೋಸ್ಕರ ಮಾತ್ರ ಅಷ್ಟೆ. ಈಗ ಅದನ್ನು ಏನು ಮಾಡುವುದು, ನಾನು ವರ್ಕರ್ಸ್ ಇಂಟರೆಸ್ಟ್‌ನಿಂದ ಅಥವಾ ಟೋಟಲ್ ಪ್ರೊಡಕ್ಷನ್ ದೃಷ್ಟಿಯಿಂದ ಯಾರಿಗಾದರೂ ಕೊಡೋಣ ಅಂದರೆ ಸಮಾಜವಾದ ಇಲ್ಲ. ಸಿಕ್ ಇಂಡಸ್ಟ್ರೀಸ್ ಆಲ್‌ಮೋಸ್ಟ್ ಡೈಯಿಂಗ್ ಸ್ಟೇಜ್‌ನಲ್ಲಿದ್ದಾಗ ಸರ್ಕಾರಿ ಡಾಕ್ಟರಿಂದಲೇ ಔಷಧಿ ಕೊಡಿಸಬೇಕು, ಖಾಸಗಿಯವರಿಂದ ಕೊಡಿಸಿದರೆ ಏನೂ ಆಗುವುದಿಲ್ಲ ಅಂದರೆ ಅರ್ಥವಾಗುವುದಿಲ್ಲ. My own commitment to this public sector is irrevocable. ಆದರೆ ಪಬ್ಲಿಕ್ ಸೆಕ್ಟರ್ ಏನಿದೆ ಅದು ಒಂದು ಗುರಿಯಲ್ಲ. ನನ್ನ ಪ್ರಯಾರಿಟೀಸ್ ಅಂದರೆ ಸೋಪ್ ಮಾಡುವುದಕ್ಕೆ, ಪೌಡರ್ ಮಾಡುವುದಕ್ಕೆ, ಬ್ಲೇಡ್ ಮಾಡುವುದಕ್ಕೆ ಪಬ್ಲಿಕ್ ಸೆಕ್ಟರ್ ಬೇಕಾಗಿಲ್ಲ, ಪ್ರೈವೇಟ್‌ನವರೇ ಮಾಡಿಕೊಳ್ಳಲಿ. ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಹೇಳಿದಹಾಗೆ ಮುಖ್ಯವಾಗಿ ಕೋರ್-ಸೆಕ್ಟರ್ ಇದೆ ಅಥವಾ ಡಿಫೆನ್ಸ್ ಪ್ರೊಡಕ್ಷನ್‌ಗೆ ಸಂಬಂಧಪಟ್ಟಂಥಾದ್ದನ್ನು ಪ್ರೈವೇಟ್‌ನವರಿಗೆ ಕೊಟ್ಟರೆ ಯಾವುದೋ ಸಮಯದಲ್ಲಿ ಸರ್ಕಾರಕ್ಕೆ ಧಕ್ಕೆ ತರಬಹುದು ಎನ್ನುವ ಕಾರಣದಿಂದ ರಾಷ್ಟ್ರದ ಭದ್ರತೆಯ ದೃಷ್ಟಿಯಿಂದ, ರಾಷ್ಟ್ರದ ಮೂಲಭೂತ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಯಾವುವು ಮೂಲವಲಯಗಳಿಗೆ, ಕೋರ್‌ಸೆಕ್ಟರ್ ಇವೆ ಅಂಥವುಗಳನ್ನು ಸರ್ಕಾರ ಇಟ್ಟುಕೊಂಡಿದೆ. ಲುಕ್ಸಾನಾದರೂ ಚಿಂತೆಯಿಲ್ಲ ಎಂದು ಕೆಲಸವನ್ನು ಇಟ್ಟುಕೊಳ್ಳಬೇಕಾಗಿದೆ. It is necessary in the interest of the security of the nation and total economic growth. ಅದು ಬಿಟ್ಟರೆ ಎಲ್ಲದಕ್ಕೂ ಪಬ್ಲಿಕ್ ಸೆಕ್ಟರ್ ಮಾಡುತ್ತೇನೆ, ಲುಕ್ಸಾನಾದರೂ ಚಿಂತೆಯಿಲ್ಲ, ಅದನ್ನು ಹೊತ್ತುಕೊಂಡು ಹೋಗಬೇಕು ಅಂದರೆ ಅದನ್ನು ನಾನು ಒಪ್ಪುವುದಿಲ್ಲ. ಹಿಂದಿನ ಸಾರಿ ವಿಕ್ರಾಂತ್ ಟೈರ್ಸ್ ಬಗ್ಗೆ ಸ್ವಲ್ಪ ಅನುಮಾನ ಇತ್ತು. It has come up again. ಮೈಸೂರು ಪೇಪರ್ ಮಿಲ್ಸ್ ಬಗ್ಗೆ ಸ್ವಲ್ಪ ಅನುಮಾನ ಇತ್ತು. ಗವರ್ನಮೆಂಟ್ ಆಫ್ ಇಂಡಿಯಾ ಕನ್ಸೆಷನ್ ಕೊಟ್ಟಿತು. ನಾನೇನು ಇವತ್ತು ಹತಾಶನಾಗಿಲ್ಲ. ಇನ್ನೊಂದು ಎರಡು ವರ್ಷ ಸ್ವಲ್ಪ ಮಳೆ ಬಂದು ವಿದ್ಯುಚ್ಛಕ್ತಿ ಉತ್ಪಾದನೆಯಾಗಿದೆ. ಪವರ್ ಕಟ್ ಇಲ್ಲದೇ ಹಾಗೇ ನಡೆಸಬೇಕು ಎನ್ನುವುದು ನಮ್ಮ ತೀರ್ಮಾನ. This additionality of power supply, ಅಂದರೆ

ರಾಮಗುಂಡಂನಿಂದ ನಮ್ಮ ಷೇರು ಬರುತ್ತದೆ, ಕಲ್ಪಾಕಂನಿಂದ ಷೇರು ಬರುತ್ತದೆ, ರಾಯಚೂರಿನ ಫಸ್ಟ್ ಯೂನಿಟ್ ಕಮಿಷನ್ ಮಾಡಿದೆ, ಸೆಕೆಂಡ್ ಯೂನಿಟ್‌ನ್ನು ೩–೪ ತಿಂಗಳಲ್ಲಿ ಮಾಡುತ್ತೇವೆ, Minimum expectation of additionality of power generation is about 450 MW. ಆದುದರಿಂದ ಇವತ್ತು ಒಂದು ವರ್ಷಕ್ಕೆ ೪½ ಸಾವಿರ ಮಿಲಿಯನ್ ಯೂನಿಟ್ ಕೊರತೆ ಇನಿದೆ. It may come down to 1500 Million Units Next year if mansoon favours us. ಆ ದೃಷ್ಟಿಯಿಂದ ೧೯೮೬–೮೭ರಲ್ಲಿ ಭಯಂಕರ ವಿದ್ಯುಚ್ಛಕ್ತಿ ಕೊರತೆ ಬರುತ್ತದೆ. ಎಂದು ನಾನು ಎಕ್ಸ್‌ಪೆಕ್ಟ್ ಮಾಡುವುದಿಲ್ಲ. ಪ್ರಕೃತಿ ನಮ್ಮನ್ನು ರಕ್ಷಿಸುತ್ತದೆ. ನಮಗೆ ಇಂಡಸ್ಟ್ರಿಯಲ್ ಡಿಮ್ಯಾಂಡ್ ಏನಿದೆ ಅದನ್ನು ಹೆಚ್ಚೂ ಕಡಿಮೆ ಮೀಟ್ ಮಾಡತಕ್ಕ ಸ್ಥಿತಿಗೆ ಬರುತ್ತೇವೆ. ಆಮೇಲೆ ಶ್ರೀನಿವಾಸ್‌ರವರು ಪಾಲಿಸಿಗಳ ಬಗ್ಗೆ ಹೇಳಿದರು. ಅವರು ನ್ಯಾಷನಲ್ ಬ್ಯಾಂಕ್‌ಡ್ರಾಪ್ ಬಗ್ಗೆ ಹೇಳಿದ್ದಾರೆ. ಸ್ಟೇಟ್ ಪಿಕ್ಚರ್ ಹೇಳಿದ್ದಾರೆ, ಅದಕ್ಕೆ ನಾನು ವಂದಿಸುತ್ತೇನೆ. ೧೦೦೦ ಯೂನಿಟ್ ಪರ್ ಮಂತ್ ಆಗುತ್ತದೆ ಎಂದು ಹೇಳಿದಿರಿ, ಸಾವಿರ ಯೂನಿಟ್‌ನ್ನು ಮಾಡುವುದಕ್ಕೆ ಅವನ್ನು ಸ್ಥಾಪನೆ ಮಾಡುವುದಕ್ಕೆ ಹತ್ತು ಹೆಚ್ಚಲ್ಲ, ಹತ್ತು ಕಡಿಮೆಯಲ್ಲ, ಅವುಗಳ ಸಾಧ್ಯತೆಯನ್ನು ಫೀಸಿಬಿಲಿಟಿಯನ್ನು ಏನು ಮಾಡುತ್ತೀರಿ, ಅವು ಬದುಕುತ್ತವೋ ಎನ್ನುವ ಮಾತನ್ನು ಹೇಳಿದರು. ಇದನ್ನು ಸಂಪೂರ್ಣ ಜವಾಬ್ದಾರಿಯಿಂದ ಒಪ್ಪಿಕೊಳ್ಳುತ್ತೇನೆ. ನಾವು ಪ್ರಾರಂಭಮಾಡಿರತಕ್ಕಂಥ ೧೦೦೦ ಯೂನಿಟ್ ಪರ್ ಮಂತ್ ಏನಿದೆ ಅದು ಅವರು ಹೇಳಿದ ರೀತಿಯಲ್ಲಿ ಭಯಾನಕವಾದಂಥ ರೀತಿಯಲ್ಲಿ ಸಿಕ್ ಆಗಿಲ್ಲ. ತಾವು ೧೬೦೦ ಸಿಕ್ ಆಗಿದೆ ಎಂದು ಹೇಳಿದಿರಿ ಅಷ್ಟು ಇಲ್ಲ. ನಾನು ಫಿಗರ್ಸ್ ಕೊಡುತ್ತೇನೆ. ಅಲ್ಲೂ ಇಷ್ಟು, ಮಿಸ್ ಮ್ಯಾನೇಜ್‌ಮೆಂಟ್, ನಾನ್ ಅವೇಲ್‌ಬಿಲಿಟಿ ಆಫ್ ರಾಮೆಟೀರಿಯಲ್ಸ್, ಮಾರ್ಕೆಟಿಂಗ್ ಫೆಸಿಲಿಟೀಸ್ ಇಲ್ಲದಿರುವುದು, ರಾಮೆಟೀರಿಯಲ್ ಕಾಸ್ಟ್ ಪ್ರೈಸ್ ಜಾಸ್ತಿಯಾಗಿರುವುದು ಕಾರಣಗಳಾಗಿವೆ. ಆಮೇಲೆ ಸಣ್ಣ ಕೈಗಾರಿಕೆಗಳನ್ನು ಬೆಳೆಸಲು ಗೊಂಚಲು, ಚಪ್ಪರ ಬೇಕು ಎಂದು ಹೇಳಿದಿರಿ. ಆ ಐಡಿಯಾ ನಾನು ಒಪ್ಪುತ್ತೇನೆ, ಆ ರೀತಿ ಮಾಡಿದ್ದೇನೆ. ಈಗ ಧಾರವಾಡ–ಹುಬ್ಬಳ್ಳಿ, ಒಂದು ಇಂಡಸ್ಟ್ರಿಯಲ್ ಯೂನಿಟ್ ಇದ್ದ ಹಾಗೆ ಹರಿಹರ–ದಾವಣಗೆರೆ, ಭದ್ರಾವತಿ–ಶಿವಮೊಗ್ಗ, ಮೈಸೂರು-ಬೆಂಗಳೂರು. ಬೆಂಗಳೂರು ಚಪ್ಪರ ಏನಿದೆ ಅದನ್ನು ಏನಾದರೂ ಮಾಡಿ ಆ ಕಡೆ ಪ್ರೋಸ್‌ಮಾಡಬೇಕು. ಅಗ್ಲಿ ಗ್ರೋತ್ ಅಂಡ್ ಕಾನ್‌ಸಂಟ್ರೇಷನ್ ಆಫ್ ಇಂಡಸ್ಟ್ರೀಸ್‌ನ್ನು ಕಡಿಮೆ ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದವರಿಗೆ ಮನವಿ ಮಾಡಿದ್ದೇವೆ. ನೀವು ಲೈಸೆನ್ಸ್ ಕೊಡುವಾಗ ಇಂತಹ ಕಡೆ ಎಂದು ನೀವೇ ಕೊಟ್ಟುಬಿಡಬೇಡಿ, ಕೆಲವರು ಇಂತಹ ಕಡೆ ಬೇಕು ಎಂದು ಹೇಳುತ್ತಾರೆ ಅದಕ್ಕೋಸ್ಕರ ನಾವೇ ಹೇಳುತ್ತೇವೆ, ಲೈಸೆನ್ಸ್ ಕೊಡುವುದಾದರೆ ಬ್ಯಾಕ್‌ವಡ್ ಏರಿಯಾಕ್ಕೆ ಕೊಡಿ, ಬೀದರ್‌ಗೆ ಕೊಡಿ, ಗುಲ್ಬರ್ಗಕ್ಕೆ ಕೊಡಿ ಎಂದು ಹೇಳುತ್ತೇವೆ. ಪೊಲ್ಯೂಷನ್ ಪ್ರಾಬ್ಲಂ ಬಗ್ಗೆ ಆ ಮೇಲೆ ಹೇಳುತ್ತೇನೆ. ಸಿಮೆಂಟ್ ಇಂಡಸ್ಟ್ರಿ ಕನ್ಸಡರಬಲ್ ಗ್ರೋತ್ ಆಗಿದೆ Not only Cement but soap sugar and paper also. ಇವು ನಾಲ್ಕೂ ನಮ್ಮ ರಾಜ್ಯದಲ್ಲಿ ವೃದ್ಧಿಯಾಗಿದೆ. ಆಮೇಲೆ ಕೆಎಸ್‌ಎಫ್‌ಸಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ ಎಂದು ಹೇಳಿದಿರಿ. ಇದರ ಬಗ್ಗೆ ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ. ೧೨೦ ಕೋಟಿ ರೂಪಾಯಿ ಡಿಸ್‌ಬರ್ಸ್‌ಮೆಂಟ್ ಮಾಡಿದ್ದಾರೆ. No financial institution in the country has done such a thing. ಎಷ್ಟು ಯೂನಿಟ್ಸ್ ಕೆಲಸ ಮಾಡುತ್ತಿದೆ, ಎಷ್ಟು ಪ್ರೊಡಕ್ಷನ್ ಬಂದಿದೆ ಎನ್ನುವ ವಿವರಗಳನ್ನು ಕೊಡುತ್ತೇನೆ. It has done very well. ಕೆ.ಎಸ್.ಐ.ಐ.ಡಿ.ಸಿ. ಐಡಿಬಿಐ ನವರು ಅವರ ನೀತಿಯನ್ನು ಬದಲಾವಣೆ ಮಾಡಿದ್ದಾರೆ. ನಾವು ೧೦೦ ಕೊಟ್ಟರೆ ೮೫ ರಿಫೈನಾನ್ಸ್ ಮಾಡುತ್ತಿದ್ದರು, ೮೫ ಮಾಡಿದರೆ ೬೫ ಮಾಡುತ್ತಿದ್ದರು. ಕೆಎಸ್‌ಐಐಡಿಸಿ. ತಮ್ಮ ರಿಸೋರ್ಸ್ ೧೫ ಮಾತ್ರ ಹಾಕಬೇಕಾಗಿತ್ತು. ಈಗ ೩೫ ಇಂಟರ್‌ನ್ಯಾಷನಲ್ ರಿಸೋರ್ಸ್ ಮೊಬಲೈಸೇಷನ್ ಮಾಡಿದ್ದಾರೆ, ಬಹಳ ಕಷ್ಟವಾಗುತ್ತದೆ ಆದುದರಿಂದ ಐಡಿಬಿಐನವರು ತಮ್ಮ ಧೋರಣೆ ಬದಲಾವಣೆ ಮಾಡಬೇಕು ಎಂದು ರಾಜ್ಯ ಸರ್ಕಾರ ಅವರಿಗೆ ಒತ್ತಾಯ ಮಾಡುತ್ತದೆ. ಆಮೇಲೆ ಸಿಂಗಲ್‌ವಿಂಡೊ ಏಜನ್ಸಿ ಬಗ್ಗೆ ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. It is not available for small scale industries. This is only for medium and large industries. ಆಗ್ರೋ ಬೇಸ್ಡ್ ಪ್ರಾಡಕ್ಟ್ಸ್ ಇಂಡಸ್ಟ್ರೀಸ್ ಏನಿದೆ ಈಗ ನಮ್ಮ ಉದ್ದೇಶ ಅದೇ. ಕಾರ್ಖಾನೆಗಳು ಮೂಲ ವಸ್ತುವಿಗೆ ಆದಷ್ಟು ಹತ್ತಿರ ಇರಬೇಕು. ಕಚ್ಚಾವಸ್ತುಗಳಿಗೆ ಹತ್ತಿರವಾಗಿ ಕಾರ್ಖಾನೆ ಇದ್ದರೆ ಹಲವಾರು ಸಮಸ್ಯೆಗಳು ಬಗೆಹರಿಯುತ್ತವೆ. ಸ್ವಾತಂತ್ರ್ಯ ಪೂರ್ವ ದಿವಸಗಳ ಒಂದು ಕಲ್ಪನೆಯಲ್ಲೇ ನಾವು ಹೋಗುತ್ತಾ ಇದ್ದೇವೆ. ಅಲ್ಲಿ ಲಿವರ್‌ಪೂಲ್‌ನಲ್ಲಿ ಬಟ್ಟೆ ನೋಡಿಕೊಂಡು

ನಮ್ಮ ಹತ್ತಿಯನ್ನು ಅಲ್ಲಿಗೆ ಕಳಿಸುವುದು ಎಂದು ಇನ್ನೂ ಒಳ್ಳೊಳ್ಳೆಯ ಮಾತನ್ನು ಹೇಳಿದ್ದಾರೆ. ನಮ್ಮ ನ್ಯಾಚುರಲ್ ರಿಸೋರ್ಸಸ್ ಯಾವುದು ಇದೆ, ಭೂಗರ್ಭದಲ್ಲಿ ಅಡಗಿರತಕ್ಕ ಯಾವುದೇ ಖನಿಜವಾಗಲಿ. ಯಾವುದೇ ಸಂಪತ್ತಾಗಲಿ ಅದನ್ನು ನಾವೇ ಪರಿವರ್ತಿಸಿಕೊಳ್ಳುವುದಕ್ಕೆ ಸಾಧ್ಯವಾಗದೇ ಇರುವ ಹಾಗೆ ನಮ್ಮನ್ನು ನಾವೇ ದುರ್ಬಲ ಮಾಡಿಕೊಂಡು ನಮ್ಮ ಕಚ್ಚಾವಸ್ತುಗಳನ್ನು ಬೇರೆಬೇರೆ ದೇಶಗಳಿಗೆ ಕೊಟ್ಟು ಅಲ್ಲಿ ತಯಾರುಮಾಡಿದ ವಸ್ತುಗಳನ್ನು ಕೊಂಡುಕೊಳ್ಳತಕ್ಕ ಪದ್ಧತಿ ಇದೆ. ಹತ್ತಿಯನ್ನು ಲಿವರ್‌ಪೂಲಿಗೆ ಕಳಿಸಿ ಅಲ್ಲಿಂದ ಟ್ವಿಲ್ಸ್ ಬಟ್ಟೆ ತೆಗೆದುಕೊಂಡು ಎಂಜಾಯ್ ಮಾಡುತ್ತೇವೆ. ನಮ್ಮ ಗ್ರಾನೈಟ್‌ನ್ನು ಜಪಾನಿಗೆ ಕಳಿಸಿ ಪಾಲಿಷ್ ಮಾಡಿ ನಮ್ಮ ಮನೆಗಳಿಗೆ ಹಚ್ಚಿಕೊಳ್ಳತಕ್ಕ ಪದ್ಧತಿ ಇದೆ. This is called imperialism. Nobody can march the army now a-days. In is just impossible. ಈಗ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಯಾವುದೇ ಸಿದ್ಧಾಂತ ಇರಲಿ, ಆ ರಾಷ್ಟ್ರಗಳು ಸೈನ್ಯದ ಮೂಲಕ ಇತರೆ ರಾಷ್ಟ್ರಗಳನ್ನು ಗೆಲ್ಲುವುದಕ್ಕೆ ಆಗದೇ ಇರುವುದರಿಂದ ಈಗ ವ್ಯಾಪಾರದ ಮೂಲಕ ಎಕ್ಸ್‌ಚೇಂಜ್ ವ್ಯಾಲ್ಯುಗಳನ್ನು ಹೆಚ್ಚು ಮಾಡುವುದರ ಮೂಲಕ ಮತ್ತು ಇದರಿಂದ ನಮ್ಮ ಬಲವನ್ನು ಕಡಿಮೆ ಮಾಡುವುದರ ಮೂಲಕ ಗೆಲ್ಲುತ್ತಾರೆ. ಅಂದರೆ ಕೊಕಕೋಲ ಫ್ಯಾಕ್ಟರಿಯಲ್ಲಿ ಅಥವಾ ಯಾವುದೋ ಮಿಷನ್ ಫ್ಯಾಕ್ಟರಿಯಲ್ಲಿ ಅಥವಾ ಅಮೆರಿಕಾದಲ್ಲಿ, ಒಬ್ಬ ವರ್ಕರ್‌ಗೆ ಡಿವಿಡೆಂಡ್, ಬೋನಸ್ ಜಾಸ್ತಿ ಕೊಡಬೇಕು ಅಂದರೆ ಇಲ್ಲಿ ಇಂಡಿಯಾದಲ್ಲಿ ಹಾಗೂ ಪಾಕಿಸ್ತಾನದಲ್ಲಿರತಕ್ಕ ವರ್ಕರ್ಸ್ ಕಡಿಮೆ ತೆಗೆದುಕೊಳ್ಳಬೇಕು...

ಇವನು ಕಡಿಮೆ ತೆಗೆದುಕೊಂಡರೆ ಮಾತ್ರ ಅಮೇರಿಕದವನಿಗೆ ಜಾಸ್ತಿ ಬೋನಸ್ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಕಾರ್ಮಿಕರು, ನಮ್ಮ ರೈತ ನಮ್ಮ ನಾಡಿನ ದುಡಿಮೆಗಾರರು. ಅವರನ್ನು ಎಷ್ಟರ ಮಟ್ಟಿಗೆ ಎಕ್ಸ್‌ಪ್ಲಾಯ್ಟ್ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು ಇಂಡಸ್ಟ್ರೀ ಸೆಂಟರ್ ಬಗ್ಗೆ ಹೇಳಿದ್ದೀರಿ. ನಾಯಿಂದ ಟ್ರೈನಿಂಗ್ ಸ್ಕೂಲ್ ಅನ್ನು ನೋಡಿಕೊಂಡು ಬರಬೇಕೆಂದೂ ಹೇಳಿದ್ದೀರಿ, ಅದನ್ನು ನೋಡಿಕೊಂಡು ಬರುತ್ತೇನೆ. ಕೇಂದ್ರದಲ್ಲಿ ಮಾನ್ಯ ವಿ.ಪಿ. ಸಿಂಗ್ ರವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಈಗಾಗಲೇ ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಡೆವಲಪ್‌ಮೆಂಟ್‌ನಲ್ಲಿ ಒಂದು ಸರಿಯಾದ ಹೆಜ್ಜೆಯನ್ನು ನಮ್ಮ ರಾಜ್ಯ ಸರ್ಕಾರದವರು ಇಟ್ಟಿದ್ದಾರೆ. ಈಗ ಹೊಸದಾಗಿ ಕೇಂದ್ರ ಸರ್ಕಾರದವರು ಷುಗರ್‌ಕೆನ್ ಡೆವಲಪ್‌ಮೆಂಟ್ ಬಗ್ಗೆ ಒಂದು ಫಂಡ್ ಅನ್ನು ಮಾಡಿದ್ದಾರೆ. ಅದನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಬೇಕು. ಈ ಬಗ್ಗೆ ನಮ್ಮ ಅಭಿನಂದನೆಯನ್ನು ಕಳಿಸಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ವಿ.ಪಿ. ಸಿಂಗ್‌ರವರು ತಮ್ಮ ಬಡ್ಜೆಟ್. ಭಾಷಣದಲ್ಲಿ ಹೇಳಿದಂತಹ ಕೆಲವೊಂದು ಮಾತನ್ನು ಮಾತ್ರ ಹೇಳಿದ್ದೆ. ಇನ್ನೂ ಕೆಲವೊಂದನ್ನು ಹೇಳುವುದಕ್ಕೆ ಸಾಧ್ಯವಾಗಲಿಲ್ಲ. ಹೋದ ವರ್ಷ ಮತ್ತು ಈ ವರ್ಷ ಕೇಂದ್ರ ಸರ್ಕಾರದ ನೀತಿಯಲ್ಲಿ ಬಹಳ ಒಳ್ಳೆಯ ಪದ್ಧತಿ ಬಂದಿದೆ. ತಾವು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಏನು ಗೊತ್ತು ಗುರಿಗಳನ್ನು ಇಟ್ಟುಕೊಂಡಿದ್ದೀರೋ, ಆ ಚೌಕಟ್ಟಿನ ಒಳಗೆ ಇದನ್ನು ಪಡೆದುಕೊಳ್ಳಬೇಕಾದುದರಿಂದ ನಿಮ್ಮ ಪಾಲಿಸಿ ಬಗ್ಗೆ ಗೊತ್ತುಪಡಿಸಿರುವುದು ಏನು ಇದೆ, ಅದನ್ನು ಇನ್ನೊಂದು ಸಾರಿ ಇತ್ತೀಚಿನ ಕೇಂದ್ರಸರ್ಕಾರದ ನಿರ್ಧಾರಗಳ ಹಿನ್ನೆಲೆಯಲ್ಲಿ ಪರಿಷ್ಕರಿಸಿಕೊಳ್ಳಬೇಕೆಂದು ನಮ್ಮ ಮೂಲಭೂತ ಸಲಹೆ.

ಶ್ರೀ ಜೆ.ಹೆಚ್. ಪಟೇಲ್,— ಆ ಸಲಹೆಯನ್ನು ಹೇಗೆ ಇಂಪ್ಲಿಮೆಂಟ್ ಮಾಡಿ ಆಚರಣೆಗೆ ತರಬೇಕೆಂದು ಯೋಚನೆ ಮಾಡಿ ಹೇಳುತ್ತೇನೆ. ಕೇನ್ ಡೆವಲಪ್‌ಮೆಂಟ್ ಫಂಡ್ ಎಂದು ಏನು ಮಾಡಿದ್ದಾರೆ. ಅದು ಬಹಳ ಒಳ್ಳೆಯದು. ಷುಗರ್ ಕೇನ್ ಅನ್ನು ಡೆವಲಪ್‌ಮೆಂಟ್ ಮಾಡದೇ ಹೋದರೆ, ಈ ಇಂಡಸ್ಟ್ರೀ ಉಳಿಯುವುದಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರದವರು ಸಾಕಷ್ಟು ಕ್ರಮ ಕೈಗೊಂಡಿದ್ದಾರೆ. ಇನ್ನು ಬಿ.ಹೆಚ್.ಇ.ಎಲ್. ಹಾಗೂ ಎನ್.ಜಿ.ಇ.ಎಫ್, ಫ್ಯಾಕ್ಟರಿ ಬಗ್ಗೆ ಹೇಳಿದ್ದೀರಿ. ವಿ.ಐ.ಎಸ್.ಎಲ್. ಬಗ್ಗೆ ಸ್ಪಷ್ಟವಾಗಿ ಏನು ಮಾಡಬೇಕೆಂದು ಹೇಳಿಲ್ಲ. ವಿ.ಐ.ಎಸ್.ಎಲ್. ನಲ್ಲಿ ೧೧ ಸಾವಿರ ಕೆಲಸಗಾರರಿದ್ದಾರೆ ೮–೧೦ ಪರ್ಸೆಂಟ್ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಆಗುತ್ತಿಲ್ಲ. ಇದನ್ನು ನಾವು ಯಾರಿಗೂ ಮಾರಾಟ ಮಾಡುವುದಿಲ್ಲ. ಆದರೆ ಇದಕ್ಕೆ ಹೇಗೆ ಜೀವ ತುಂಬಬೇಕು ಎಂಬುದರ ಯೋಚನೆ ಮಾಡುತ್ತಿದ್ದೇವೆ. ಆಕಸ್ಮಿಕವಾಗಿ ಯಾರಿಂದಲೂ ಧನ ಸಹಾಯ ಟೆಕ್ನಾಲಜಿ ಸಹಾಯ, ಅಡ್ವೈಸ್ ಬಂದರೆ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳದೇ. ಇದನ್ನು

ಉದ್ಧಾರ ಮಾಡದೇ ಹಾಗೇ ಇಟ್ಟುಕೊಂಡು ಕೂತುಕೊಳ್ಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಯಾವ ಕಡೆಯಿಂದಲಾದರೂ ಧನ ಸಹಾಯ ಬಂದರೆ ಟೆಕ್ನಾಲಜಿ ಸಹಾಯದಿಂದ ಮತ್ತೆ ಅದನ್ನು ಪ್ರಾರಂಭ ಮಾಡತಕ್ಕಂತಹ ಅಸಿಸ್ಟೆಂಟ್ ಬಂದರೆ, ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಇನ್ನು ಮೈಸೂರ್ ಪೇಪರ್ ಮಿಲ್ಸ್ ಬಗ್ಗೆ ಹೇಳಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಕೆ.ಹೆಚ್, ಶ್ರೀನಿವಾಸ್.— In the Seventy Five year plan objectives emphasis was laid on improving the performance of the publice undertakings with focus on upgradation of technology. moderni-sation and better utilisation of assets and increse in productivity. ಆ ದೃಷ್ಟಿಯಿಂದ ಇನ್ನಾದರೂ ಕೂಡ ವಿ.ಎಸ್.ಐ.ಎಲ್. ಗೆ ಬೇಕಾಗಿರತಕ್ಕಂತಹ ಹೊಸ ಅಸಿಸ್ಟೆನ್ ಆಗಲೀ ಇಲ್ಲವೇ ಬೇರೆ ಯಾವುದಾದರೂ ಒಂದು ದಾರಿಯಾಗಲೀ ಸಿಗುವ ಸಾಧ್ಯತೆ ಇದ್ದರೆ, ಆ ಕಡೆ ಲಕ್ಷ್ಯ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್,— ಪ್ರಯತ್ನದಲ್ಲಿದ್ದೇವೆ. ಕಳೆದ ವರ್ಷ ನಿರಾಶೆಯಾಗಿತ್ತು. ಈಗ ಸ್ವಲ್ಪ ಆಸೆ ಬಂದಿದೆ. ಈ ಬಗ್ಗೆ ಮತ್ತೊಮ್ಮೆ ಕೇಂದ್ರ ಸರ್ಕಾರದೊಡನೆ ವ್ಯವಹಾರವನ್ನು ಪ್ರಾರಂಭ ಮಾಡುತ್ತೇವೆ. ಮೈಸೂರ್ ಪೇಪರ್ ಮಿಲ್ಸ್‌ಗೋಸ್ಕರ ಎಕ್ಸ್‌ಪ್ಯಾನ್‌ಷನ್ ಪ್ರಾಜೆಕ್ಟ್ ಮಾಡ ತಕ್ಕಂಥಾದ್ದು ಟೆಕ್ನಿಕಲೀ ಬೇಸಿಕಲೀ ತಪ್ಪೆಂದು ಜನರಲ್ ಆಗಿ ಹೇಳಿದರೆ ನಾನು ಒಪ್ಪುವುದಿಲ್ಲ. ಉದ್ದಿಮೆಯನ್ನು ಹಿಂದೆ ಯಾವ ಗಾತ್ರದಲ್ಲಿತ್ತೋ ಅದೇ ಗಾತ್ರದಲ್ಲಿ ಹಾಗೇ ಇಟ್ಟುಕೊಂಡು ಚೊಕ್ಕದಾಗಿ, ಚಿಕ್ಕದನ್ನಾಗಿ ಉಳಿಸಿಕೊಳ್ಳಬಹುದು. ಉದಾಹರಣೆಗೆ ಹೋಟೆಲ್ ಇಂಡಸ್ಟ್ರೀಯನ್ನೇ ಇಟ್ಟುಕೊಳ್ಳಿ, ಹಿಂದೆ ಮೈಸೂರಿನಲ್ಲಿ ಸೆಟ್ ದೋಸೆ ಹೋಟೆಲ್ ಇತ್ತು. ಅದು ಈಗ ಇಲ್ಲ. ಆ ಹೋಟೆಲ್ ಚಿಕ್ಕದಾಗಿತ್ತು, ಆದು ಎಕ್ಸ್‌ಪ್ಯಾಂಡ್ ಆಗಲಿಲ್ಲ. ಅವನಿರುವವರೆಗೂ ಬೇರೆ ಹೋಟಲ್ ಆಗಲಿಲ್ಲ. ಈಗ ಇಲ್ಲಿ ಎಂ.ಟಿ.ಆರ್ ಹೋಟೆಲ್ ಅನ್ನು ಎಕ್ಸ್‌ಪ್ಯಾಂಡ್ ಮಾಡುವುದಕ್ಕೆ ಹೋದರೆ ಕೆಡಬಹುದು.

ಶ್ರೀ ಕೆ.ಹೆಚ್. ಶ್ರೀನಿವಾಸ್. — ನಾನು ಕೇಳಿದೆ ಎಂ.ಟಿ.ಆರ್.ರವರನ್ನು ಇನ್ನೊಂದು ಬ್ರಾಂಚ್ ಏಕೆ ಮಾಡಬಾರದು ಎಂದು. ಅದಕ್ಕೆ ಅವರು ಹೇಳಿದರು, ನಾನು ಮಾಡುವುದಿಲ್ಲ. ಈ ಸ್ಟ್ಯಾಂಡರ್ಡ್ ನಂತೆ ಬೇರೆ ಹೊಟೇಲ್‌ಗಳನ್ನು ಮಾಡಬೇಕಷ್ಟೇ. ನಾನು ಮಾಡಿದರೆ ಕೆಡುತ್ತದೆ ಎಂದು ಹೇಳಿದರು.

ಶ್ರೀ ಜೆ. ಹೆಚ್. ಪಟೇಲ್ — ಎಕ್ಸ್‌ಪ್ಯಾಂಡ್ ಮಾಡುವುದಕ್ಕೆ ಹೋದರೆ ಸ್ಟ್ಯಾಂಡರ್ಡ್ ಕೆಡಬಹುದು. ಕೆಲವೊಂದು ಕಡೆ ಸ್ಟ್ಯಾಂಡರ್ಡ್ ಇರಬಹುದು. ಕೆಲವೊಂದು ಗುಡಿ ಕೈಗಾರಿಕೆಗಳು, ಹ್ಯಾಂಡಿ ಕ್ರಾಫ್ಟ್‌ಗಳು ಇವೆ. ಈ ಕೆಲವು ಇಂಡಸ್ಟ್ರೀಸ್‌ಗಳು ಚಿಕ್ಕದಾಗಿ ಚೊಕ್ಕವಾಗಿ ಇರುತ್ತದೆ. ದೊಡ್ಡದಾಗಿ ಮಾಡಲು ಹೊರಟರೆ ಕೆಡುತ್ತದೆ. Small is a beautiful. ಯಾವ ರೀತಿ ಈ ದೈತ್ಯಾಕಾರದ ಇಂಡಸ್ಟ್ರೀಸ್‌ಗಳು ಬೆಳೆದುಕೊಂಡು ಹೋಗುತ್ತಿದೆಯೆಂದರೆ, ಡೈನಾಸಿಡಿಯು ತರಹ ತನ್ನ ಭಾರಕ್ಕೆ ಹೇಗೆ ತಾನೇ ಬಿತ್ತೋ ಅದೇ ರೀತಿ ಇವು ತಮ್ಮ ಭಾರಕ್ಕೆ ತಾವೇ ಸಾಯುತ್ತವೆ. ಈ ಜಾಯಿಂಟ್ ಇಂಡಸ್ಟ್ರೀಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಮಾನವ ಕೋಟಿಯನ್ನು ಸುಡುವ ಪ್ರಸಂಗ ಬರಬಹುದು. ಮೈಸೂರ್ ಪೇಪರ್ ಮಿಲ್ ಎಕ್ಸ್‌ಪ್ಯಾನ್‌ಷನ್ ಅನ್ನು ಅದಕ್ಕೆ ಹೋಲಿಸುವುದಿಲ್ಲ. ಮೈಸೂರ್ ಪೇಪರ್ ಮಿಲ್ ಎಕ್ಸ್‌ಪ್ಯಾಷನ್‌ಗೆ ಟೆಕ್ನಾಲಜಿ ಅವಶ್ಯಕ ಮತ್ತು ಮುಖ್ಯ. ಇದು ೧೬೫ ಕೋಟಿ ಇಂಡಸ್ಟ್ರೀ. ಅಲ್ಲಿ ೯ ಕೋಟಿಯ ಷುಗರ್ ಫ್ಯಾಕ್ಟರಿಯನ್ನು ಇಟ್ಟುಕೊಂಡು ಅದಕ್ಕೆ ೩೫ ಪರ್ಸೆಂಟ್‌ನಷ್ಟು ರಾ ಮೆಟೀರಿಯಲ್ ಅನ್ನು ತಾನು ಒದಗಿಸಿಕೊಳ್ಳುತ್ತಿದೆ. ಅದು ಒಂದು ನ್ಯೂಸ್–ಪ್ರಿಂಟ್ ಪ್ರಾಜೆಕ್ಟ್, It is a right step they have taken. ಇದು ಒಂದೇ ವರ್ಷದಲ್ಲಿ ಮೈಸೂರ್ ಪೇಪರ್ ಮಿಲ್‌ನವರು ೪೦ ಕೋಟಿ ಫಾರಿನ್ ಎಕ್ಸ್‌ಚೇಂಜನ್ನು ಸೇವ್ ಮಾಡಿದ್ದಾರೆ. ಈ ಸಹಾಯವನ್ನು ಕೇಂದ್ರ ಸರ್ಕಾರದವರು ಅರ್ಥ ಮಾಡಿಕೊಳ್ಳಬೇಕು. ಇದನ್ನು ನಾನು ಪೊಲಿಟಿಕಲ್ ರೀಸನ್ಸ್‌ನಿಂದ ಹೇಳುತ್ತಿಲ್ಲ. ನಮ್ಮ ದೇಶದಲ್ಲಿ ಕಾಗದ ಕಾರ್ಖಾನೆಗಳು ಎಷ್ಟು ಪವರ್ ಫುಲ್ ಆಗಿದೆ ಎಂಬುದನ್ನು ನೋಡಬೇಕು. ನಾಲ್ಕೇ ನಾಲ್ಕು ನ್ಯೂಸ್ ಪ್ರಿಂಟ್ ಕಾರ್ಖಾನೆಗಳು ಇರುವುದು ಪಬ್ಲಿಕ್ ಸೆಕ್ಟರ್‌ನಲ್ಲಿ. ಅದರಲ್ಲಿ ತಮಿಳು ನಾಡು ಪಬ್ಲಿಕ್‌ಸೆಕ್ಟರ್. ನಮ್ಮದು ಹಿಮಾಚಲ ಪ್ರದೇಶದ್ದು. ಕಾಗದದ ಬೆಲೆಯನ್ನು ಹೆಚ್ಚು ಮಾಡದೇ ಇರುವುದರಿಂದ ಅವೆಲ್ಲಾ ಲುಕ್ಸಾನ್ ಆಗಿರುವಂಥಾದ್ದು ಇದೆ. ಆರು ತಿಂಗಳ ಕೆಳಗೆ ೬೦೦ ರೂಪಾಯಿ ಯನ್ನು ಜಾಸ್ತಿ ಮಾಡಿದ್ದಾರೆ. ಇನ್ನು ಕೆಲವು ತಿಂಗಳಲ್ಲಿ ಮತ್ತೆ ಜಾಸ್ತಿ ಮಾಡುವ ಸಂಭವ ಇದೆ. ಮಾಡಿದರೆ, ಮೈಸೂರು ಪೇಪರ್ ಮಿಲ್ ಕಾರ್ಖಾನೆಯಲ್ಲಿ ಹೆಚ್ಚು ಪ್ರಾಫಿಟ್ ಬರುತ್ತದೆ. ಇದು

ಬಹಳ ದೊಡ್ಡ ಕಾರ್ಖಾನೆ. ಮಾನ್ಯ ಕೃಷ್ಣನ್‌ರವರು ಹೇಳಿದರು ಪಬ್ಲಿಕ್ ಸೆಕ್ಟರ್‌ಗಳನ್ನು ಪಬ್ಲಿಕ್ ಸೆಕ್ಟರ್‌ಗಳೆಂದು ಹೇಳುವುದಕ್ಕೆ ಬರುವುದಿಲ್ಲ ಎಂದು. ಪಬ್ಲಿಕ್ ಸೆಕ್ಟರ್‌ನಲ್ಲಿ ಹೊಣೆಗಾರಿಕೆ ಇಲ್ಲವೆಂದು ಎಲ್ಲರೂ ಹೇಳುತ್ತಾರೆ. ಪಬ್ಲಿಕ್‌ಸೆಕ್ಟರ್‌ನಲ್ಲಿ ಯಾರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ, ಆ ಕಾರ್ಖಾನೆ ಲುಕ್ಸಾನ್ ಆದರೆ. ಅವನನ್ನು ಟ್ರಾನ್ಸ್‌ಫರ್ ಮಾಡುತ್ತೇವೆ. ಅಕೌಂಟಬಲಿಟಿ ಇಲ್ಲ. ಇಲ್ಲವೇ ಯಾವುದಾದರೂ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್‌ನಲ್ಲಿ ಲಾಭ ಬಂದರೆ ಆ ಆಫೀಸರ್‌ಗೆ ಶಿಫಾರಸ್‌ಗಿರಿ ಇಲ್ಲ. ಲುಕ್ಸಾನ್ ಮಾಡಿದರೆ, ಅಕೌಂಟಬಲಿಟಿ ಇಲ್ಲ, ಚೆನ್ನಾಗಿ ದುಡಿದವನಿಗೆ ಒಂದು ಮೆಚ್ಚುಗೆ ಮಾತು ಇಲ್ಲ. Public Undertakings of Central Government, our Government or any other Government Public Undertakings, this is the position. ಕಳೆದ ಸಾರಿ ನಾನು ಏನು ಹೇಳಿದ್ದೆನೆಂದರೆ. ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್‌ನಲ್ಲಿ. ಕಾರ್ಖಾನೆಗಳ ಬಗ್ಗೆ ಯಾರಿಗೆ ಮಾಹಿತಿ ಇದ್ದು ಅವುಗಳನ್ನು ಮುಂದುವರಿಸಿಕೊಂಡು ಹೋಗತಕ್ಕಂತಹ ತಂತ್ರಜ್ಞತೆ ಇರುತ್ತದೆ, ಆಸಕ್ತಿ ಇರುತ್ತದೆ, ಅಂತಹವರನ್ನು ಇಂಡಸ್ಟ್ರಿಯಲ್ ಕೇಡರ್ ಮಾಡಬೇಡಬೇಕೆಂದು ಕೇಂದ್ರ ಸರ್ಕಾರದಲ್ಲಿ ಆ ವಿಚಾರ ಇದೆಯೋ ಎಂದು ತಿಳಿದುಕೊಂಡೆ. ಕೇಂದ್ರ ಸರ್ಕಾರದಲ್ಲಿ ಅದು ಇಲ್ಲ.

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ನಮ್ಮ ಸರ್ಕಾರದಲ್ಲೂ ೨-೩ ಸಾರಿ ಪ್ರಯತ್ನ ಮಾಡಿ ಅದು ವಿಫಲವಾಯಿತು. ಇವತ್ತು ಕೇಂದ್ರ ಸರ್ಕಾರದಲ್ಲಿ ಏನಾಗಿದೆ ಅಂದರೆ ಯಾರಾದರೂ ಐ. ಎ. ಎಸ್. ಆಫೀಸರುಗಳು ಕೈಗಾರಿಕೆಗಳಿಗೆ ಹೋದರೆ, ಅಲ್ಲಿ ಎರಡು ವರ್ಷ ಮುಂದುವರಿಯುತ್ತಾರೆ, ಅವರು ಮೇಯಿನ್ ಸರ್ವೀಸ್‌ಗೆ ಬರುವುದಿಲ್ಲ ಎಂದು ಹೇಳುವುದಕ್ಕೆ ಆಪ್ಷನ್ ಇದೆ. ಆದರೆ, ಬಹಳ ಜನ ಅಧಿಕಾರಿಗಳು ಮೇಯಿನ್ ಸರ್ವೀಸ್‌ಗೆ ಬರುವುದಕ್ಕೆ ಇಚ್ಛೆಪಡುತ್ತಾರೆ. ಆಲ್ ಇಂಡಿಯಾ ಪ್ಯಾಟ್ರನ್‌ಗೂ ರಾಜ್ಯದಲ್ಲಿರತಕ್ಕ ಅಡ್ಮಿನಿಸ್ಟ್ರೇಷನ್ ಪ್ಯಾಟ್ರನ್‌ಗೂ ಇದೇ ವ್ಯವಸ್ಥೆ ಇದೆ. ಈ ವಿಚಾರದಲ್ಲಿ ಇಲಾಖೆಯ ಕಾರ್ಯದರ್ಶಿಯವರಿಗೂ, ಸ್ಟೇಟ್ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನವರಿಗೂ ಏನು ಹೇಳಿದ್ದೇವೆಂದರೆ, ಇವತ್ತು ರಾಜ್ಯದಲ್ಲಿ ೨೦೦-೩೦೦ ಜನ ಅಧಿಕಾರಿಗಳು ಇಂಡಸ್ಟ್ರೀಸ್‌ಗಳನ್ನು ಮ್ಯಾನೇಜ್ ಮಾಡಿಕೊಂಡು ಹೋಗುತ್ತಿದ್ದಾರೆ. ಇವರ ಪೈಕಿ ಯಾರು ಆಸಕ್ತಿಯಿಂದ, ಸ್ವಂತ ಎಬಿಲಿಟಿಯಿಂದ ಮುಂದುವರಿದುಕೊಂಡು ಹೋಗುವವರನ್ನು ಒಳಗೊಂಡಂತೆ ಒಂದು ಸೆಲೆಕ್ಟೆಡ್ ಕೇಡರ್ ಮಾಡಬೇಕೆಂದೂ, ಉದ್ಯಮಗಳನ್ನು ನಡೆಸುವಂಥ ಮ್ಯಾನೇಜ್‌ಮೆಂಟ್ ಪೂಲ್ ಮಾಡಬೇಕೆಂದು, ವಿಶಿಷ್ಟ ಜವಾಬ್ದಾರಿ ಹೊರುವಂಥ ಅಧಿಕಾರಿಗಳ ಒಂದು ಗ್ರೂಪ್ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಈಗಾಗಲೇ ಹೆಜ್ಜೆಗಳನ್ನು ಇಟ್ಟಿದ್ದೇವೆ. ಸ್ಟೇಟ್ ಬ್ಯೂರೋ ಆಫ್ ಪಬ್ಲಿಕ್ ಎಂಟರ್ ಪ್ರೈಸಸ್ ಈ ಬಗ್ಗೆ ಕೆಲಸ ಮಾಡುತ್ತಿದೆ. ಇನ್ನು ಬ್ಯಾಂಕಿಂಗ್ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದೀರಿ. ಇದು ಒಟ್ಟು ಅರ್ಥದಲ್ಲಿ ಸರಿಯಾಗಿದೆ. ಇದು ಕೊಟ್ಟೋನು ಕೋಡಂಗಿ, ಈಸಿಕೊಂಡುವ ಈರಭದ್ರ ಎನ್ನುವಂತೆ ಆಗಿದೆ. ಇವತ್ತು ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಕಾರ್ಖಾನೆಗಳಿಗೆ ಹಾಕಿ ದುಡಿದಿದ್ದೆಲ್ಲಾ ಬ್ಯಾಂಕಿಗೆ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಯಾರು ತೆಗೆದುಕೊಂಡಂಥ ಸಾಲವನ್ನು ಕ್ಲುಪ್ತಕಾಲದಲ್ಲಿ ಉಪಯೋಗ ಮಾಡಿಕೊಂಡು ಆದರಿಂದ ಉತ್ಪಾದನೆ ಮಾಡಿ ವಾಪಸ್ಸು ಕಟ್ಟುತ್ತಾ ಬಂದಿದ್ದಾರೆ, ಅಂಥವರಿಗೆ ಬ್ಯಾಂಕುಗಳು ಹೊರೆಯಾಗಿಲ್ಲ. ನೀವು ಹೇಳುವ ಅರ್ಥದಲ್ಲಿ ಎಲ್ಲರೂ ದುಡಿಯುವುದು ಬ್ಯಾಂಕಿಗೆ ಎನ್ನುವಂತಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಕ್ರೆಡಿಟ್ ಡಿಪಾಸಿಟ್ ರೇಷಿಯೋ ಪ್ರಕಾರ ನಾವು ರಾಷ್ಟ್ರದಲ್ಲಿಯೇ ೨ನೇ ಸ್ಥಾನದಲ್ಲಿದ್ದೇವೆ. ನಮ್ಮ ಜನ ಎಷ್ಟು ಡಿಪಾಸಿಟ್ ಇಟ್ಟಿದ್ದಾರೆ, ನಾವು ಎಷ್ಟು ಬಳಸಿ ಕೊಂಡಿದ್ದೇವೆನ್ನುವುದನ್ನು ಲೆಕ್ಕ ಹಾಕಿದರೆ, ಇದರಲ್ಲಿ ಯಾವ ಸಮಸ್ಯೆಯೂ ಕೂಡ ಕಂಡುಬರುತ್ತಿಲ್ಲ. ಕೆಲವು ಪ್ರಾಜೆಕ್ಟ್‌ಗಳಲ್ಲಿ ಇರತಕ್ಕ ತೊಂದರೆಯನ್ನು ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ಇನ್ನು ಮಾನ್ಯ ಸದಸ್ಯರಾದ ರಾಜೂಗೌಡರು ವರ್ಕ್‌ಷೆಡ್ ಚೆನ್ನಾಗಿಲ್ಲವೆಂದೂ ಇವುಗಳ ನಿರ್ಮಾಣ ಕಾರ್ಯದಲ್ಲಿ ಮಿಸ್‌ಯೂಸ್ ಆಗುತ್ತದೆಂದು ಹೇಳಿದ್ದಾರೆ. ಅದರ ಬಗ್ಗೆ ವಿಚಾರ ಮಾಡುತ್ತೇನೆ. ಮಾನ್ಯ ನಂಜಯ್ಯನಮಠ್‌ರವರು ಹ್ಯಾಂಡ್‌ಲೂಂ ಮತ್ತು ಖಾದಿ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದಾರೆ, ಮಾನ್ಯ ಹಿರೇ ರೆಡ್ಡಿಯವರು ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳು ತಾಲ್ಲೂಕು ಮಟ್ಟದಲ್ಲಿ ಕೂಡ ಬರಬೇಕೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಮಗ್ಗಗಳು

ಬರಬೇಕೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಜವಳಿ ನೀತಿಯಿಂದ ಅನೇಕ ರೀತಿಯ ಪರಿಣಾಮಗಳು ಆಗುತ್ತಿವೆ. ತಾಲ್ಲೂಕು ಮಟ್ಟದಲ್ಲಿ ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳ ಮೇಲೆ ಬಂಡವಾಳ ಹಾಕುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಅಸಿಸ್ಟೆನ್ಸ್ ಕೊಡಬಹುದು, ಅನುಕೂಲತೆಗಳನ್ನು ಒದಗಿಸಬಹುದು. ಮಾನ್ಯ ಸದಸ್ಯರು ಫ್ಯಾಟಿಕ್ ಆಸಿಡ್ ಬಗ್ಗೆ ಪ್ರಸ್ತಾಪ ಮಾಡುತ್ತಾ ಇಂಟರ್ನಲ್ ಆಡಿಟ್ ಮಾಡಿರುವುದರ ಬಗ್ಗೆ ಆಕ್ಷೇಪ ಎತ್ತಿದ್ದಾರೆ. ಇಂಟರ್ನ ಆಡಿಟ್ ಆದ ಕೂಡಲೇ ಬೋರ್ಡ್ ಆಫ್ ಡೈರೆಕ್ಟರುಗಳಿಗೆ ಕಾಪಿ ಹೋಯಿತು, ಡೈರೆಕ್ಟರುಗಳು ಕೂಡ ಯಾವ ವಿಷಯವನ್ನು ನೋಡದೆ, ಆಡಿಟ್ ಕಾಪಿಗಳು ಸಿಕ್ಕಿದ ಕೂಡಲೇ ರಿಸೈನ್ ಮಾಡಿ ಕಾಪಿಗಳನ್ನು ಹಂಚಿದರು, ಇದರ ಉದ್ದೇಶ ಏನು ? ತಪ್ಪು ಮಾಡಿದ್ದರೆ ನಾನು ನೋಡಿಕೊಳ್ಳುತ್ತೇನೆ. ಆಡಿಟ್ ಮಾಡಿರತಕ್ಕಂಥಾದ್ದು ತಪ್ಪು ಏನು ? ಆಮದು ಮಾಡಿಕೊಂಡಂಥ ಎಣ್ಣೆಯನ್ನು ಕನ್‌ವರ್ಟ್ ಮಾಡಿ ಗಾಡ್ರೇಜ್ ಕಂಪನಿಗೆ ಹಿಂದೂಸ್ಥಾನ ಲಿವರ್ ಕಂಪನಿಗೆ ಮಾರಾಟ ಮಾಡಿರುವಂತಾದ್ದು ನಿಜ. ಇನ್‌ವೆಂಟರಿ ಸ್ಟಾಕ್ ವ್ಯಾಲ್ಯೂ ೧೦–೧೫ ಕೋಟಿ ಹೋಯಿತು, ವರ್ಕಿಂಗ್ ಕ್ಯಾಪಿಟಲ್ ಸ್ಕೇರ್‌ಸಿಟಿ ಆಯಿತು. ಗುಣಮಟ್ಟ ಕೆಳಗೆ ಬರತಕ್ಕಂಥ ಅಪಾಯ ಇತ್ತು, ಗಾಡ್ರೇಜ್ ಕಂಪನಿಯವರಿಗೆ ಪಾಕ್ ಆಯಿಲ್ ಕೊಟ್ಟಿದ್ದಾರೆ. ನಮಗೆ ಅವಶ್ಯಕತೆ ಇದ್ದಾಗ ಅವರು ಕೊಟ್ಟಿದ್ದರು, ಅವರಿಗೆ ಅವಶ್ಯಕತೆ ಬಿದ್ದಾಗ ಕೊಟ್ಟಿದ್ದಾರೆ. ಒಂದು ಸಾರಿ ೮೮೦೦ ರೂಪಾಯಿಗೆ ಟನ್‌ನಂತೆ ಕೊಟ್ಟಿದ್ದಾರೆ. ಇನ್ನೊಂದು ವರ್ಷ ೧೦,೬೦೦ ರಿಂದ ೧೨,೬೦೦ರವರೆಗೆ ಟನ್‌ನಂತೆ ಮಾರಾಟ ಮಾಡಿದ್ದಾರೆ. ಮಾರ್ಕೆಟ್ ರೇಟ್ ೧೬,೦೦೦ ಇತ್ತು ಎಂದು ಹೇಳಿದರೆ, ನಾನು ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ಪಬ್ಲಿಕ್ ಸೆಕ್ಟರ್ ಮತ್ತು ಪ್ರೈವೇಟ್ ಸೆಕ್ಟರ್ ಬಗ್ಗೆ ಹೇಳುವುದಾದರೆ, ಇವತ್ತು ಪಬ್ಲಿಕ್ ಸೆಕ್ಟರ್ ಜಾಬ್ ಓರಿಯೆಂಟೆಡ್ ಆಗಿದೆ. ಜನರಿಗೆ ಕೆಲಸ ಕೊಡುವುದು ಮುಖ್ಯ. ಮಾನವ ಶಕ್ತಿಯನ್ನು ಬಳಸಿಕೊಂಡು, ಆ ಮೂಲಕ ಸಂಪತ್ತನ್ನು ಉತ್ಪಾದನೆ ಮಾಡಿ ಅದರ ಮೇಲೆ ಸರ್ಕಾರದ ಒಡೆತನ ಇರಬೇಕು ಎಂಬುದಾಗಿದೆ ಈ ವಿಚಾರದಲ್ಲಿ ಜಗತ್ತಿನಲ್ಲಿ ಎಷ್ಟು ತರಹ ಇದೆ ಎನ್ನುವುದರ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ. ೧) ಫ್ರೀಡಂ ಮಾರ್ಕೆಟ್ ಎಕಾನಮಿ ಪ್ರೈವೇಟ್ ಓನರ್‌ಷಿಪ್ ೨) ಪೊಲಿಟಿಕಲ್ ಫ್ರೀಡಂ, ಟ್ರೇಡಿಂಗ್ ಅಂಡ್ ಕಾಮರ್ಸ್ ಮಾರ್ಕೆಟ್ ಎಕಾನಮಿ ಪ್ರೈವೇಟ್ ಓನರ್‌ಷಿಪ್ ೩) ಫ್ರೀಡಂ ಮಾರ್ಕೆಟ್ ಎಕಾನಮಿ ಕಲೆಕ್ಟೀವ್ ವೈಸ್ ಓನರ್‌ಷಿಪ್ ಇಂಥ ಒಂದು ವ್ಯವಸ್ಥೆ ಇರಾನ್‌ನಲ್ಲಿ ಇದೆ. ಆಥಾರಿಟೇರಿಯನ್ ಮಾರ್ಕೆಟ್ ಎಕಾನಮಿ. ಇರಾಕ್‌ನಲ್ಲಿ ಒಂದು ರೀತಿ ಇರಬಹುದು. ರಷ್ಯಾ ಚೈನಾದಲ್ಲಿ ಇರಬಹುದು. ೪) ಫ್ರೀಡಂ, ಪ್ಲಾನಿಂಗ್ ಅಂಡ್ ಕಲೆಕ್ಟೀವ್‌ವೈಸ್ ಓನರ್‌ಷಿಪ್. ೫) ಟೋಟಲೈಟೇರಿಯನಿಸಂ, ಪ್ಲಾನಿಂಗ್ ಪ್ರೈವೇಟ್ ಓನರ್‌ಷಿಪ್. ೬) ಟೋಟಲೈಟೇರಿಯನಿಸಂ, ಮಾರ್ಕೆಟ್ ಎಕಾನಮಿ ಕಲೆಕ್ಟೀವ್ ವೈಸ್ ಓನರ್‌ಷಿಪ್. ೭) ಟೋಟಲೈಟೇರಿಯನಿಸಂ ಪ್ಲಾನಿಂಗ್ ಅಂಡ್ ಕಲೆಕ್ಟೀವ್ ವೈಸ್ ಓನರ್‌ಷಿಪ್. ಫ್ರೀಡಂನಲ್ಲಿ ಪ್ಲಾನಿಂಗ್ ಇಲ್ಲದೇ ಇರಬಹುದು, ಪ್ಲಾನ್ ಇದ್ದರೂ ಕೂಡ ಟೋಟಲೈಟೇರಿಯಂನಲ್ಲಿ ಪ್ಲಾನಿಂಗ್ ಇಲ್ಲದೇ ಇರಬಹುದು. ಇಂಥ ವಿವಿಧ ಪದ್ಧತಿ ಜಗತ್ತಿನಲ್ಲಿದೆ. ನನ್ನ ಅಭಿಪ್ರಾಯದಲ್ಲಿ ಪಬ್ಲಿಕ್ ಸೆಕ್ಟರ್ ಇರುವುದು ಒಳ್ಳೆಯದಲ್ಲ, ಎಲ್ಲವೂ ಪಬ್ಲಿಕ್ ಸೆಕ್ಟರ್ ಇದ್ದರೆ ಬೇರೆ ಮಾತು ಇವತ್ತು ಮಿಕ್ಸೆಡ್ ಎಕಾನಮಿಯ ಒಂದು ಅವಶ್ಯಕತೆ ಇರುತ್ತೆ, ಒಂದು ಆಬ್ಜೆಕ್ಟೀವ್ ಇರುತ್ತೆ. ಬರೀ ಜನರಿಗೆ ಕೆಲಸ ಕೊಡುವುದು ಮಾತ್ರವಲ್ಲ. ಕೆಲಸ ಕೊಟ್ಟಿದ್ದಕ್ಕೆ ಸಾರ್ಥಕವಾಗಬೇಕು. ಅದು ಕನ್‌ವರ್ಟ್ ಆಗಬೇಕು. ಕಾರ್ಮಿಕ ಶಕ್ತಿ ಕೂಡ ಮಾರ್ಕ್ಸಿಸಂ ತತ್ವದ ಪ್ರಕಾರ ಬಂಡವಾಳವಾಗುತ್ತದೆ. ಸಾಹುಕಾರರ ಬಂಡವಾಳ ಎಷ್ಟು ಮುಖ್ಯವೋ, ಕಾರ್ಮಿಕರ ಶಕ್ತಿಯೂ ಕೂಡ ಅಷ್ಟೇ ಮುಖ್ಯ. ಕಾರ್ಮಿಕರು ಶ್ರಮದ ಶಕ್ತಿಯನ್ನು ಕನ್‌ವರ್ಟ್ ಮಾಡಿದರೆ ಸಂಪತ್ತಾಗುತ್ತದೆ. ಇಲ್ಲದೆ ಹೋದರೆ ಲುಕ್ಸಾನು ಆಗುತ್ತದೆ. ಕಾರ್ಮಿಕರ ಶ್ರಮದ ಶಕ್ತಿಯ ಫಲ ಸಮಾಜದ ಸರ್ವರಿಗೂ ಲಭ್ಯವಾಗಬೇಕು. ಆ ಮೂಲಕ ಸಮಾಜದ ಒಡೆತನ ಕಾರ್ಖಾನೆಯ ಮೇಲೆ ಇರಬೇಕು. ಇವತ್ತು ಪ್ರೈವೇಟ್ ಸೆಕ್ಟರ್ ಕಾಂಟ್ರಿಬ್ಯೂಷ್ಯನ್ ಕೂಡ ಸಮಾಜದ ಮೇಲಿದೆ. ಇವತ್ತು ಮಿಕ್ಸೆಡ್ ಎಕಾನಮಿ ಅವಶ್ಯಕತೆ ಬಹಳ ಇದೆ. ಕೆಲವು ಸಂದರ್ಭದಲ್ಲಿ ಪಬ್ಲಿಕ್ ಪಬ್ಲಿಕ್ ಆಗುವುದಿಲ್ಲ, ಪ್ರೈವೇಟ್ ಪ್ರೈವೇಟ್ ಆಗುವುದಿಲ್ಲ. ಇನ್ನು ಒಂದು ಸಾವಿರ ಯೂನಿಟ್‌ಗಳನ್ನು ಒಂದು ತಿಂಗಳಿಗೆ ಕೊಡುವ ಬಗ್ಗೆ ಹಾಗೂ ಸ್ವ ಉದ್ಯೋಗದ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಸಿಂಗಲ್ ವಿಂಡೋಸ್ ಏಜನ್ಸಿ ಮೂಲಕ ಸಹಾಯಕವಾಗುತ್ತದೆಂದೂ ಬಹಳ ಆಸೆಯಿಂದ ಹುಡುಗರನ್ನು ಇಂಟರ್‌ವ್ಯೂ ಮಾಡಿ, ಸೆಲೆಕ್ಟ್ ಮಾಡಿದ್ದರೂ ಕೂಡ ಹಣ ಸಿಕ್ಕಿಲ್ಲ. ಕೇಂದ್ರ ಸರ್ಕಾರದ ಮಂತ್ರಿಗಳು ಬಂದಾಗ ಈ ವಿಷಯ

ತಿಳಿಸಿದ್ದೇವೆ. ಈ ವಿಚಾರದಲ್ಲಿ ನಮ್ಮ ಹುಡುಗರಿಗೆ ದೊಡ್ಡ ಅಸಮಾಧಾನ, ಕೋಪ ಬರುತ್ತಿದೆ. ಇದರ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀಮಾನ್ ಕೆ. ಬಿ. ಶ್ಯಾನಪ್ಪನವರು. ಸಿಮೆಂಟ್ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದಾರೆ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೆ. ನಿಮ್ಮ ಜಿಲ್ಲೆಗೆ ಇಂಡಸ್ಟ್ರೀಸ್‌ಗಳು ಬೇಕಾದರೆ ಈ ಧೂಳನ್ನು ಸಹಿಸಿಕೊಳ್ಳಬೇಕು. ನೀವೇ ನಮ್ಮ ಜಿಲ್ಲೆ ಹಿಂದುಳಿದಿದೆ, ಇಂಡಸ್ಟ್ರೀಸ್‌ಗಳನ್ನು ಮಾಡಬೇಕೆಂದು ಹೇಳುತ್ತಿದ್ದೀರಿ. ನಿಮ್ಮ ಜಿಲ್ಲೆಯ ಪರಿಸರವನ್ನು ನೋಡಿದರೆ, ಹೆಚ್ಚಿನ ಸಂಖ್ಯೆಯಲ್ಲಿ ಸಿಮೆಂಟ್ ಇಂಡಸ್ಟ್ರೀಸ್‌ಗಳನ್ನು ಮಾತ್ರ ಮಾಡಬಹುದು. ಆದರೆ ಧೂಳೂ ಕೂಡ ಬರದ ತಾಂತ್ರಿಕತೆಯನ್ನು ಈ ಬಂದು ಇಂಡಸ್ಟ್ರೀಸ್‌ಗಳಲ್ಲಿ ಅಳವಡಿಸುವ ಬಗ್ಗೆ ಕೂಡಲೇ ಸಂಬಂಧಪಟ್ಟವರ ಜೊತೆಯಲ್ಲಿ ಸಮಾಲೋಚನೆ ಮಾಡಿ, ಆ ತಾಂತ್ರಿಕತೆಯನ್ನು ಅಳವಡಿಸಿ ಎಂಬುದಾಗಿ ನಾನು ಆ ಕೈಗಾರಿಕೋದ್ಯಮಿಗಳಿಗೆ ಹೇಳುತ್ತೇವೆ. ಯಾವುದೇ ಹೊಸ ಕೈಗಾರಿಕೆ ಬರುವುದಾದರೂ ಹಾನಿಕಾರಕ ಹೊಗೆಯನ್ನು ಉಗುಳತಕ್ಕಂಥದ್ದು ಆಗಬಾರದು, ನಮ್ಮಲ್ಲಿ ತಾಂತ್ರಿಕತೆ ಬೆಳೆದಿದೆ. ಆ ಮಾತನ್ನು ನಾನು ಒಪ್ಪುತ್ತೇನೆ. ಅಷ್ಟಕ್ಕೆ ಮಾತ್ರ ನಾನು ಸೀಮಿತಮಾಡುತ್ತೇನೆ.

ಶ್ರೀ ಕೆ, ಬಿ. ಶ್ಯಾನಪ್ಪ.—ಅದನ್ನು ಕಂಟ್ರೋಲ್ ಮಾಡಿ.

ಶ್ರೀ ಜೆ. ಎಚ್. ಪಟೇಲ್.—ಆದರೆ ಸಿಮೆಂಟ್ ಕಾರ್ಖಾನೆಯಿಂದ ಹೊರಬರುವಂತಹ ಧೂಳು ತೆಂಗಿನ ಗಿಡಗಳಿಗೆ ಹಾನಿಕಾರಕ ಅಲ್ಲವೆಂದು ನಮ್ಮ ವ್ಯವಸಾಯ ಇಲಾಖೆಯವರೇ ಹೇಳಿದ್ದಾರೆ. ಆ ಗಿಡಗಳು ಚಿಕ್ಕವು ಇದ್ದಾಗ ಮಾತ್ರ ಈ ಧೂಳು ಬಿದ್ದರೆ ಹಾನಿಯಾಗುತ್ತದೆ ಅಂತ ಹೇಳುತ್ತಾರೆ. ಒಂದು ಆ ಧೂಳಿನಿಂದ ಹಾನಿಯಾಗುತ್ತದೆ ಎಂಬುದು ನಮಗೆ ಮನವರಿಕೆಯಾದರೆ, ಅಂತಹ ಕೈಗಾರಿಕೆಗಳನ್ನು ಮುಚ್ಚುವುದಕ್ಕೂ ತಕ್ಕ ಕ್ರಮ ಕೈಗೊಳ್ಳುತ್ತೇವೆ. ಆದರೂ ಆಯಾ ಕೈಗಾರಿಕೆಗಳಿಗೆ ಮಾಲಿನ್ಯ ಪರಿಸರವನ್ನು ಕಾಪಾಡುವಲ್ಲಿ ಇರುವಂಥ ಇತ್ತೀಚಿನ ತಾಂತ್ರಿಕತೆಯನ್ನು ಅಡಾಪ್ಟ್ ಮಾಡಿಕೊಳ್ಳಿ ಎಂಬುದಾಗಿ ಅವರಿಗೆ ಹೇಳುತ್ತೇವೆ. ಜೊತೆಯಲ್ಲಿ ನಿರ್ದಿಷ್ಟ ಸಮಯವನ್ನು ಕೂಡ ಕೊಡುತ್ತೇನೆ. ಆ ಸಮಯದಲ್ಲಿ ಅವರು ಇತ್ತೀಚಿನ ತಾಂತ್ರಿಕತೆಯನ್ನು ಅಡಾಪ್ಟ್ ಮಾಡಿಕೊಳ್ಳದಿದ್ದರೆ we will even have to go to the extent of closing the industry. ನಂತರ ಇಂಡಸ್ಟ್ರೀಸ್‌ನ್ನು ಕ್ಲೋಸ್ ಮಾಡಿದ್ದರಿಂದ ಕೆಲಸಗಾರರಿಗೆ ತೊಂದರೆಯಾಗಿದೆ, ಪುನ: ಕೈಗಾರಿಕೆಯನ್ನು ಪ್ರಾರಂಭ ಮಾಡಿ ಅಂತ ಆವಾಗ ಮಾತ್ರ ಹೇಳಬೇಡಿ.

ಶ್ರೀ ಕೆ. ಬಿ. ಶ್ಯಾನಪ್ಪ.—ಆದರಲ್ಲೂ ಒಂದು ಕೋಟಿ ರೂಪಾಯಿಗಳ ಖರ್ಚನ್ನು ಉಳಿಸಬೇಕೆಂದಿದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಆ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ನಾವು ಬಿಡುವುದಿಲ್ಲ. ತಾಂತ್ರಿಕತೆಯ ಅವಲಿಬಿಲಿಟಿ ಇದೆಯೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ಆದರೆ ನಾವು ಕಾರ್ಮಿಕರ ಹಿತವನ್ನೂ ಕೂಡ ನೋಡಬೇಕಾಗುತ್ತದೆ. ಮತ್ತೆ ಯಾವುದೇ ಕೈಗಾರಿಕೆಗಳಲ್ಲಿ ಪರಿಸರ ಮಾಲಿನ್ಯಕ್ಕೆ ತೊಂದರೆ ಬರಕೂಡದು. ಅದರ ಬಗ್ಗೆ we are being very strict about it.

ಶ್ರೀ ಆರ್. ವೆಂಕಟರಾಮಯ್ಯ.—ಅಕೌಂಟಿಂಗ್‌ನಲ್ಲಿ ಬಹಳ ಡೇಲಿಯಾಗುತ್ತಿದೆ ಅನ್ನುವ ಅಭಿಪ್ರಾಯವನ್ನು ನಮ್ಮ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ರವರೇ ಹೇಳಿದ್ದಾರೆ. ಯಾವ ಕಾರ್ಖಾನೆಗಳೂ ೩–೪ ವರ್ಷಗಳವರೆಗೆ ಅಕೌಂಟ್‌ನ್ನೇ ಕೊಟ್ಟಿರುವುದಿಲ್ಲ, ಯಾವುದೇ ಕಾರ್ಖಾನೆಯಲ್ಲಾಗಲಿ ಆ ಕಾರ್ಖಾನೆಯ ಲೆಕ್ಕಪತ್ರಗಳನ್ನು ಮೊದಲು ಇಂಟರ್‌ನಲ್ ಆಡಿಟರ್‌ರವರು ನೋಡುತ್ತಾರೆ. ನಂತರ ಅದನ್ನು ಚಾರ್ಟೆಡ್ ಅಕೌಂಟೆಂಟ್ ಅಪ್ರೂವ್ ಮಾಡುತ್ತಾರೆ. ನಂತರ ಅದು ಅಕೌಂಟೆಂಟ್ ಜನರಲ್‌ರವರಿಗೆ ಹೋಗುತ್ತದೆ. ಇದು ಇರತಕ್ಕ ಪ್ರೊಸೀಜರ್ ಆದರೆ Many a time it is delayed due to administrative reasons. ಈಗ ಇರುವಂತಹ ಆಡಿಟಿಂಗ್ ಸಿಸ್ಟಂ ಅನ್ನೇ ಬದಲಾವಣೆ ಮಾಡಬೇಕು. ೨–೩ ವರ್ಷಗಳವರೆಗೆ ಆಡಿಟ್‌ನ್ನೇ ಮಾಡದೆ ಪೆಂಡಿಂಗ್ ಇಟ್ಟುಕೊಂಡಿರುತ್ತಾರೆ. ಪ್ರತಿ ವರ್ಷದ ಕೊನೇ ತಿಂಗಳಲ್ಲಿ ತನ್ನ ಲೆಕ್ಕ ಪತ್ರಗಳ ವರದಿಯನ್ನು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ಗೆ ಕಳುಹಿಸುವಂತಹ ವ್ಯವಸ್ಥೆಯಾಗಬೇಕು.

(ಶ್ರೀ ಎಚ್. ಟಿ. ಕೃಷ್ಣಪ್ಪ–ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ವರ್ಷದಲ್ಲಿ ಶೇ ಕಡಾ ೬೦ ರಷ್ಟು ಕಾರ್ಖಾನೆಗಳಲ್ಲಾ ಅವರ ಲೆಕ್ಕ ಪತ್ರಗಳನ್ನು ಆಡಿಟ್ಟೇ ಮಾಡಿಲ್ಲ. ಅಲ್ಲಿರತಕ್ಕ ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರಕ್ಕೆ ಏನೊಂದು ಅನಿಸಿಕೆ ಇದೆ ಎಂದರೆ ಐ.ಎ.ಎಸ್. ಅಧಿಕಾರಿಗಳೆಂದರೆ ಎಲ್ಲವನ್ನೂ ತಿಳಿದುಕೊಂಡಿರತಕ್ಕಂತಹವರು ಎಂದು. ಅದು ಸರಿಯಲ್ಲ, ತಜ್ಞರು ಯಾರು ಇದ್ದಾರೆ, ಅವರನ್ನು ಇಂತಹ ಕಾರ್ಖಾನೆಗಳಿಗೆ ಹಾಕಿ. ಕೆಲಸ ಮಾಡಬೇಕೆಂಬ ಕಮಿಂಟ್‌ಮೆಂಟ್ ಯಾರಿಗೆ ಇದೆ ಅಂತಹವರನ್ನು ಕಾರ್ಖಾನೆಗಳಿಗೆ ಉನ್ನತ ಮಟ್ಟದ ಅಧಿಕಾರಿಗಳನ್ನಾಗಿ ಹಾಕಿ. ಕಳೆದ ವರ್ಷಗಳಲ್ಲಿ ಎನ್.ಜಿ.ಇ.ಎಫ್. ಕಾರ್ಖಾನೆಯು ೨ ಕೋಟಿ ರೂಪಾಯಿಗಳ ಲಾಭವನ್ನು ಮಾಡಿದೆ. ಅಲ್ಲಿರತಕ್ಕ ವರ್ಕ್ ಫೋರ್ಸ್ ಏನಿದೆ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡಿದ್ದೇ ಆದರೆ ಇನ್ನೂ ಹೆಚ್ಚು ಲಾಭವನ್ನು ಮಾಡಬಹುದು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳುತ್ತಿದ್ದೇನೆ. ನಂತರ ಕೋಲಾರದ ಚಿನ್ನದ ಗಣಿಯ ವಿಚಾರದಲ್ಲಿ ಹೇಳುವುದಾದರೆ, ಅದು ನಿಮ್ಮ ಕೈಯ್ಯಲ್ಲಿಲ್ಲ. ಆದರೆ ಅದಕ್ಕೊಂದು ಕಾರ್ಖಾನೆಯನ್ನು which is a subsidiary of B.E.M.L. ಕೊಡುತ್ತೇವೆಂದು ಕೇಂದ್ರ ಸರ್ಕಾರದವರು ಬಹಳ ದಿವಸಗಳಿಂದಲೂ ಹೇಳುತ್ತಲೇ ಇದ್ದಾರೆ. ಅದರ ಬಗ್ಗೆ ತಾವು ಕೇಂದ್ರದ ಮೇಲೆ ಒತ್ತಾಯ ತರಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬೆಂಗಳೂರಿನಲ್ಲಿರತಕ್ಕ ಸರ್ಕಾರಿ ಕಾರ್ಖಾನೆಯೊಂದು ಸಿಕ್ ಇಂಡಸ್ಟ್ರೀಸ್ ಆಗಿದ್ದರೂ, ಅದನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೇವೆಂದು ಅಲ್ಲಿರತಕ್ಕ ಅಧಿಕಾರಿಗಳು ಹೇಳಿದ್ದರಿಂದ ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಬೇಕಾಯಿತು. ಆ ಕಾರ್ಖಾನೆಗಳಲ್ಲಿರತಕ್ಕ ಅಧಿಕಾರಿಗಳು ತಮ್ಮ ಅಣ್ಣ-ತಮ್ಮನ ಹೆಸರಿನಲ್ಲಿ ಹೆಂಡತಿಯ ಹೆಸರಿನಲ್ಲಿ ಆಕ್ಸಿಲಿಯರಿ ಯುನಿಟ್ ಎಂಬುದಾಗಿ ಮಾಡಿಕೊಂಡು ಕಾರ್ಖಾನೆಗೆ ಬೇಕಾಗಿರತಕ್ಕ ಎಲ್ಲ ಸಾಮಾಗ್ರಿಗಳನ್ನು ಅಲ್ಲಿಂದಲೇ ತರುವಂತಹ ವ್ಯವಸ್ಥೆ ಇದೆ. ಅದನ್ನು ನಿರ್ಧಿಷ್ಟವಾಗಿ ಹೇಳಿ ಎಂಬುದಾಗಿ ತಾವು ಹೇಳಿದ್ದೀರಿ. ಅದರ ಪೂರ್ಣ ವಿವರಗಳು ನನ್ನಲ್ಲಿವೆ ಕಳುಹಿಸಿಕೊಡುತ್ತೇನೆ. ವಿಚಾರಣೆ ಮಾಡಿ. ನಂತರ ಸರ್ಕಾರಿ ಕಾರ್ಖಾನೆಗಳ ಗೆಸ್ಟ್ ಹೌಸ್‌ಗಳು ಬೆಂಗಳೂರಿನಲ್ಲಿವೆ. ಅವುಗಳಲ್ಲಿ ಅವ್ಯವಹಾರ ನಡೆಯುತ್ತಿದೆ. ಅವುಗಳನ್ನು ಕೂಡಲೇ ಕ್ಲೋಸ್ ಮಾಡಿಸಿ ಎಂಬುದಾಗಿ ಹೇಳಿದ್ದೆ, ನಂತರ ವಿ.ಐ.ಎಸ್.ಎಲ್. ನಲ್ಲಿ ಸರ್ಕಾರ ಏನು ವಿದ್ಯುಚ್ಛಕ್ತಿಯನ್ನು ಮಂಜೂರು ಮಾಡಿತ್ತು, ಮಂಜೂರು ಮಾಡಿದಂತಹ ವಿದ್ಯುತ್ತನ್ನೇ ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲಿಲ್ಲ. ಕಚ್ಚಾ ಸಾಮಗ್ರಿಗಳ ಅವಲೈಬಲಿಟಿ ಇದ್ದರೂ ಅದನ್ನು ಉಪಯೋಗ ಮಾಡಿಕೊಂಡಿಲ್ಲ, ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂಬುದಾಗಿ ಹೇಳಿದೆ. ನಂತರ ಎಂ.ಪಿ.ಎಂ.ನ ಎಕ್ಸ್‌ಪ್ಯಾನ್ಸನ್ ಯೋಜನೆಯಲ್ಲಿ ಅಧಿಕಾರಿಗಳು ೧೦ ಕೋಟಿ ರೂಪಾಯಿಗಳವರೆಗೆ ಅವ್ಯವಹಾರ ಮಾಡಿದ್ದಾರೆ ಅಂತ ಹೇಳಿದ್ದೆ. ಅದರ ಬಗ್ಗೆ ತಾವು ವಿತರಣೆ ಮಾಡುವುದಾದರೆ, ಬೇಕಾದಂತಹ ಮಾಹಿತಿಯನ್ನು ನಾನು ಒದಗಿಸುತ್ತೇನೆ. ಕೊನೆಯದಾಗಿ, ಬೆಂಗಳೂರಿನಲ್ಲಿರುವ ಟೂಲ್ ರೂಮ್‌ನಲ್ಲಿರುವ ಒಬ್ಬ ಅಧಿಕಾರಿಯ ಹೆಸರನ್ನು ಹೇಳಿದ್ದೆ, ಅಧಿಕಾರಿಗಳ ಹೆಸರನ್ನು ಹೇಳುವುದು ಕೆಲವರಿಗೆ ಅಭ್ಯಾಸವಾಗಿ ಹೋಗಿಬಿಟ್ಟಿದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಅದು ಸರಿಯಲ್ಲ. ಕಾರ್ಖಾನೆಯಲ್ಲಿ ನಷ್ಟದ ಕೆಲಸ ಮಾಡುತ್ತಿದ್ದರೂ, ಸರ್ಕಾರಕ್ಕೆ ಒಳ್ಳೆಯ ಕೆಲಸ ಮಾಡುತ್ತಿದ್ದೇನೆಂದು ವರದಿಯನ್ನು ಕೊಡುತ್ತಿದ್ದಾರಲ್ಲಾ, ಅದಕ್ಕಾಗಿ ಅವರ ಹೆಸರನ್ನು ಹೇಳಬೇಕಾಯಿತು. ನನ್ನಲ್ಲಿ ಇನ್ನೂ ಹತ್ತಾರು ಹೆಸರುಗಳು ಇವೆ. ಒಬ್ಬರ ಮೇಲೆ ಕ್ರಮ ತೆಗೆದುಕೊಂಡರೆ ಉಳಿದವರು ಹುಷಾರಾಗಿರುತ್ತಾರೆ ಎಂಬ ಉದ್ದೇಶದಿಂದ ಒಬ್ಬರ ಹೆಸರನ್ನು ಮಾತ್ರ ನಾನು ಹೇಳಿದೆ. The performance of the industry is very good and it is making profit. He has been responsible for really bringing up that industry by adopting latest technology. ಒಳ್ಳೆಯ ಕೆಲಸ ಮಾಡುತ್ತಿದ್ದೇನೆಂಬ ನೆಪದಲ್ಲಿ ನಾನು ಹೇಳಿದಂತಹ ೩-೪ ಪ್ರಕರಣದಲ್ಲಿ ಅವರು ಕಾರ್ಖಾನೆಗೆ ನಷ್ಟ ಉಂಟು ಮಾಡಿದ್ದಾರೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ. ನನ್ನಲ್ಲಿ ಆ ಬಗ್ಗೆ ದಾಖಲೆಗಳು ಇವೆ ಅವುಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಜೆ. ಎಚ್. ಪಟೇಲ್.—ನಿಮ್ಮಲ್ಲಿರುವಂತಹ ದಾಖಲೆಗಳನ್ನು ಕಳುಹಿಸಿಕೊಡಿ. I will get it enquired. If he is found guilty I will take action ನಂತರ ಸ್ವಯಂ ಉದ್ಯೋಗದ ಯೋಜನೆ ಸರಿಯಲ್ಲ ಎಂಬುದಾಗಿ ಹೇಳಿದ್ದಾರೆ. ಬ್ಯಾಂಕುಗಳು ನಮ್ಮನ್ನು ಸರಿಯಾಗಿ

ನೋಡುತ್ತಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಗುಲ್ಬರ್ಗದ ಡಿ.ಐ.ಸಿ. ಯಿಂದ ಆಯ್ಕೆ ಮಾಡಿದ್ದರೂ, ಬ್ಯಾಂಕುಗಳಲ್ಲಿ ಅವನಿಗೆ ಸಾಲದೊರೆಯುತ್ತಿಲ್ಲ ವೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ವಿಚಾರಿಸುತ್ತೇನೆ.

ಮಾನ್ಯ ಸದಸ್ಯರಾದ ಇದಿನಬ್ಬರವರು ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ವಿಚಾರದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ಅವರು ಹೇಳಿದಹಾಗೆ ಯಾವುದೇ ತೊಂದರೆಯಾಗುವ ಅವಕಾಶವಿಲ್ಲ. ನನಗೆ ಗೊತ್ತಿರುವ ಹಾಗೆ ಈ ಬಗ್ಗೆ ಕಣ್ಣು ತೆರೆದು ಇರಬೇಕು, ಆ ವಿಷಯವನ್ನು ನಾನು ಒಪ್ಪುತ್ತೇನೆ. ಮಂಗಳೂರು ತೈಲ ಶುದ್ಧೀಕರಣಗಾರ ಅದು ಬರಬೇಕೆಂದು ನಾವು ಇದ್ದೇವೆ, ಅದು ಬೇಡ ಅಂದರೆ ಹೇಳಿ.

ಶ್ರೀ ಬಿ. ಎಂ. ಇದಿನಬ್ಬ.—ಜನ ಅದು ಬೇಕೆಂದು ಹೇಳಿದ್ದಾರೆ. ಆದರೆ ತಾವು ಜಾಗೃತರಾಗಿರ ಬೇಕು.

ಶ್ರೀ ಜೆ. ಎಚ್. ಪಟೇಲ್. ಯಾವುದೇ ಇಂಡಸ್ಟ್ರೀಗಳನ್ನು ತರುವಾಗ ಎಲ್ಲಾ ಸಂರಕ್ಷಣೆ ಯನ್ನು ಒಳಗೊಂಡು ತರಬೇಕು. ಮಂಗಳೂರು ತೈಲಶುದ್ಧೀಕರಣಗಾರ ರಾಜ್ಯ ಸರ್ಕಾರಕ್ಕೆ ಬೇಕೆಂದು ಪುನಃ ಪುನಃ ಒತ್ತಾಯ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ಸ್ಥಾಪನೆ ಮಾಡುತ್ತದೆ. ಮಾನ್ಯ ಸದಸ್ಯರಾದ ಲಕ್ಕಪ್ಪನವರು ಸಿಮೆಂಟ್ ಫ್ಯಾಕ್ಟರಿಗಳ ಬಗ್ಗೆ ಆರೋಪ ಮಾಡಿದ್ದಾರೆ. ಅದೇರೀತಿ ನೀವು ಕೂಡ ಅದು ಬಂದಾಗ ಅದನ್ನು ವಜಾ ಮಾಡಿಯೆಂದು ಹೇಳಬೇಡಿ. ಮಾನ್ಯ ಸದಸ್ಯರುಗಳೆಲ್ಲರೂ ಕೊಟ್ಟಿರತಕ್ಕ ಸಲಹೆಗಳನ್ನು ಸೂಕ್ತವಾದ ರೀತಿಯಲ್ಲಿ ಯಾವುದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯ ಅದನ್ನು ಮಾಡುತ್ತೇನೆ. ಇಂಡಸ್ಟ್ರಿ ಪರ್‌ಫಾರ್ಮೆನ್ಸ್ ಅನ್ನು ಹಿಂದಿನ ವರ್ಷಗಳಿಗೆ ಹೋಲಿಸಿ ನೋಡಿದರೆ ವರ್ಷ ವರ್ಷಕ್ಕೆ ಇಂಪ್ರೂವ್ ಆಗಿರತಕ್ಕದ್ದು ಸಮಾಧಾನದ ಲಕ್ಷಣ. ನಾನು ರಾಜಕೀಯವನ್ನು ಇದರಲ್ಲಿ ಬೆರಸುತ್ತಿಲ್ಲ. ಮೊದಲು ವಿದ್ಯುತ್ ಇತ್ತು, ಕೇಂದ್ರದ ಕೊಡುಗೆ ಇತ್ತು. ಇಷ್ಟೆಲ್ಲಾ ಇದ್ದೂ ನಮ್ಮ ಕಾರ್ಖಾನೆಗಳು ಕೆಲಸ ಮಾಡಿರುವುದನ್ನು ನೋಡಿದರೆ, ನಮ್ಮ ಕರ್ನಾಟಕ ಔದ್ಯೋಗಿಕ ಪ್ರಗತಿಯ ಮುಂಚೂಣಿಯಲ್ಲಿ ಇರಬೇಕಿತ್ತು. ವಿದ್ಯುತ್ ಉತ್ಪಾದನೆಯಲ್ಲಾಗಲಿ, ಹೊಸ ವೈಜ್ಞಾನಿಕ ವಿಷಯ ದಲ್ಲಾಗಲೀ ಬ್ಯಾಂಕಿಂಗ್ ವಿಷಯದಲ್ಲಾಗಲೀ ಅತ್ಯಂತ ಮುಂದೆ ಇದ್ದಂತಹ ರಾಜ್ಯ ಕಾರಣಾಂತರಗಳಿಂದ [illegible] ಬಿದ್ದಿದೆ. ಕಳೆದ ಹತ್ತಾರು ವರ್ಷಗಳಿಂದ ನಮ್ಮ ಮ್ಯಾನೇಜ್‌ಮೆಂಟ್ ಸರಿಯಾಗಿ ಇಲ್ಲದೆ ಇರುವ [illegible] ದಿಂದ ನಾವು ಈಗ ತೊಂದರೆಯಲ್ಲಿದ್ದೇವೆ. ಕಳೆದ ವರ್ಷಗಳಿಗಿಂತ ಈ ವರ್ಷ ಮುಂದಿದ್ದೇವೆ. ಮುಂದಿನ ವರ್ಷ ಮಳೆ ಚೆನ್ನಾಗಿ ಆದರೆ ಮತ್ತು ನಮ್ಮ ವಿದ್ಯುತ್ ಉತ್ಪಾದನೆ ಸಾಕಷ್ಟು ಆದರೆ ಬಹುತೇಕ ಇಂಡಸ್ಟ್ರಿಗಳಿಗೆ ಇರತಕ್ಕ ರೋಗ ಕೊಚ್ಚಿ ಹೋಗುತ್ತದೆ. ಅಲ್ಲಿ ಮ್ಯಾನೇಜ್‌ಮೆಂಟ್‌ನಲ್ಲಿ ಸರಿಯಾದ ವ್ಯವಸ್ಥೆ ಇಲ್ಲವಾಗಿದೆ. ರಾ ಮೆಟೀರಿಯಲ್ಸ್ ಬೇಕಾಗಿರತಕ್ಕದ್ದು ಹಾಗೂ ಬೇರೆ ಕಡೆ ಇರತಕ್ಕ ಫ್ಯಾಕ್ಟರ್ಸ್‌ಗಳನ್ನು ನೋಡಿಕೊಂಡು ಎಚ್ಚರಿಕೆಯಿಂದ ಮುಂದಿನ ವರ್ಷ ಕೆಲಸ ಮಾಡಲಾಗುವುದು. ಈಗಾಗಲೇ ಹೇಳಿದಹಾಗೆ ಯೋಜನೆಯಲ್ಲಿ ಉದ್ಯಮಗಳ ಬಗ್ಗೆ ಯೋಚನೆ ಕಡಿಮೆ ಮಾಡಿದ್ದೇವೆ. ಮಿನಿಮಮ್ ನೀಡ್ಸ್ ಪ್ರೋಗ್ರಾಮ್, ಪವರ್ ಎಲಿವೇಷನ್ ಪ್ರೋಗ್ರಾಮ್ ಒಂದೂವರೆ ಎರಡು ಪಟ್ಟು ಜಾಸ್ತಿ ಮಾಡಿದ್ದೇವೆ. ಒಟ್ಟು ರಾಜ್ಯದ ಸಮಗ್ರ ಬೆಳವಣಿಗೆ ಮತ್ತು ಸಾಂಸ್ಕೃತಿಕ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಈಗಿರತಕ್ಕ ಕಾರ್ಖಾನೆಗಳು ಹಾಗೂ ಉದ್ಯಮಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಆರೋಗ್ಯ ಹೇಗಿದೆ ?

ಶ್ರೀ ಜೆ. ಎಚ್. ಪಟೇಲ್.—ನನ್ನ ಆರೋಗ್ಯ ಚೆನ್ನಾಗಿದೆ. ಸಣ್ಣಪುಟ್ಟ ದೋಷಗಳು ಇದ್ದರೆ ಮಾನ್ಯ ಸದಸ್ಯರು ಸಲಹೆಗಳನ್ನು ಕೊಡಬಹುದು, ಏನಾದರೂ ತಪ್ಪು ಇದ್ದರೆ ಸರ್ಕಾರ ತಿದ್ದಿಕೊಳ್ಳುತ್ತ ದೆಂದು ಹೇಳುತ್ತಾ, ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ಹೆಚ್ಚು ಹೇಳಿಕೊಳ್ಳದೆ ಮಾನ್ಯಸಭೆ ಈ ವರ್ಷಕ್ಕೆ ಸಂಬಂಧಪಟ್ಟ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಛೇರ್ಮನ್.—ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಯಾರೂ ಭಾಷಣ ಮಾಡಬೇಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಛೇರ್ಮನ್‌ರವರು ಸ್ಪಷ್ಟೀಕರಣ ಕೇಳಿ ಎಂದು ಹೇಳಿದ್ದಾರೆ. ಸ್ಪಷ್ಟೀಕರಣವನ್ನು ಮಂತ್ರಿಗಳಿಗೆ ಹೇಳಬೇಕಾಗಿದೆ. ಒಂದು ರೀತಿಯ ಎಕ್ಸ್‌ಪ್ಯಾನ್‌ಷನ್ ವಿಚಾರದಲ್ಲಿ ಹೇಳುವುದಾದರೆ ಎಕ್ಸ್‌ಪ್ಯಾನ್‌ಷನ್ ಮಾಡುವುದು ತಪ್ಪು ಎಂದು ನಾನು ಹೇಳಲಿಲ್ಲ. ಎಕ್ಸ್‌ಪ್ಯಾನ್‌ಷನ್ ಮಾಡುವಾಗ ಒಂದು ದೃಷ್ಟಿಯಲ್ಲಿ ಮಾಡಬೇಕು. ಕೆಲವು ಕಾರ್ಖಾನೆಗಳಲ್ಲಿ ಎಕ್ಸ್‌ಪ್ಯಾನ್‌ಷನ್ ಮಾಡಲು ಹೋಗುವ ದಾರಿಯಲ್ಲಿ ದಾರಿ ತಪ್ಪುವುದರಿಂದ ಸಾಕಷ್ಟು ಆಲೋಚನೆ ಮಾಡಬೇಕೆಂದು ನಾನು ಹೇಳಿದ್ದೇನೆ. ಒಂದು ಕೈಗಾರಿಕೆ ಸಹಜವಾಗಿ ಹೇಗೆ ಬೆಳೆಯಬೇಕು, ಹೇಗೆ ಬೆಳೆಯುತ್ತದೆ ? ತನಗೆ ಬೇಕಾದ್ದನ್ನು ತಾನೇ ತಯಾರು ಮಾಡುವುದರಿಂದ ಅದನ್ನು ಆರ್ಥಿಕ ದೃಷ್ಟಿಕೋನದಿಂದ ನೋಡಿದರೆ ಅದು ಸರಿಯಲ್ಲ. ಒಂದು ದೇಶ ಕೂಡ ಯಾವುದು ಉತ್ಪಾದನೆ ಮಾಡುವುದಕ್ಕೆ ಸಾಧ್ಯ ಅದನ್ನು ಮಾಡಬೇಕೇ ಹೊರತು ಪ್ರಪಂಚದಲ್ಲಿದ್ದುದನ್ನೆಲ್ಲಾ ತಾನೇ ಮಾಡಬೇಕು ಬೇರೆ ಯಾವ ದೇಶದಿಂದಲೂ ತರಿಸಬಾರದು ಎಂದು ಮಾಡಿದರೆ ಅದು ಆರ್ಥಿಕವಾಗಿ ಸರಿಯಾದ ನೀತಿಯಲ್ಲ. ಎಂ. ಪಿ. ಎಂ. ನವರು ನ್ಯೂಸ್‌ಪ್ರಿಂಟ್ ಮಾಡುವುದು ತಪ್ಪು ಎಂದು ಹೇಳಿಲ್ಲ. ಶುಗರ್ ಫ್ಯಾಕ್ಟರಿಯನ್ನು ಮಾಡಬೇಕಾದ ಅಗತ್ಯ ಇರಲಿಲ್ಲವೆಂದು ಹೇಳಿದೆ. ಆ ಶುಗರ್ ಫ್ಯಾಕ್ಟರಿಗೆ ಬೇಕಾಗಿರತಕ್ಕಂಥದ್ದಕ್ಕೆ ಇನ್ನೊಂದು ಫ್ಯಾಕ್ಟರಿ ಮಾಡುವುದೆಲ್ಲಾ ಸರಿಯಾದುದಲ್ಲವೆಂದು ಹೇಳಿದೆ. ತಾನೇ ತಯಾರು ಮಾಡಲಿಕ್ಕೆ ಹೋದರೆ ಓವರ್‌ಹೆಡ್ ಬರ್ಡನ್ ಆಗುತ್ತದೆ. ಮ್ಯಾನೇಜ್‌ಮೆಂಟ್ ಕ್ಯಾಪಾಸಿಟಿ ಸಾಕಾಗುವುದಿಲ್ಲ, ಕುಸಿತವಾಗುತ್ತದೆಂದು ನಾನು ಹೇಳಿರತಕ್ಕದ್ದು. ಈಗ ಗೌರ್ನ್‌ಮೆಂಟ್ ಸೋಪ್ ಅಂಡ್ ಡಿಟರ್‌ಜೆಂಟ್ ಫ್ಯಾಕ್ಟರಿಯ ಆಡಿಟರ್ಸ್ ಕಾಪಿಯನ್ನು ಹಂಚಿರತಕ್ಕವರು ಯಾರೋ ಅತೃಪ್ತ ಗುಂಪಿನವರು ಇರಬೇಕು. ಆ ಪೇಪರ್ಸ್ ಅನ್ನು ಓದಿ ನೋಡಿದಾಗ ಒಟ್ಟಿನಲ್ಲಿ ಅಲ್ಲಿ ಏನೋ ಒಂದು ಕುತಂತ್ರ ಪಿತೂರಿ ಇದೆ ಎನ್ನುವ ಭಾವನೆ ಬರುವುದರಿಂದ.........

ಶ್ರೀ ಜೆ. ಎಚ್. ಪಟೇಲ್.—ಎಕ್ಸ್‌ಪ್ಯಾನ್‌ಷನ್ ಪ್ರಾಜೆಕ್ಟ್ ಅದಕ್ಕೆ ಸಂಬಂಧಪಟ್ಟ ಹಾಗೆ ಮೊನ್ನೆ ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ಜ್ಯುಡಿಶಿಯಲ್ ಎನ್‌ಕ್ವಯರಿ ಮಾಡುವುದಕ್ಕೆ ಒಪ್ಪಿಕೊಂಡಿದ್ದೇನೆ. ಆದ್ದರಿಂದ ಅದನ್ನು ಅಲ್ಲಿಗೆ ನಿಲ್ಲಿಸಿ.

ಛೇರ್ಮನ್.—ನಾನು ಏನನ್ನು ಮಾಡಬಾರದೆಂದು ಹೇಳಿದ್ದೇನೆ ಅದನ್ನು ಮಾಡುವುದಕ್ಕೆ ಹೊರಟಿದ್ದೀರಿ. ತಾವು ಸ್ಪಷ್ಟೀಕರಣ ಮಾತ್ರ ಕೇಳಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ ತಾವು ಕುರ್ಚಿ ತುಂಬಾ ಕುಳಿತಿದ್ದೀರಿ. ತಾವು ಹಾಗೆ ಕುಳಿತುಕೊಂಡಿರುವುದು ಭೂಷಣವಾಗಿದೆ, ತುಂಬಾ ಚೆನ್ನಾಗಿ ಕಾಣಿಸುತ್ತಿದ್ದೀರಿ. ಆಮೇಲೆ ಬ್ಯಾಂಕಿಂಗ್ ಬಗ್ಗೆ ನಮ್ಮ ಎಕಾನಮಿಕ್ ಪಿರೆವಿಂಡ್‌ನ ತುದಿಯಲ್ಲಿ ಇದು ಇದೆಯೆಂದು ಹೇಳಿದೆ. ಮುಖ್ಯವಾಗಿ ನಾನು ಹೇಳಬೇಕಾದ ವಿಚಾರವನ್ನು ನಿನ್ನೆ ಮಾತನಾಡುವಾಗ ಹೇಳಿದ್ದೇನೆ. ಇಂಡಸ್ಟ್ರಿ ಬಗ್ಗೆ ಹೇಳುತ್ತಾ ಬಾಕಿ ಎಲ್ಲ ಫೈನಾನ್ಸ್ ಮಾಡಿ ಕ್ರುಶಿಯಲ್ ಟೈಮ್ಸ್‌ನಲ್ಲಿ ಕೈಬಿಡುತ್ತಾರೆ. ಯಾವಾಗ ಅಂದರೆ ಮಾರ್ಕೆಟಿಂಗ್ ಹೊತ್ತಿಗೆ ವರ್ಕಿಂಗ್ ಕ್ಯಾಪಿಟಲ್ ಅದಕ್ಕೆ ಡೆಫನಿಷನ್ ಕೊಟ್ಟುಕೊಂಡು ಬಿಟ್ಟಿದ್ದಾರೆ. ಆದರೆ ಮಾರ್ಕೆಟಿಂಗ್ ಕೆಲವುದರಲ್ಲಿ ಇನ್‌ಕ್ಲೂಡ್ ಆಗಿದೆ ಕೆಲವುದರಲ್ಲಿ ಆಗಿಲ್ಲ. ಮಾರ್ಕೆಟಿಂಗ್ ಅಂಡ್ ಪಬ್ಲಿಸಿಟಿ ಮಾಡತಕ್ಕ ಸಂದರ್ಭ ಯಾವಾಗ ಬರುತ್ತದೆ ಆವಾಗ ಅವನ ಹತ್ತಿರ ಹಣವಿರುವುದಿಲ್ಲ. ಆವಾಗ ಅವನ ವಿರೋಧವಾಗಿರುವ ಲಾಬಿಗಳು ಅವನ ತಿಥಿ ಮಾಡುತ್ತವೆ.

ಶ್ರೀ ಜೆ. ಎಚ್. ಪಟೇಲ್.—ಕೆ.ಎಸ್.ಎಫ್.ಸಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ. ಮಂತ್ರಿತರ ಹಣ ಕೊಡುವ ಸಂಸ್ಥೆಗಳು ಏನಿವೆ ಅವರ ಗಮನಕ್ಕೆ ಈಗಾಗಲೇ ಇದನ್ನು ತಂದಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕೆಮಿಕಲ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ, ತಮ್ಮ ಸರ್ಕಾರ ಬಂದಮೇಲೆ ಎಷ್ಟು ಲೈಸೆನ್ಸ್ ಕೊಟ್ಟಿದ್ದೀರಿ ? ಕೆಲವು ಅಗತ್ಯಕ್ಕಿಂತ ಜಾಸ್ತಿ ಲೈಸೆನ್ಸ್ ಕೊಟ್ಟಿದ್ದೀರಿ. ಅನೇಕರು ಈ ಲೈಸೆನ್ಸ್ ಅನ್ನೇ ಒಂದು ಟ್ರೇಡ್ ಮಾಡಿಕೊಂಡು ಬಿಡುತ್ತಿದ್ದಾರೆ. ಉತ್ಪಾದನೆ ಏನೂ ಮಾಡುತ್ತಿಲ್ಲ. ಇದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಕೆಮಿಕಲ್ ಇಂಡಸ್ಟ್ರೀಸ್ ಅಂದರೆ ಇಂಡಸ್ಟ್ರಿಯಲ್ ಆಲ್ಕೋಹಾಲ್ ಉಪಯೋಗ ಮಾಡತಕ್ಕ ಇಂಡಸ್ಟ್ರೀಸ್‌ಗಳೂ ಇವೆ, ರೆಕ್ಟಿಫೈಡ್ ಸ್ಪಿರಿಟ್ ಉಪಯೋಗ ಮಾಡತಕ್ಕ

ಇಂಡಸ್ಟ್ರೀಸ್‌ಗಳೂ ಇದ್ದಾವೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಮಾನ್ಯ ಸದಸ್ಯರು ಈಗ ನೆನಪು ಮಾಡಿದ್ದಾರೆ. ಕೆಲವು ಮಂತ್ರಿಗಳ ಹತ್ತಿರ ಇರತಕ್ಕವರು ಹಾಗೂ ಅವರ ಸಂಬಂಧಿಕರು ಲೈಸೆನ್ಸ್ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ನನ್ನ ಮಗ ೧೯೮೦ನೇ ಇಸವಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಟ್ರೈನಿಂಗ್ ಆದವನು. ಅವನು ೧೯೮೧ರಲ್ಲಿ ಹೋಲ್‌ಸೇಲ್ ಏಜೆನ್ಸಿ ಮತ್ತಿತರ ಬೇರೆ ಬೇರೆ ಏಜೆನ್ಸಿಗಳ ಒಂದು ಅಂಗಡಿಯನ್ನು ಸ್ಥಾಪನೆ ಮಾಡಿದ. ಅವನ ಹತ್ತಿರ ಅವನ ಅಜ್ಜ ಕೊಟ್ಟಿದ್ದ ಹಣವಿತ್ತು. ನನಗೆ ಸರ್ಕಾರಿ ನೌಕರಿ ಬೇಡವೆಂದು ಅವನು ಅಂಗಡಿಯನ್ನು ಮಾಡಿಕೊಂಡಿದ್ದಾನೆ. ಹೀಗೆ ಅದು ಸಿಮೆಂಟ್ ಮಾರುವುದು ಇರಬಹುದು, ಕಬ್ಬಿಣ ಮಾರುವುದು ಇರಬಹುದು ಅಥವಾ ವೈನ್ ಮಾರುವುದು ಇರಬಹುದು ಅದರ ಜೊತೆಗೆ ಒಂದು ಪೇಯಿಂಟಿಂಗ್ ಇಂಡಸ್ಟ್ರೀಸ್ ಎಂತಲೂ ಇತ್ತು. ಈ ಪೇಯಿಂಟಿಂಗ್ ಮೆಟೀರಿಯಲ್ಸ್‌ನಲ್ಲಿ ಜಾಸ್ತಿ ರೆಕ್ಟಿಫೈಡ್ ಸ್ಪಿರಿಟ್ ಆ್ಯಡ್ ಮಾಡುವುದು ಇಷ್ಟು ಭಾಗ ಇದೆ. ಅದೇನೂ ಮಿಸ್‌ಯೂಸ್ ಆಗಿದೆಯೋ ಎಂಬುದನ್ನು ನಾನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತೇನೆ.

ಈ ಸಂದರ್ಭದಲ್ಲಿ ಮಾನ್ಯ ಶ್ರೀನಿವಾಸ್ ಒಂದು ಮಾತನ್ನು ಹೇಳಿದರು, ಅದೇನೆಂದರೆ, ಮಂತ್ರಿಗಳು ತಮ್ಮ ಮಕ್ಕಳಿಗೆ ಮತ್ತು ಸಂಬಂಧಿಕರಿಗೆ ಲೈಸೆನ್ಸ್ ಕೊಡುವುದು ಮಹಾತ್ಮಾಗಾಂಧಿ ಯವರು ಮುಟ್ಟಿದ ವ್ಯಾಲ್ಯು ಬೇಸ್ಡ್ ಪೊಲಿಟಿಕ್ಸ್‌ಗೆ ಸರಿಯೇ ಎಂದು. ಆದರೆ, ಹಿಂದಿನ ಪ್ರಧಾನ ಮಂತ್ರಿಯಾದವರು ತಮ್ಮ ಮಗಳನ್ನ ನಂತರ ಅವರು ತನ್ನ ಮಗನನ್ನೂ ಪ್ರಧಾನಿಯಾಗಿ—ಅದು ಮಾರುತಿ ಕಾರು ಇರಬಹುದು ಅಥವಾ ಮತ್ತೊಂದು ಇರಬಹುದು—ಮಾಡಿಕೊಂಡು ಬಂದಿರುವುದರಿಂದ ಶ್ರೀನಿವಾಸ್ ಮಗನಿಗೆ ಅಥವಾ ಪಟೇಲ್ ಮಗನಿಗೆ ಇದು ಬಹಳ ಕಷ್ಟವಾಗುತ್ತದೆ. ನಾನು ಮಂತ್ರಿ ಯಾಗಿರುವುದರಿಂದ ನೀನು ಉದ್ಯೋಗ ಮಾಡಬೇಡ ಎಂದು ಹೇಳಲು ಕಷ್ಟವಾಗುತ್ತದೆ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಮಂತ್ರಿ ಮಗ ಇಂಡಸ್ಟ್ರಿ ಮಾಡಿಸಿಕೊಂಡರೆ ತಪ್ಪಿಲ್ಲ, ಆದರೆ ಅಪ್ಪನೇ ಮಂತ್ರಿ ಪದವಿಯನ್ನೇ ಇಂಡಸ್ಟ್ರಿ ಮಾಡಿಕೊಂಡರೇ ಅದು ತಪ್ಪಾಗುತ್ತದೆಂದು ನಾನು ನಿನ್ನೆ ಹೇಳಿದೆ.

ಶ್ರೀ ಜೆ. ಹೆಚ್. ಪಟೇಲ್.—ಯಾವ ಮಕ್ಕಳಿಗೆ ಮಾಡಲು ಕೆಲಸವಿರುವುದಿಲ್ಲವೋ, ಆಗ ಅಪ್ಪನ ಮಂತ್ರಿ ಪದವಿಯೇ ಒಂದು ಇಂಡಸ್ಟ್ರಿಯಾಗುತ್ತದೆ. ಅದು ಆಗಬಾರದೆಂದೇ ನಾನು ಇಂಡಸ್ಟ್ರಿ ಹಾಕಿಸಿಕೊಟ್ಟಿದ್ದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕೆಮಿಕಲ್ ಇಂಡಸ್ಟ್ರಿ ಬಗ್ಗೆ ಮಾತು ಬಂದಿರುವುದರಿಂದ, ಸ್ಪಷ್ಟೀಕರಣ ಕೊಡಿ ಎಂದು ನಾನು ಕೇಳಿದೆ. ನೀವು ಇವತ್ತು ನಿಮ್ಮ ಬಳಿ ವಿವರ ಇಲ್ಲದಿದ್ದರೂ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಒಟ್ಟು ವಿವರ ಕೊಡಬೇಕೆಂದು ಮಾತ್ರ ನಾನು ಈ ಸಂದರ್ಭದಲ್ಲಿ ಕೋರುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಆಡಿಟಿಂಗ್ ಬಗ್ಗೆ ಕೇಳಿದಾಗ, ಮೂರು ವರ್ಷ ಟೆಕ್ನಿಕಲ್ ಆಗಿ ಸ್ವಲ್ಪ ತೊಂದರೆ ಇದೆ ಎಂದರು. ವರ್ಷವರ್ಷವೂ ಆಡಿಟ್ ಆದರೆ ನಮಗೆ ಸ್ಪಷ್ಟ ಚಿತ್ರ ಸ್ವಲ್ಪ ದೊರಕುತ್ತದೆ ಮತ್ತು ಒಂದು ಕಂಟ್ರೋಲ್ ಇರುತ್ತದೆ. ಇದರಿಂದ ನಮಗೆ ಸ್ಪಷ್ಟ ಚಿತ್ರ ಸಿಗುತ್ತದೆ. ಕೇವಲ under Report under Audit ಎಂದು ಹೇಳುತ್ತಿರುವುದನ್ನು ತಪ್ಪಿಸಬೇಕು. ವರ್ಷವರ್ಷವೂ ಇದನ್ನು ಏನಾದರೂ ಮಾಡಿ ಆಡಿಟ್ ಮಾಡುವುದರ ಬಗ್ಗೆ ನಿರ್ಲಕ್ಷ್ಯ ಬೇಡ ಎಂದು ನಾನು ಹೇಳಬಯಸುತ್ತೇನೆ. ಡೈರೆಕ್ಟೊರೇಟ್ ಆಫ್ ಷುಗರ್ ಬಗ್ಗೆ ಹೇಳಿದೆ. ಮಾನ್ಯ ಪಟೇಲ್‌ರವರು ರಿಪ್ಲೈ ಮಾಡಲಿಲ್ಲ. ಓವರ್ ಕಾನ್ಸಂಟ್ರೇಶನ್ ಆಗುವುದು ಬೇಡ. ಈಗ ಜಿಲ್ಲಾಧಿಕಾರಿಗಳಿಗೆ ಕೆಲವು ಅಧಿಕಾರ ಇರುತ್ತದೆ. ಅದನ್ನು ಕಿತ್ತು ಕೊಂಡರೆ ತೊಂದರೆ ಆಗುತ್ತದೆ. ಉದಾಹರಣೆಗೆ ಬೀದರ್‌ನಲ್ಲಿ ಗಲಾಟೆಯಾಗುತ್ತದೆ, ಅಲ್ಲಿ ೧೨ ಷುಗರ್ ಯುನಿಟ್ಸ್ ಇವೆ. ಅವುಗಳ ಬಗ್ಗೆ ಇರುವ ಪವರ್ಸ್‌ನ್ನು ಜಿಲ್ಲಾಧಿಕಾರಿಗಳಿಗೆ ಕೊಡಿ, ಓವರಾಲ್ ಪವರ್ಸ್‌ಗಳನ್ನು ಶುಗರ್ ಡೈರೆಕ್ಟರಿಗೆ ಕೊಡಿ ಎಂದು ನಿನ್ನೆ ನಾನು ಹೇಳಿದೆ. ಅದನ್ನು ಅವರು ಪರಿಶೀಲಿಸಬೇಕೆಂದು ಕೋರುತ್ತೇನೆ,

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೆ, ಆಡಿಟ್ ಡಿಲೇ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಸ್ಟೇಟ್ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್, ಮಾನಿಟರಿಂಗ್ ಅಂಡ್ ಯೂಸಿಂಗ್ ಕಂಪ್ಯೂಟರಿಂಗ್. ಇದರ ಸ್ಥಿತಿ ಇನ್ನು ಮುಂದೆ ಅಷ್ಟು ಕೆಟ್ಟದಾಗಿರುವುದಿಲ್ಲ. ಶುಗರ್ ಡೈರೆಕ್ಟೋರೇಟ್‌ನಲ್ಲಿ. ಡೀಸೆಂಟ್ರಲೈಸೇಶನ್ ಮಾತನ್ನು ನಾನು ಒಪ್ಪುತ್ತೇನೆ. ಪ್ರತಿಯೊಂದಕ್ಕೂ ಯಾವುದೇ ಜಿಲ್ಲೆಯಿಂದ ಅಥವಾ ಸುತ್ತ ಮುತ್ತ ಪ್ರದೇಶಗಳಿಂದ ಬೆಂಗಳೂರಿಗೆ ಬರಬೇಕೆಂಬ ಮಾತನ್ನು ನಾನು ಒಪ್ಪುವುದಿಲ್ಲ. ಡೆಪ್ಯುಟಿ ಡೈರೆಕ್ಟರ್ ಎಂದು ಮಾಡಿ. ಒಬ್ಬ ಆಫೀಸರ್‌ನ್ನು ಇಡುವುದಕ್ಕೆ ನಾನು ಯೋಚನೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ೩೨ ಸಾವಿರ ಜನ ಇದ್ದರು ಈಗ ೧೦ ಸಾವಿರ ಜನಕ್ಕೆ ಇಳಿದಿದ್ದಾರೆ. ಇನ್ನು ೫-೬ ವರ್ಷಗಳಲ್ಲಿ ಕ್ಲೋಸ್ ಆಗುವ ಸ್ಥಿತಿ ಇದೆ. ಇದಕ್ಕೆ ಆಲ್ಟರ್‌ನೇಟ್ ಪ್ರೊವೈಡ್ ಮಾಡಿ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಬಿ. ಯಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಮಾತನಾಡುತ್ತಾ, ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಾರುಗಳ ಬಗ್ಗೆ ಹೇಳಿದೆ. ಅದಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ಸರ್ಕಾರ ಬೋರ್ಡ್ ಇಲ್ಲ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಾರ್‌ಗಳಿಗೆ ರಾಜ್ಯ ಸರ್ಕಾರದ ಬೋರ್ಡ್ ಹಾಕಿಸುವ ವ್ಯವಸ್ಥೆ ಮಾಡಬೇಕು. ಮೊದಲು ಈ ಪದ್ಧತಿ ಇತ್ತು. ಇದರಲ್ಲಿ ದುರುಪಯೋಗ ಆಗುವ ಸಂದರ್ಭವಿದೆ. ನಾನು ಹೇಳಿದೆ, ಕೆಲವು ಅಧಿಕಾರಿಗಳು ಕಾರ್ಖಾನೆ ನಡೆಸುತ್ತಿದ್ದಾರೆ ಎಂದು. ಹಾಗೆ ನಡೆಸಬಾರದೆಂದು ನಾನು ಹೇಳುವುದಿಲ್ಲ. ಆದರೆ ಅಲ್ಲಿ ಇನ್ನೊಂದು ಇವರ ಕಾರ್ಖಾನೆ ಮಾಡಿಕೊಂಡು, ಇಲ್ಲಿಗೆ ಬೇಕಾದಂತಹ ಎಲ್ಲಾ ರಾ ಮೆಟೀರಿಯಲ್ಸ್‌ಗಳನ್ನು ಅಲ್ಲಿಂದ ತರುತ್ತಿದ್ದಾರೆ. ಉದಾಹರಣೆಗೆ, ಜಿಟಿಟಿಸಿ ನಲ್ಲಿ ಮುರಳಿ ಮೋಟರ್ಸ್ ಎಂದು ಒಂದು ಇದೆ. ಸ್ವಾಮಿ ಅದು ಯಾರದೋ ಉನ್ನತ ಅಧಿಕಾರಿಯು ಮಾವನ ಹೆಸರಿನಲ್ಲಿದೆ, ಅಲ್ಲಿ ೫೦೦ ರೂಪಾಯಿ ಕೆಲಸ ಮಾಡಿಸಿ, ಎರಡು,-ಎರಡೂವರೆ,-ಮೂರು ಸಾವಿರ ಪೇಮೆಂಟ್ ಆಗಿದೆ. ಜಪಾನ್‌ನಿಂದ ಒಂದು ವೈರ್ ಎರೋಷನ್ ಮೆಷಿನ್‌ನ್ನು ಜಿಟಿಟಿಸಿ ಯವರು ತರಿಸಿದರು. ಅದು ಈಗ ಮೂಲೆಗುಂಪಾಗಿದೆ. ಅಲ್ಲಿನ ಕಂಪ್ಯೂಟರ್ ಮೆದುಳನ್ನು ಹೆಗ್ಗಣ ತಿಂದು ೨೫ ಲಕ್ಷ ರೂಪಾಯಿ ನಷ್ಟವಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮತೆಗೆದುಕೊಂಡು ಬಿಗಿ ಮಾಡಬೇಕಾಗುತ್ತದೆ,

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಹೇಳಿರತಕ್ಕಂತಹ ಮಾತು ಸತ್ಯವಾಗಿದ್ದರೆ. ನಾನು ಕ್ರಮ ತೆಗೆದುಕೊಳ್ಳುತ್ತೇನೆ. We will take action.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೈಗಾರಿಕಾ ಸಚಿವರು ಅನೇಕ ವಿಷಯಗಳನ್ನು ಹೇಳಿದರು, ಹತ್ತಿ ಗಿರಣಿಗಳ ಬಗ್ಗೆ ಮತ್ತು ಅಲ್ಲಿರತಕ್ಕಂತಹ ಅನೇಕ ವಿಷಯಗಳ ಬಗ್ಗೆಯೂ ತಿಳಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಹತ್ತಿ ಗಿರಣಿಗಳು ಬಹಳ ತೊಂದರೆಯಲ್ಲಿವೆ. ಈಗ ಮುಚ್ಚಿರುವುದು ಮಾತ್ರವಲ್ಲ, ನಡೆಯುತ್ತಿರುವುವೂ ತೊಂದರೆಯಲ್ಲಿವೆ. ಆ ಗಿರಣಿಗಳ ಮಾಲೀಕರನ್ನು ಕರೆಸಿ ತಾವು ಮಾತನಾಡಿ, ಏನಾದರೂ ಸಹಾಯ ಮಾಡುವುದಕ್ಕೆ ಪ್ರಯತ್ನಪಟ್ಟರೆ ಹಾಗೂ ಪರ್ಯಾಯವಾಗಿ ಏನಾದರೂ ಮಾಡಿದರೆ, ಖಂಡಿತವಾಗಿ ಈ ರಾಜ್ಯದಲ್ಲಿ ಹತ್ತಿ ಗಿರಣಿಗಳು ಉಳಿಯುತ್ತವೆ, ಇಲ್ಲದಿದ್ದರೆ ತೊಂದರೆಗೀಡಾಗುತ್ತವೆ. ಇದನ್ನು ತಾವು ಗಮನಿಸಬೇಕು. ಇನ್ನು ಸಕ್ಕರೆ ಗಿರಣಿಗಳು ನಮ್ಮ ರಾಜ್ಯದಲ್ಲಿ ಚೆನ್ನಾಗಿ ನಡೆಯುತ್ತಿವೆ ಎಂದು ಹೇಳುತ್ತಿದ್ದಾರೆ. ವಾಣಿ ವಿಲಾಸ ಕಾರ್ಖಾನೆ ಮತ್ತು ಮಹದೇಶ್ವರ ಸಕ್ಕರೆ ಕಾರ್ಖಾನೆ, ಕೊಳ್ಳೇಗಾಲ ಸಕ್ಕರೆ ಕಾರ್ಖಾನೆ, ಇವೆಲ್ಲಾ ಸುಮಾರಾಗಿ ಮುಚ್ಚಿ ಹೋಗಿವೆ. ಅಲ್ಲಿ ಕೆಲಸ ಮಾಡತಕ್ಕಂತಹವರಿಗೆ ಕೆಲಸ ಇಲ್ಲದಾಗಿದೆ. ಆ ಬಗ್ಗೆ ತಾವು ಗಮನಿಸಬೇಕು. ಮತ್ತು ನಮ್ಮ ದಾವಣಗೆರೆಯಲ್ಲಿ ಒಂದು ವರ್ಕ್‌ಶೆಡ್ ಕಟ್ಟಿದ್ದಾರೆ. ಆದರೆ ಇನ್ನೂ ಅದು ಪ್ರಾರಂಭವಾಗಿಲ್ಲ. ೨ ಕೆಲಸ ಮಾಡುತ್ತಿವೆ. ಸುಮಾರು ೧೦ ಖಾಲಿ ಇವೆ. ಮಾನ್ಯ ಅಧ್ಯಕ್ಷರೆ, ಇದಕ್ಕೆ ಕಾರಣ ಗೊತ್ತಿಲ್ಲ. ಅಲ್ಲಿ ವಿದ್ಯುಚ್ಛಕ್ತಿ, ನೀರಿನ ತೊಂದರೆ. ಇದೆ. ಅಲ್ಲಿನ ಜಮೀನನ್ನು ತಮ್ಮ ಇಲಾಖೆಗೆ ತೆಗೆದುಕೊಂಡಿದ್ದಾರೆ. ಹೆಚ್ಚು ಲಾಭಕ್ಕೆ ಮಾರುತ್ತಿದ್ದಾರೆ. ಜಮೀನನ್ನು ಇಂಡಸ್ಟ್ರಿಗೋಸ್ಕರ ತೆಗೆದುಕೊಂಡಿದ್ದಾರೆ. ಹಾಗಿದ್ದಲ್ಲಿ, ಅವರಿಗೆ ನೀವು ವಾಯಿದೆ ಹಾಕಿ, ಇಷ್ಟು ದಿನಗಳೊಳಗೆ ನೀವು ಪ್ರಾರಂಭ ಮಾಡಬೇಕೆಂದು ಹೇಳಿ. ಅದನ್ನು ತಾವು ಮಾಡದಿದ್ದರೆ, ಜಮೀನನ್ನು ಮಾರಾಟ

ಮಾಡಿ, ಹಣ ತೆಗೆದುಕೊಳ್ಳುವ ಅವಕಾಶ ಇದೆ. ಅದನ್ನು ತಾವು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಜವಳಿ ಉದ್ಯಮಗಳ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ರೋಗಗ್ರಸ್ಥ ಗಿರಣಿಗಳು ಕೆಲವಿವೆ. ಅವುಗಳನ್ನು ಖಾಸಗಿಯಾಗಿ ಆರೋಗ್ಯ ಸ್ಥಿತಿಗೆ ತರುವುದಕ್ಕೆ ಸಾಧ್ಯವಿಲ್ಲದಿದ್ದರೆ. ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಪಂಪಾಪತಿಯವರು ದಾವಣಗೆರೆಯಲ್ಲಿನ ಶಂಕರ್ ಮಿಲ್ಸ್ ಬಗ್ಗೆ ಹೇಳಿದ್ದರು. ಅಲ್ಲಿನ ಮಾಲೀಕರು ಒಂದೆರಡು ಬಾರಿ ನನ್ನ ಬಳಿ ಬಂದಿದ್ದರು. ಕಾರ್ಮಿಕರ ಹಿತದೃಷ್ಟಿಯಿಂದ ನಾನು ಕೆಲವು ಸಲಹೆಗಳನ್ನು ಹೇಳಿದ್ದೇನೆ. ನಾನು ಹೇಳಿದ ಹಾಗೆ ನಡೆದುಕೊಳ್ಳಲು ತಯಾರಾದರು. ಈಗ ಅನುಕೂಲವಾಗಿದೆ. ಇನ್ನು ಶುಗರ್ ಫ್ಯಾಕ್ಟರಿಗಳ ಬಗ್ಗೆ ಆಲ್ ಇಂಡಿಯಾ ಪಾಲಿಸಿ ಏನಿದೆ, ಅದರಿಂದ ಈ ವರ್ಷ ಅನುಕೂಲವಾಗಿದೆ. ಕಳೆದ ಎರಡು ವರ್ಷಗಳಿಂದ ಶುಗರ್ ಫ್ಯಾಕ್ಟರಿಗಳು ಏನು ಹೊಡೆತ ತಿಂದವು, ಅದು ಈಗ ಇಲ್ಲ. ಈಗ ಎಲ್ಲಾ ಅನುಕೂಲವಾಗಿದೆ. ಇನ್ನು ವಾಣಿ ವಿಲಾಸ ಫ್ಯಾಕ್ಟರಿ ಬಗ್ಗೆ ಹೇಳಬೇಕೆಂದರೆ, ಅಲ್ಲಿ ಇರಿಗೇಶನ್ ಫೆಸಿಲಿಟಿ ಕಡಿಮೆ ಇದೆ ಎಂದು ಹೇಳಲಾಗಿದೆ. ಆದ್ದರಿಂದ ಆ ಫ್ಯಾಕ್ಟರಿಗಳು ಸಿಕ್ ಆಗುತ್ತವೆ. ಅದಕ್ಕೆ ಸುಮಾರು ೧೫ ಕೋಟಿ ರೂಪಾಯಿಯ ಪ್ರಾಜೆಕ್ಟ್ ಮಾಡಿದ್ದಾರೆ. ಇರ್ರಿಗೇಶನ್ ವೆಲ್ಸ್ ಮಾಡಿ, ಅವುಗಳಿಂದ ಕಬ್ಬು ಬೆಳೆಯಲು ಅನುಕೂಲವಾಗುತ್ತದೆ. ಈ ಬಗ್ಗೆ ಒಂದು ಸ್ಕೀಂನ್ನು ನಾನು ಗವರ್ನಮೆಂಟ್ ಆಫ್ ಇಂಡಿಯಕ್ಕೆ ಕಳುಹಿಸಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ (ಕೈಗಾರಿಕಾ ರಾಜ್ಯ ಸಚಿವರು)—ಮಾನ್ಯ ಅಧ್ಯಕ್ಷರೆ, ದಾವಣಗೆರೆಯಲ್ಲಿ ವರ್ಕ್ ಶೆಡ್‌ಗಳು ಖಾಲಿಯಿವೆ ಎಂದು ಮಾನ್ಯ ಪಂಪಾಪತಿಯವರು ಹೇಳಿದರು. ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ನೀರಿನ ಸಮಸ್ಯೆ ಇತ್ತು. ಈಗ ಅಲ್ಲಿನ ನೀರಿನ ಸಮಸ್ಯೆಯನ್ನು ಪರಿಹರಿಸಿದ್ದೇವೆ. ಈಗಾಗಲೇ ಶೆಡ್‌ಗಳನ್ನು ಅಲಾಟ್ ಮಾಡುತ್ತೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಭದ್ರಾವತಿ ಸಿಮೆಂಟ್ ಫ್ಯಾಕ್ಟರಿ ಮತ್ತು ಭದ್ರಾವತಿ ಐರನ್ ಓರ್ಸ್ ಬಗ್ಗೆ ಹೇಳಬೇಕೆಂದರೆ, ಅವು ಒಂದೇ ಮ್ಯಾನೇಜ್‌ಮೆಂಟ್‌ನಲ್ಲಿ ಬರುತ್ತವೆ. ಕೆಲವು ದಿನಗಳ ಹಿಂದೆ ಅಲ್ಲಿನ ಎಂ. ಡಿ. ಯವರು ಭದ್ರಾವತಿ ಸಿಮೆಂಟ್ ಫ್ಯಾಕ್ಟರಿಯಲ್ಲಿ ಸಿಮೆಂಟ್ ತುಂಬಲು ಗನ್ನಿ ಬ್ಯಾಗ್ಸ್ ಇಲ್ಲವೆಂದು ೧೫ ದಿನಗಳಿಂದ ಕೆಲಸ ನಿಲ್ಲಿಸಿದ್ದರು. ಇದು ಸರ್ಕಾರದ ಗಮನಕ್ಕೆ ಬಂದಿರಬಹುದೆಂದು ಭಾವಿಸುತ್ತೇನೆ. ಹಾಗಿದ್ದ ಪಕ್ಷದಲ್ಲಿ, ಈ ರೀತಿ ಮ್ಯಾನೇಜ್‌ಮೆಂಟ್ ಮಾಡಿದರೆ, ದೇಶದಲ್ಲಿನ ಇಂಡಸ್ಟ್ರಿಗಳ ಉದ್ಧಾರ ಹೇಗೆ ಆಗುತ್ತದೆಂಬುದನ್ನು ಕೇಳಬಯಸುತ್ತೇನೆ.

ಕೊಡಗು ಜಿಲ್ಲೆಯನ್ನು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆ ಎಂಬುದಾಗಿ ಪರಿಗಣಿಸಲಾಗಿದೆ. ಆದ್ದರಿಂದ ಇದನ್ನು ಆಧಾರವಾಗಿಟ್ಟು ಕೊಡಗಿನಲ್ಲಿ ಕೆಲವು ಕೈಗಾರಿಕೆಗಳು ಆಗಬೇಕು, ಆ ಬಗ್ಗೆ ತಾವು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇನೆ,

ಶ್ರೀ ಜೆ. ಎಚ್. ಪಟೇಲ್.—ಕೊಡಗಿನಲ್ಲಿ ಯಾವ ರೀತಿಯ ಕಚ್ಚಾ ಸಾಮಗ್ರಿಗಳು ಸಿಕ್ಕುತ್ತವೆ ಎಂಬುದನ್ನು ನೋಡಿಕೊಂಡು ಅಲ್ಲಿ ಯಾವ ಕೈಗಾರಿಕೆಗಳನ್ನು ತರುವುದಕ್ಕೆ ಸಾಧ್ಯ ಎಂಬುದನ್ನು ನಾನು ನೋಡುತ್ತೇನೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಹಣಕಾಸಿನ ಸಹಾಯ ಮತ್ತು ಸರ್ಕಾರದ ಸಂಪನ್ಮೂಲಗಳ ಆಧಾರದ ಮೇಲೆ ಅಲ್ಲಿ ತೆರೆಯುವಂಥ ಕೈಗಾರಿಕೆಗಳ ಬಗ್ಗೆ ಯೋಚನೆ ಮಾಡುತ್ತೇನೆ ಮಾನ್ಯ ಶ್ರೀನಿವಾಸ್‌ರವರು ಒಂದು ಪ್ರಶ್ನೆಯನ್ನು ಹಾಕಿ ಕರ್ನಾಟಕ ಸೋಪ್ ಅಂಡ್ ಡಿಟೆರ್‌ಜಂಟ್‌ನಲ್ಲಿರತಕ್ಕಂತಹ ತಾಂತ್ರಿಕ ನಿರ್ದೇಶಕರು ೯ ಲಕ್ಷ ರೂಪಾಯಿಗಳನ್ನು ಟಿ.ಎ. ಡಿ. ಎ. ಆಗಿ ತೆಗೆದುಕೊಂಡಿದ್ದಾರೆಂದು ಹೇಳಿದ್ದರು.

ಶ್ರೀ ಕೆ. ಎಚ್. ಶ್ರೀನಿವಾಸ್,—೧೦ ತಿಂಗಳಲ್ಲಿ ೪ ಲಕ್ಷ ಡ್ರಾ ಮಾಡಿದ್ದಾರೆಂದು ಹೇಳಿದ್ದೆ.

ಶ್ರೀ ಜೆ. ಎಚ್. ಪಟೇಲ್.—ಇಡೀ ಕಾರ್ಖಾನೆಯಲ್ಲಿ ಟಿ. ಎ. ಡಿ. ಎ. ಆಗಿ ೧೯೮೫–೮೬ನೇ ಸಾಲಿನಲ್ಲಿ ಖರ್ಚಾಗಿರತಕ್ಕಂತಹದು ೩,೭೯,೭೧೯ ರೂ.ಗಳು. ಅದರಲ್ಲಿ ತಾಂತ್ರಿಕ ನಿರ್ದೇಶಕರು ೫,೫೮೨ ರೂ.ಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಬೆಂಗಳೂರಿನಲ್ಲಿರುವ ಬಹಳ ತೀವ್ರ ಸ್ಥಿತಿಯಲ್ಲಿರುವ ಕಿಂಕೋ ಕಾರ್ಖಾನೆಯ ಬಗ್ಗೆ ಸನ್ಮಾನ್ಯ ಕೈಗಾರಿಕಾ ಸಚಿವರ ಗಮನ ಸೆಳೆದಿದ್ದೆ, ಆ ಬಗ್ಗೆ ಅವರ ಕ್ರಮ

ತೆಗೆದುಕೊಂಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಕಿಂಕೋ ಕಾರ್ಖಾನೆಯನ್ನು ರಸ್ತೆ ಸಾರಿಗೆ ಸಂಸ್ಥೆಯ ಜೊತೆಯಲ್ಲಿ ವಿಲೀನ ಮಾಡಬೇಕೆಂಬ ನಿರ್ಣಯವನ್ನು ಕೈಗಾರಿಕಾ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಕೆಲಸ ಇಲ್ಲದೆ ೫೩೦ ಕೆಲಸಗಾರರು ಕಳೆದ ತಿಂಗಳು ಸಂಬಳವನ್ನೇ ಪಡೆದಿಲ್ಲವೆಂದು ಕೇಳಿದ್ದೇನೆ, ಮೇಲಾಗಿ ಕಾರ್ಖಾನೆಯಲ್ಲಿ ಕಾರ್ಮಿಕರನ್ನು ಕರೆತರತಕ್ಕಂತಹ ಬಸ್ಸನೇ ಬಂದ್ ಮಾಡಿದ್ದಾರೆ. ಕಂಪನಿಯನ್ನೇ ಬಂದ್ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಆ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಬಿಜಾಪುರ ಜಿಲ್ಲೆ ವಿಸ್ತಾರದಲ್ಲಿ ಎರಡನೆಯದು. ಅಂತಹ ಜಿಲ್ಲೆಯಲ್ಲೂ ಸಾರ್ವಜನಿಕ ಉದ್ದಿಮೆಯಲ್ಲಿ ಕೈಗಾರಿಕಾ ರಂಗದಲ್ಲಿ ಮಾಡುವುದಕ್ಕಾಗಲಿಲ್ಲ. ಅಲ್ಲಿ ಇರತಕ್ಕಂತಹ ಸುಣ್ಣದ ಹರಳನ್ನು ಉಪಯೋಗ ಮಾಡಿಕೊಂಡರೆ ಅಲ್ಲೊಂದು ಸಿಮೆಂಟ್ ಕಾರ್ಖಾನೆಯನ್ನು ಸಾರ್ವಜನಿಕ ಉದ್ದಿಮೆಯ ರಂಗದಲ್ಲಿ ಹಾಕಬಹುದು. ಅದರ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ಏನಾದರೂ ಪ್ರಯತ್ನ ಮಾಡಂತ್ತಾರೆಯೋ ಎಂದು ಕೇಳಬಯಸುತ್ತೇನೆ,

ಶ್ರೀ ಜೆ. ಎಚ್. ಪಟೇಲ್.—ಕಿಂಕೋ ಕಾರ್ಖಾನೆಯ ಬಗ್ಗೆ ಮಾನ್ಯ ಸದಸ್ಯರು ಹೇಳಿರುವುದು ಪೂರ್ಣವಾಗಿ ಸರಿಯಲ್ಲ, ಕಾರ್ಖಾನೆ ತೊಂದರೆಯಲ್ಲಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಕಾರ್ಮಿಕರಿಗೆ ಸಂಬಳವನ್ನು ಆ ಕಾರ್ಖಾನೆಯಲ್ಲಿ ಆಗುವಂತಹ ಉತ್ಪಾದನೆಯ ಆಧಾರದ ಮೇಲೆ ಕೊಡಬೇಕಾಗಿದ್ದರೂ, ಕೆ.ಎಸ್.ಆರ್.ಟಿ.ಸಿ.ಯವರಿಂದ ಸಂಬಳವನ್ನು ಕೊಡಿಸುತ್ತಿದ್ದೇವೆ. ಕೆ.ಎಸ್.ಆರ್.ಟಿ.ಸಿ. ಬಸ್‌ನಿಂದಲೇ ಕಾರ್ಮಿಕರನ್ನು ಕೆಲಸಕ್ಕೆ ಕರೆತರುವಂತಹ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ. ಮತ್ತೆ ಕಿಂಕೋ ಕಾರ್ಖಾನೆಯನ್ನು ಕೆ.ಎಸ್.ಆರ್.ಟಿ.ಸಿ. ಜೊತೆಗೆ ವರ್ಗಾಯಿಸುವ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಮತ್ತೆ ಬಿಜಾಪುರ ಜಿಲ್ಲೆಯಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಸಾರ್ವಜನಿಕವಾಗಿ (ಪಬ್ಲಿಕ್ ಸೆಕ್ಟರ್‌ನಲ್ಲಿ) ತೆಗೆಯುವುದು ನಮ್ಮ ಯೋಜನೆಯಲ್ಲಿಲ್ಲ ನಾವು ಮೊನ್ನೆ ಹಿಂದೆ ಬಿಜಾಪುರಕ್ಕೆ ಹೋಗಿದ್ದಾಗ ಆ ಬಗ್ಗೆ ಒಂದು ವಿಚಾರ ಮಾಡಿದ್ದೇವೆ. ಅಲ್ಲಿ ಸಿಮೆಂಟ್ ಕಾರ್ಖಾನೆಯನ್ನು ಹಾಕುವುದಕ್ಕೆ ಬೇರೆಯವರು ಬರುತ್ತಾರೆ. ಅಲ್ಲಿ ಬೇರೆ ಯಾವುದಾದರೂ ಅಂದರೆ ಜವುಳಿ ಅಥವಾ ಎಲೆಕ್ಟ್ರಾನಿಕ್‌ಗೆ ಸಂಬಂಧಪಟ್ಟ ಉದ್ದಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಯಾರಾದರೂ ಮುಂದೆ ಬಂದರೆ ಬಿಜಾಪುರ ಒಳ್ಳೆಯ ಸ್ಥಳವೆಂದು ಹೇಳಿ ಅವರಿಗೆ ಪ್ರೋತ್ಸಾಹ ಕೊಡುತ್ತೇವೆ. ಅದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೋ ನೋಡೋಣ.

ಶ್ರೀ ಸಿ. ಪಿ ಮೂಡಲಗಿರಿಯಪ್ಪ.—ಸಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಹೂವಿನದರೆಯಲ್ಲಿ ಒಂದು ಮಿನಿ ಸಿಮೆಂಟ್ ಕಾರ್ಖಾನೆಗೆ ಲೈಸನ್ಸನ್ನು ಕೊಟ್ಟಿದ್ದಾರೆ. ಅದನ್ನು ಅವರು ಪ್ರಾರಂಭ ಮಾಡುವವರಿದ್ದಾರೆ. ಆದರೆ ಕೊಟ್ಟಿರತಕ್ಕಂತಹ ಸ್ಥಳ ಸರಿಯಾಗಿರುವಂತಹ ಸ್ಥಳ ಅಲ್ಲ, ಅಕ್ಕಪಕ್ಕದಲ್ಲಿರತಕ್ಕಂತಹ ತೆಂಗಿನ ಗಿಡಗಳಿಗೆ ತೊಂದರೆಯಾಗಬಹುದೆಂಬ ಅಲ್ಲಿನ ಜನರು ಭೀತಿಯಲ್ಲಿದ್ದಾರೆ ಆದ್ದರಿಂದ ಆ ಸ್ಥಳವನ್ನು ಬದಲಾಯಿಸಿ ಬೇರೆ ಕಡೆ ಲೈಸನ್ಸನ್ನು ಕೊಡಬಹುದೇ ?

ಶ್ರೀ ಜೆ. ಎಚ್. ಪಟೇಲ್.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಹರಿಹರ ಫಾಲಿಫೈಬರ್ ಕಾರ್ಖಾನೆಯಿಂದ ಹೊರಬರುವಂತಹ ಕೆಟ್ಟ ನೀರನ್ನು ನದಿಗೆ ಬಿಟ್ಟು ನದಿಯ ನೀರನ್ನು ಹೊಲಸು ಮಾಡಿ, ಆದರಿಂದ ಬೆಳೆಯುವುದಕ್ಕೂ ಯೋಗ್ಯವಾಗಿಲ್ಲದಂತೆ ಆಗಿದೆ. ಆ ನೀರನ್ನು ಜನ ಕುಡಿದರೂ ಅದರಿಂದ ರೋಗ ಬರುತ್ತದೆ. ದನಗಳು ಕುಡಿದರೆ ಸಾಯುತ್ತಿವೆ. ರೈತರು ಈ ಬಗ್ಗೆ ಗೊಂದಲವನ್ನೇ ಮಾಡುತ್ತಿದ್ದಾರೆ. ಅವರು ಏನು ಅಶುದ್ಧ ನೀರನ್ನು ಬಿಡುತ್ತಾರೆ, ಅದನ್ನು ಶುದ್ಧೀಕರಣ ಮಾಡಿ ಬಿಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಆ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ಜೆ. ಎಚ್. ಪಟೇಲ್.—ಈಗಾಗಲೇ ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೋ ಅಷ್ಟೆಲ್ಲಾ ಕಾರ್ಯಕ್ರಮವನ್ನು ಕೈಗೊಂಡಿದೆ. ೧೯೮೦ನೇ ಇಸವಿಯಲ್ಲಿ ಆ ಕಾರ್ಖಾನೆಯಿಂದ ಹೊರ ಹೋದಂತಹ ನೀರು ನದಿಯನ್ನು ಸೇರಿ, ನದಿಯಲ್ಲಿದ್ದಂತಹ ಮೀನುಗಳು ಸತ್ತವು ಎಂಬುದಾಗಿ ವರದಿಯಾಗಿತ್ತು. ನಮ್ಮ ಸರ್ಕಾರ ಬಂದ ನಂತರ ಕೆಲವು ದುರಸ್ತಿ ಕ್ರಮವನ್ನು ಕೈಗೊಂಡಿದ್ದೇವೆ. ವಾಸನೆ ಇದೆ. ಮೊದಲು ಆ ಕಾರ್ಖಾನೆಯಿಂದ ಹೊರಬರತಕ್ಕಂತಹ ನೀರಿನಿಂದ ಜನರ ಆರೋಗ್ಯದ ಮೇಲೆ ಅಪಾಯಕಾರಿಯಾದ ಪರಿಣಾಮವಾಗುತ್ತಿತ್ತು. ಅದಕ್ಕೆ ನಮ್ಮ ಸರ್ಕಾರ ಪಲ್ಯೂಷನ್

ಕಂಟ್ರೋಲ್ ಬೋರ್ಡಿನ ಅಧಿಕಾರಿಗಳಿಗೆ ಈ ವಿಷಯವನ್ನು ತಿಳಿಸಿ ಬೋರ್ಡಿನ ಪರಿಣಿತರನ್ನೇ ಸ್ಥಳಕ್ಕೆ ಕಳುಹಿಸಿ, ಅವರು ಕೊಟ್ಟಂತಹ ವರದಿಯ ಆಧಾರದ ಮೇಲೆ ೧೯೮೩ರಲ್ಲಿ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಆಗಿರತಕ್ಕಂತಹ ಎಫ್ಲ್ಯುಯೆನ್ಸ್ ಟ್ರೀಟ್‌ಮೆಂಟ್ ಪ್ಲಾಂಟ್‌ನ್ನು ಹಾಕಿದ ಮೇಲೆ, ಅದರಿಂದ ಹೊರಬರತಕ್ಕಂತಹ ನೀರು ಅಪಾಯಕಾರಿಯಾಗುವುದಿಲ್ಲ ಎಂಬುದಾಗಿ ವರದಿ ಬಂದಿದೆ. ನಾನೂ ಕೂಡ ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ಹೊಸ ಎಕ್ಯುಪ್‌ಮೆಂಟ್ ಹಾಕಿದ್ದಾರೋ ಇಲ್ಲವೋ ಎಂಬುದನ್ನು ನೋಡುವ ಸಲುವಾಗಿ ಪರಿಣಿತರನ್ನೂ ಕೂಡ ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದೇನೆ. ಆದರೆ ವಾಸನೆಯನ್ನು ಕಡಿಮೆ ಮಾಡುವುದಕ್ಕಾಗಿಲ್ಲ. ಪಕ್ಕದಲ್ಲಿ ದಲ್ಲಿರತಕ್ಕಂತಹ ೮-೧೦ ಹಳ್ಳಿಗಳಲ್ಲಿ ತುಂಬ ವಾಸನೆ ಬರುತ್ತಿತ್ತು. ಆ ವಾಸನೆಯನ್ನೂ ಕಡಿಮೆ ಮಾಡತಕ್ಕಂತಹದ್ದರ ಬಗ್ಗೆ ಸೋವಿಯತ್ ಯೂನಿಯನ್‌ನಲ್ಲಿ ಕಂಡು ಹಿಡಿದಿದ್ದಾರೆಂಬುದರ ಬಗ್ಗೆ ನಮಗೆ ಮಾಹಿತಿ ಬಂದಿದೆ, ಮಾಲೀಕರಿಗೆ ನಾವು ಹೇಳಿದ್ದೇವೆ. ನಿಮಗೆ ಅದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗುತ್ತವೆ ಎಂಬುದರ ವಿವರ ಬೇಕಾಗಿಲ್ಲ. ವಾಸನೆ ಕಡಿಮೆ ಮಾಡುವಂತಹ ತಾಂತ್ರಿಕತೆ ಇದ್ದರೆ ಅದನ್ನೂ ಅಳವಡಿಸಬೇಕು ಎಂಬುದಾಗಿ ಹೇಳಿದ್ದೇವೆ. ಆ ಪ್ರಕಾರ ಅವರು ಸಮಯವನ್ನು ತೆಗೆದುಕೊಂಡಿದ್ದಾರೆ. ಆದರೆ ನೀರಿನ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಯಾವುದೇ ತೊಂದರೆಯಾಯಿತು ಎಂಬುದರ ಬಗ್ಗೆ ದೂರು ಬಂದಿಲ್ಲ. ಎಲ್ಲ ರೀತಿಯ ಪ್ರಯೋಗಗಳನ್ನೂ ಮಾಡಿದ್ದೇವೆ. ಅವರೂ ಕೂಡ ಇದೇ ನೀರನ್ನು ಉಪಯೋಗ ಮಾಡಿ ತೋಟವನ್ನು ಬೆಳೆಸಿದ್ದಾರೆ. ಅದನ್ನೂ ಕೂಡ ನೋಡಿಕೊಂಡು ಬಂದಿದ್ದೇನೆ. ಬೆಳೆಗೆ ಹಾನಿಯಾಗುತ್ತಿದೆ ಎಂಬುದರ ಬಗ್ಗೆ ಇದುವರೆವಿಗೂ ಸರ್ಕಾರಕ್ಕೆ ಯಾವುದೇ ರೀತಿಯ ದೂರು ಬಂದಿಲ್ಲ. ಇದರಲ್ಲಿ ನಾವು ಯಾವ ಕಾರ್ಖಾನೆಗೂ ಯಾವುದೇ ರೀತಿಯ ರಿಯಾಯಿತಿಯನ್ನು ಕೊಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೋದ ವರ್ಷ ನಿಮ್ಮ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದ್ದೆ. ಈ ಸಾರಿ ನನ್ನ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸ್‌ರವರು ಮಾಡಿದ್ದಾರೆ. ನೀವು ಉತ್ತರವನ್ನು ಪ್ರಾರಂಭ ಮಾಡಿದಾಗಿನಿಂದಲೂ ಇಲ್ಲೇ ಇದ್ದೇನೆ. ಏನಾದರೂ ಹೊಸ ವಿಚಾರಗಳನ್ನು ಪ್ರಕಟಣೆ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಹೊಸದಾಗಿ ತೆರೆಯುವಂತಹ ಉದ್ಯಮದ ಬಗ್ಗೆಯೂ ಕೂಡ ಅವರು ಏನೂ ಹೇಳಿಲ್ಲ. ಆದರೆ ಇವರು ಹೇಳಿದ್ದೇ ಸರಿ ಎಂಬುದಾಗಿ ಹೊರಟಿದ್ದಾರೆ. ನಮಗೆ ಬೇಕಾಗಿರತಕ್ಕಂತಹ ಕಾರ್ಖಾನೆಗಳನ್ನು ಹೆಚ್ಚು ಮಾಡುತ್ತೀರೋ ಅಥವಾ ಇಲ್ಲವೋ ? ಹಿಂದೂಸ್ಥಾನದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗಲೂ ಮಾಡಿದ್ದೇವೆ. ಅದರ ಮುಂಚೆಯೂ ಮಾಡಿದ್ದರು. ಅದರ ನಂತರ ಜನತಾ ಪಾರ್ಟಿ ಸರ್ಕಾರ ಬಂದ ಮೇಲೆ ಏನು ಮಾಡಿದ್ದೀರಿ ಅಂದರೆ, ಹಿಂದೆ ಪ್ರಾರಂಭ ಮಾಡಿದಂತಹ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುತ್ತಿದ್ದೀರಿ. ವಿಶೇಷವಾದ ತಿರುವು ಕೈಗಾರಿಕೆಯಲ್ಲಿ ಬೇಕು ನಮಗೆ. ಸಮಾಜವಾದಿಯಾಗಿರುವಂತಹ ಮಾನ್ಯ ಪಟೇಲ್‌ರವರು ಇದನ್ನು ಗಮನಿಸಬೇಕು. ಮಂಜಾವಾದಿಯಲ್ಲ ನಾನು. ಸಮಾಜವಾದಿ ನಾನು. ನೀವು ಪುನಃ ಅದೇ ದಾರಿಯನ್ನು ಹಿಡಿಯಬೇಡಿ.

ನಾನು ಅವರಿಂದ ನಿರೀಕ್ಷಿಸುವುದು, ಇದರಿಂದ ನನಗೆ ಆಶಾಭಂಗವಾಗಿದೆ. ಈ ಒಂದು ಕಾರ್ಯ ಹಳ್ಳಿಗಾಡಿನಲ್ಲಿ ಪ್ರಾರಂಭವಾಗಬೇಕು, ಗ್ರಾಮ ಮಟ್ಟದಲ್ಲಿ ಹಾಗೂ ಹೋಬಳಿ ಮಟ್ಟದಲ್ಲಿ ಹಣದ ಚಲಾವಣೆ ಆಗತಕ್ಕದ್ದು ಆದರೆ ಅವರ ಜೀವನ ಮಟ್ಟ ಉತ್ತಮವಾಗುತ್ತದೆ. ಪಟ್ಟಣದಲ್ಲಿ ಮಾತ್ರ ಹಣದ ಚಲಾವಣೆ ಇದೆ, ಹಳ್ಳಿಗಾಡಿನಲ್ಲಿ ಇಲ್ಲ. ಡಿಸ್‌ಪರ್ಸಲ್ ಆಫ್ ಇಂಡಸ್ಟ್ರೀಸ್ ಎಂದು ಕೇಂದ್ರ ಸರ್ಕಾರದವರು ರಿಪೋರ್ಟ್ ಕೊಟ್ಟಿದ್ದಾರೆ. ಅದರ ಪ್ರಕಾರ ನಡೆಯಬೇಕೆಂದು ಹೇಳಿದ್ದಾರೆ. ಈ ಬಗ್ಗೆ ನಾನು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ನಾವು ಮಾಡುತ್ತೇವೆಂದು ಉತ್ತರಿಸಿದಿರಿ. ಇದು ಎಷ್ಟರ ಮಟ್ಟಿಗೆ ನಿಮ್ಮಿಂದ ಸಾಧ್ಯವಾಗಿದೆ? ಎಷ್ಟು ಗ್ರಾಮಗಳಿಗೆ ಅನುಕೂಲವಾಗಿದೆ? ಅದನ್ನು ಮಾಡಿದರೆ ಏನಾಗುತ್ತದೆಂದರೆ ಲಕ್ಷಾಧೀಶ್ವರರು ಇರುತ್ತಾರೆ, ಕೋಟ್ಯಾಧೀಶ್ವರರ ಇರುತ್ತಾರೆ, ಹಿಂದುಳಿದ ವರ್ಗದವರು ಇರುತ್ತಾರೆ. ನಿಮ್ಮ ವರ್ಗದವರು ಇರುತ್ತಾರೆ. ಬಡವರು ಇರುತ್ತಾರೆ. ಅವರಲ್ಲಿ ಎಷ್ಟು ಜನರಿಗೆ ಉಪಯೋಗ ಮಾಡಿದ್ದೀರಿ? ಎರಡನೆಯ ಪ್ರಶ್ನೆ ಏನೆಂದರೆ, ಈ ಕಾರ್ಖಾನೆಗಳು ಎಷ್ಟಿವೆ? ಬಹುಪಾಲು ಕಾರ್ಖಾನೆಗಳು ಲುಕ್ಷಾನಿನಲ್ಲಿ ನಡೆಯುತ್ತಿವೆ. ಕಾರಣವೇನೆಂದರೆ ಆಡಿಟ್ ರಿಪೋರ್ಟ್‌ನ್ನು ವರ್ಷ ವರ್ಷ ಕೊಡುವುದಿಲ್ಲ, ವರ್ಷಂಪ್ರತಿ ಕೊಡಲೇಬೇಕೆಂದು ಕಂಪನಿ ಆ್ಯಕ್ಟ್ ಪ್ರಕಾರ ಇದೆ. ನೀವು ಪ್ರಾಸಿಕ್ಯೂಟ್

ಮಾಡುವುದಿಲ್ಲ. ನಿಮ್ಮನ್ನೇ ಪ್ರಾಸಿಕ್ಯೂಟ್ ಮಾಡಬೇಕು, ಅಧಿಕಾರಿಗಳು ಯಾರಿರುತ್ತಾರೆ ಅವರನ್ನು ಪ್ರಾಸಿಕ್ಯೂಟ್ ಮಾಡಬೇಕು, ಈ ವಿಚಾರದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? people who are expert in industries only should be posted and not the IAS cadre officers. IAS Officers are good in one or two lines bnt not in all the fields.

ಶ್ರೀ ಜೆ.ಹೆಚ್. ಪಟೇಲ್.—ಬಸವಲಿಂಗಪ್ಪನವರು ಯಾವುದೇ ಔದ್ಯೋಗಿಕ ನೀತಿಯು ಬೆನಿಫಿಟ್ ಡೆಲ್ಲಿ, ಬಾಂಬೆ, ಕಲ್ಕತ್ತದ ಜನರಿಗೆ ಸಿಗಬಾರದು, ಅದು ಹಳ್ಳಿಗಳಿಗೆ ಹೋಗಬೇಕು ಎಂದು ಹೇಳಿದ್ದಾರೆ. ಇರತಕ್ಕ ವಿಷಮ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಪ್ಲಾಸ್ಟಿಕ್ ಕೊಡ ಸಿಗುವಾಗ ಊರಿನ ಕುಂಬಾರ ಹೇಗೆ ಬದುಕುತ್ತಾನೆ? ಅಲ್ಯೂಮಿನಿಯಂ ಪಾತ್ರೆ ಅಗ್ಗವಾಗಿ ಸಿಗುವಾಗ ಮಣ್ಣಿನ ಮಡಿಕೆಯನ್ನು ಯಾರು ಉಪಯೋಗಿಸುತ್ತಾರೆ? ಅಲ್ಯೂಮಿನಿಯಂ ಪಾತ್ರೆಗಳನ್ನೇ ಎಲ್ಲರೂ ಉಪಯೋಗ ಮಾಡುವಾಗ ಕುಂಬಾರ ಎಲ್ಲಿ ಬದುಕಿ ಉಳಿಯುತ್ತಾನೆ? ಹಳ್ಳಿಯ ಜನರನ್ನು ಬದುಕಿಸುವುದು. ನಿಮ್ಮ ವರ್ಗದವರನ್ನು ಬದುಕಿಸುವುದು ಎಂದರೆ ಏನು ಅರ್ಥ? ಕಮ್ಮಾರ, ಚಮ್ಮಾರ, ಕುಂಬಾರ ಇವರು ಬದುಕುವ ಸ್ಥಿತಿ ಇಲ್ಲ. ಅವರ ಜೀವನದ ಮೂಲ ವಸ್ತುಗಳ ತಳಬುಡ ಕಿತ್ತುಕೊಂಡು ಹೋಗುವಾಗ ಅವರ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮಾತನಾಡುವುದು ಇರ್ರೆಲವೆಂಟ್ ಆಗುತ್ತದೆ,

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಕಂಟಿನ್ಯೂ ಮಾಡುವುದು ಬೇಡ.

ಶ್ರೀ ಜೆ.ಹೆಚ್. ಪಟೇಲ್.—ನಮ್ಮ ರಾಜ್ಯದ ನೀತಿಯಲ್ಲಿ ಬೆಂಗಳೂರಿನಲ್ಲಿರುವವರೇ ಬದುಕಬೇಕು. ದಾವಣಗೆರೆಯಲ್ಲಿ ಇರುವವರೇ ಬದುಕಬೇಕೆಂದು ಇಲ್ಲ. ಅದಕ್ಕೋಸ್ಕರ ಹಳ್ಳಿಹಳ್ಳಿಯಲ್ಲಿ ಸಣ್ಣ ಸಣ್ಣ ಕಾರ್ಖಾನೆಗಳನ್ನು ಮಾಡಿದ್ದೇವೆ. ಅದರಲ್ಲಿ ಇನ್ನೊಂದು ಮಾನ್ಯ ಬಸವಲಿಂಗಪ್ಪನವರಿಗೆ ಗೊತ್ತಿದೆ. ಅದು ಅಗ್ರಿಕಲ್ಚರ್ ನಾವೆಲ್ಲ ಅಗ್ರಿಕಲ್ಚರ್ ಕಲ್ಚರ್‌ನವರು. ನಮ್ಮ ಜನರಿಗೆ ಸ್ಪ್ಯಾನರ್ ಹಿಡಿದುಕೊಂಡು ಸಣ್ಣ ಕೆಲಸ ಮಾಡಬೇಕೆಂದರೆ ಆಗುವುದಿಲ್ಲ. ಎಲ್ಲರೂ ಸರ್ಕಾರೀ ನೌಕರಿ ಕೇಳುತ್ತಾರೆ, ಗುಡಿಸಲು ಹಾಕಿಕೊಂಡು ಸೈಕಲ್ ರಿಪೇರಿ ಮಾಡಿ ಬದುಕಬಹುದು. ಸರ್ಕಾರೀ ನೌಕರ ಗುಮಾಸ್ತಗಿರಿ ಮಾಡುತ್ತೇವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ ಅದು ಹೋಗಬೇಕೆಂದರೆ ಸಾಕಷ್ಟು ಇಂಡಸ್ಟ್ರಿಗಳು ಆಗಬೇಕು. ನಿಮ್ಮ ವರ್ಗದವರೇ ಇರಲಿ, ಹಿಂದುಳಿದವರೇ ಇರಲಿ, ಯಾರೇ ಇರಲಿ. ರೂರಲ್ ಇಂಡಸ್ಟ್ರೀಸ್ ಬಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಂದರೆ ಮಾತ್ರ ಕ್ರಮೇಣ ನಮ್ಮ ಸಮಸ್ಯೆ ಬಗೆಹರಿಯುತ್ತದೆ. ಅದು ಬಿಟ್ಟು ಎಲೆಕ್ಟ್ರಾನಿಕ್ಸ್‌ಗೆ ಹೋದರೆ ಆಗುವುದಿಲ್ಲ. ಕಂಪನಿ ಆ್ಯಕ್ಟ್ ವಿಚಾರ ನನಗೆ ಗೊತ್ತಿಲ್ಲ. ಅದು ಇದ್ದರೆ ಕಮೀಷನರ್ ಮತ್ತು ಸೆಕ್ರಟರಿಯವರು ಕ್ರಮ ತೆಗೆದುಕೊಳ್ಳುತ್ತಾರೆ. ಪ್ರಾಸಿಕ್ಯೂಟ್ ಮಾಡುವುದಕ್ಕೆ ಪ್ರಾವಿಷನ್ ಇದ್ದರೆ ಮಾಡದೆ ಬಿಡುವುದಿಲ್ಲ. ಲೀಗಲ್ ಅಥವಾ ಬೇರೆ ಯಾವುದೇ ಹರ್ಡಲ್ಸ್ ಇದ್ದರೆ ಇರಬಹುದು. ಎಕ್ಸ್‌ಪರ್ಟ್ಸ್ ಬಗ್ಗೆ ಆಗಲೇ ಹೇಳಿದ್ದೇನೆ. ಐ.ಎ.ಎಸ್, ಅಂದ ತಕ್ಷಣ ಕೆಲಸಕ್ಕೆ ಬಾರದವರು ಎಂದು ಅಲ್ಲ. ಈ ಉದ್ದಿಮೆಗೆ ಬೇಕಾಗತಕ್ಕವರು ಇದ್ದರೆ, ಈ ಉದ್ದಿಮೆಯಲ್ಲಿರತಕ್ಕ ತಾಂತ್ರಿಕತೆಯನ್ನು ಅರಿತು ಕೆಲಸ ಮಾಡತಕ್ಕವರು ಇದ್ದರೆ ಅಂಥವರನ್ನು ಪೋಸ್ಟ್ ಮಾಡುತ್ತೇವೆ. ಯಾರನ್ನೋ ತೆಗೆದುಕೊಂಡು ಹೋಗಿ ಯಾವುದೋ ಕಾರ್ಖಾನೆಯಲ್ಲಿಟ್ಟರೆ ಆಗುವುದಿಲ್ಲ ಎಂಬುದನ್ನು ಒಪ್ಪುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಉತ್ತರ ವಿವರಣೆ ಮುಗಿಯಿತು. ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ—

> ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೫,೭ ಮತ್ತು ೮ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು,

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ–೫–ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬.೩೮,೪೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೭೭.೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ–೭–ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨, ೫೪, ೩೫೦೦೨ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫ ೭೭ ೭೫ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ ೮–ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೦ ೦೫ ೭೦ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೦೧ ೧೦೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಸಾರಾಯಿ ಹಾಗೂ ಸೇಂದಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ

೧೩೧೦ ಶ್ರೀ ಕೆ.ಬಿ. ಶಾಣಪ್ಪ (ಷಹಬಾದ್)—ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ.

(ಅ) ೧೯೮೪–೮೫ರಲ್ಲಿ ಸರ್ಕಾರಕ್ಕೆ ಎಷ್ಟು ಹಣ ಬಾಡಿಗೆ ರೂಪದಲ್ಲಿ ಸಾರಾಯಿ ಮತ್ತು ಶೇಂದಿಯಿಂದ ಬರಬೇಕಾಗಿತ್ತು.

(ಆ) ಇದನ್ನು ಪಾವತಿ ಮಾಡಿರುವ ಗುತ್ತೇದಾರರ ಸಂಖ್ಯೆ ಎಷ್ಟು ಹಾಗೂ ಪಾವತಿ ಮಾಡದೆ ಇರುವ ಗುತ್ತೇದಾರರ ಹೆಸರುಗಳನ್ನು (ಜಿಲ್ಲಾವಾರು ಸೇಂದಿಗಾಗಿ ಮತ್ತು ತಾಲ್ಲೂಕುವಾರು ಸಾರಾಯಿಗಾಗಿ ಕೊಡುವುದು)

(ಇ) ಈ ಹಣ ಪಾವತಿ ಮಾಡದೆ ಇರುವ ಗುತ್ತೇದಾರರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

(ಈ) ಗುಲ್ಬರ್ಗದಲ್ಲಿ ೧೯೮೫–೮೬ರ ಸಾಲಿನ ಹಣ ಪಾವತಿ ಮಾಡಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇಂಥವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು.